ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


19 ಜುಲೈ 2017 ಪುಟ 16 ರೂ. 15/-



ಜುನೈದನ ಕಗ್ಗೊಲೆ ನಮ್ಮನ್ನೇಕೆ ಕಾಡಬೇಕು?




ಹಾಕಿದ ಉರುಳಿಗೆ ಹಾರದ ಬಣ್ಣ



ಹೇಳಲೇಬೇಕಾದ ಅಪ್ರಿಯ ಸತ್ಯಗಳು

ಮಂಡ್ಯ:
ೖಷುಗರ್‌ಗೆ ಬೇಕಿದೆ
ಸರ್ಕಾರದ ಸಹಾಯಹಸ್ತ





ಶಿರಸಿ
ಹೆಗಡೆಜೀ ಮೊಮ್ಮಗನ ಅದೃಷ್ಟ ಖುಲಾಯಿಸೀತಾ?!

ರೋಣ:
ದೊಡ್ಡಮೇಟಿ ಎಂಟ್ರಿ
ಕಂಗಾಲಾದ 'ಪಾಟೀಲ'ರ 'ಬಂಡಿ'



ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಹಿಂದಿಯ ಮಹಾನ್ ಲೇಖಕ ಅಜ್ಞೇಯ ಅವರ ಪೂರ್ಣ ಹೆಸರು ಸಚ್ಚಿದಾನಂದ ಹೀರಾನಂದ ವಾತ್ಸಾಯನ.
ಅವರು 1911ರ ಮಾರ್ಚ್ 7ರಂದು ಉತ್ತರ ಪ್ರದೇಶದ ಖುಶಿನಗರದ ಕಸ್ಯಾದಲ್ಲಿ ಜನಿಸಿದರು. ನವದೆಹಲಿಯಲ್ಲಿ
ತಮ್ಮ 76ನೇ ವಯಸ್ಸಿನಲ್ಲಿ ತೀರಿಹೋದ ಅಜ್ಞೇಯ ಅವರು ಕ್ರಾಂತಿಕಾರಿ, ಸಾಹಿತಿ, ಕಾದಂಬರಿಕಾರ ಹಾಗೂ
ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದರು. ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಗೋಲ್ಡನ್ ರೀಥ್
ಪ್ರಶಸ್ತಿ ಮತ್ತು ಭಾರತ ಭಾರತಿ ಪ್ರಶಸ್ತಿ ಮೊದಲು ಮಾಡಿ ಅನೇಕ ಪ್ರಶಸ್ತಿ-ಪುರಸ್ಕಾರಗಳು ಲಭಿಸಿದ್ದವು. ಹಿಂದಿ
ಕಾವ್ಯ ಕ್ಷೇತ್ರದಲ್ಲಿ ನವ್ಯ ಪರಂಪರೆಯ ಹರಿಕಾರರೆನಿಸಿಕೊಂಡರು. ಅವರು ನಿಜಕ್ಕೂ ಕತೆ ಕಾದಂಬರಿ, ವಿಮರ್ಶೆ ಮತ್ತು
ಪತ್ರಿಕೋದ್ಯಮಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಭಗತ್ ಸಿಂಗ್, ಸುಖದೇವ, ಆಜಾದ್ ಮತ್ತು
ಯಶಪಾಲರೊಂದಿಗೆ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದರು. ಸ್ವಾತಂತ್ರ್ಯವೇನೋ ಸಿಕ್ಕಿತು. ಸ್ವಾತಂತ್ರ್ಯ
ಹೋರಾಟದ ಉದ್ದಕ್ಕೂ ಅಸಂಖ್ಯಾತ ಸ್ವಾತಂತ್ರ್ಯಪ್ರೇಮಿಗಳು ತಮ್ಮ ಪ್ರಾಣ ತೆತ್ತರು. ಆದರೆ ಕೊನೆಗೂ
ಮಾನವೀಯತೆಯ ಕಗ್ಗೊಲೆ ಮಾಡಿಯೇ ಭಾರತೀಯರು ಸ್ವತಂತ್ರ ಭಾರತದ ಪ್ರಜೆಗಳಾದರು. ವಿಭಜನೆಯ ಆ
ಕರಾಳದಿನಗಳಲ್ಲಿ ಮನುಷ್ಯ ಹೇಗೆ ವರ್ತಿಸಿದ ಎನ್ನುವುದನ್ನು ಅವರ ಈ ಕತೆ ಪರಿಣಾಮಕಾರಿಯಾಗಿ ನಿರೂಪಿಸಿದೆ.

ಪ್ರತೀಕಾರ



ಕತೆ

ಕತ್ತಲು ತುಂಬಿದ ಡಬ್ಬಿಯಲ್ಲಿ ಲಗುಬಗೆಯಿಂದ ಸಾಮಾನುಗಳನ್ನು ತುರುಕಿ ಬಗಲಲ್ಲಿದ್ದ ಆಬೀದ್‌ನನ್ನು ಕಿಟಕಿಯೊಳಗಿಂದ ಸೀಟಿನ ಮೇಲೆ ಕುಕ್ಕರಿಸಿ, ಹಿರಿಯ ಮಗಳು ಜುಬೇದಾಳನ್ನು ಹತ್ತಿಸಿ ಸ್ವತಃ ಹತ್ತಿದ ಸುರೈಯಾ ಸ್ವತಃ ಒಳಗೆ ನುಗ್ಗಿ ಗಾಡಿ ಚಲಿಸತೊಡಗುತ್ತಲೇ ದೀರ್ಘ ನಿಟ್ಟುಸಿರು ಬಿಟ್ಟು ಪಾಪವರಿಯದ ಸರ್ವರ ಪಾಲಕ ಅಲ್ಲಾಹುಅನ್ನು ನೆನೆಯುವಷ್ಟರಲ್ಲಿ ಡಬ್ಬಿಯ ಇನ್ನೊಂದು ಮೂಲೆಯಲ್ಲಿ ಚಾದರ ಹೊದ್ದು ಕುಳಿತುಕೊಂಡಿದ್ದ ಎರಡು ಆಕೃತಿಗಳನ್ನು ನೋಡಿದಳು. ಅವರು ತಮ್ಮ ಮುಸ್ಲಿಂ ಸೋದರರಲ್ಲ, ಸಿಖ್ಖರಾಗಿದ್ದರು. ಚಲಿಸುವ ಗಾಡಿಯಲ್ಲಿ ಸ್ಟೇಶನ್‌ನ ದೀಪಗಳಿಂದ ಆಗಾಗ ಒಳಗೆ ಬೀಳುತ್ತಿದ್ದ ಬೆಳಕಿನ ಸೆಳಕಿನಲ್ಲಿ ಆ ಸಿಖ್ಖರ ರೆಪ್ಪೆ ಬಡಿಯದ ನಿಶ್ಚಲ ಕಣ್ಣುಗಳಲ್ಲಿ ಅದೇನೋ ಅಮಾನುಷವಾದದ್ದನ್ನು ಕಂಡಳು. ಅವರ ದೃಷ್ಟಿ ಅವಳನ್ನು ನೋಡಿದರೂ ಅವಳ ದೇಹದ ಮೇಲೆ ನಿಂತು ಬಿಡುತ್ತಿರಲಿಲ್ಲ ಆದರೆ ಅದನ್ನು ಭೇದಿಸುತ್ತ ನೇರವಾಗಿ ಹೋಗಿ ಬಿಡುತ್ತಿತ್ತು. ಅವುಗಳಲ್ಲಿ ಹರಿತವಾದ ಗರಗಸವಿದೆಯೇನೋ, ಯಾರೂ ಅವನ್ನು ಸ್ಪರ್ಶಿಸಲಾರರು, ಸ್ಪರ್ಶಿಸಿದರೆ ಸಾಕು ತುಂಡಾಗುತ್ತಾರೆ ಎನಿಸಿತು. ಅದು ಅನುಭವಕ್ಕೆ ಬರಬೇಕೆಂದರೆ ಬೆಳಕು ಸಾಕಾಗುತ್ತಿರಲಿಲ್ಲ, ಆದರೆ ಸುರೈಯಾ ತನ್ನ ಕಲ್ಪನೆಯ ದೃಷ್ಟಿಯಿಂದ ನೋಡತೊಡಗಿದಳು. ಅವರ ಕಣ್ಣಲ್ಲಿ ಕೆಂಪಾದ ಗೆರೆಗಳು ಮೂಡಿದ್ದವು... ಅವಳು ಭಯಭೀತಳಾಗಿ ಕಂಪಿಸತೊಡಗಿದಳು. ಗಾಡಿ ವೇಗವಾಗಿ ಚಲಿಸುತ್ತಿತ್ತು ಇಳಿದು ಹೋಗಿ ಬೇರೆ ಡಬ್ಬಿಯಲ್ಲಿ ಕುಳಿತುಕೊಳ್ಳುವುದು ಅಸಾಧ್ಯವಾಗಿತ್ತು, ಜಿಗಿದು ಬಿಡುವುದು ಒಂದೇ ದಾರಿ ಇತ್ತು, ಆದರೆ ಇಷ್ಟು ವೇಗವಿರುವಾಗ ಮಕ್ಕಳು ಮರಿಯೊಂದಿಗೆ ಹೊರಗೆ ಜಿಗಿಯುವುದಕ್ಕಿಂತ ಬೇರೆ ಪ್ರಯಾಣಿಕರಿಂದ ಹೊರಗೆ ಎಸೆಯಲ್ಪಡುವುದು ತೀರ ಕೆಟ್ಟದ್ದೇ? ಹೀಗೆ ಯೋಚಿಸುತ್ತಲೇ ಮೇಲೆ ತೂಗಾಡುತ್ತಿದ್ದ ಅಪಾಯದ ಸರಪಳಿಯನ್ನು ದಿಟ್ಟಿಸತೊಡಗಿದ ಅವಳು ಏನು ಮಾಡುವುದೆಂದು ತೋಚದೆ ಕುಳಿತುಬಿಟ್ಟಳು... ಮುಂದೆ ಸ್ಟೇಶನ್‌ದಲ್ಲಿ ನೋಡಿದರಾಯಿತು... ಒಂದು ಸ್ಟೇಶನ್‌ವರೆಗಂತೂ ಅಪಾಯವಿಲ್ಲ... ಕನಿಷ್ಠ ಇಲ್ಲಿಯತನಕ ಈ ಕಡೆ ಯಾವುದೇ ದುರ್ಘಟನೆ ಸಂಭವಿಸಿಲ್ಲ...

"ತಾವು ಎಲ್ಲಿಗೆ ಹೋಗುವಿರಿ?"

ಸುರೈಯಾ ಬೆಚ್ಚಿದಳು. ಹಿರಿಯ ಸಿಖ್ಖ ಕೇಳುತ್ತಿದ್ದ, ಆದೆಷ್ಟು ಭಾರವಾಗಿತ್ತು ಅವನ ದನಿ. ಅವನು ಬಹುಶಃ ಎರಡು ಸ್ಟೇಶನ್ ನಂತರ ತನ್ನನ್ನು ಕೊಂದು ಟ್ರೇನ್‌ದಿಂದ ಹೊರಗೆ ಎಸೆದುಬಿಡುತ್ತಾನೆ. ಅವನು ತನ್ನನ್ನು ಇಲ್ಲಿ 'ತಾವು' ಎಂದು ಸಂಬೋಧಿಸುತ್ತಿದ್ದಾನೆ. ಈ ವಿಪರ್ಯಾಸದ ಬಗ್ಗೆ ಯೋಚಿಸುವುದರಲ್ಲೆ ಮಗ್ನಳಾಗಿ ಬಿಟ್ಟಳು. ಉತ್ತರಿಸುವುದರಲ್ಲಿ ವಿಳಂಬವಾಯಿತು. ಸಿಖ್ ಮತ್ತೆ ಕೇಳಿದ "ಎಲ್ಲಿಯವರೆಗೆ ತಮ್ಮ ಪ್ರಯಾಣ?"

ಸುರೈಯಾ ಬುರ್ಖಾ ತೆಗೆದು ಹಿಂದೆ ಸರಿಸಿಕೊಂಡಿದ್ದಳು. ಸಹಜವಾಗಿಯೇ ಅವಳು ಮುಖದ ಮೇಲೆ ಅದನ್ನ ಎಳೆದುಕೊಳ್ಳುತ್ತಾ "ಇಟಾವಾಗೆ ಹೋಗತಾ ಇದ್ದೀನಿ" ಎಂದಳು.

ಸಿಖ್ ಒಂದುಕ್ಷಣ ಯೋಚನೆ ಮಾಡಿ "ಜೊತೆಯಲ್ಲಿ ಯಾರೂ ಇಲ್ವೆ?" ಎಂದು ಕೇಳಿದ.

ಆ ಕ್ಷಣ ಮಾತ್ರದ ವಿಳಂಬವನ್ನು ಗಮನಿಸಿದ ಸುರೈಯಾ ಯೋಚನೆಗೆ ತೊಡಗಿದಳು... ಎಷ್ಟು ಸಮಯ ಹಿಡಿಯಬಹುದು ನನ್ನನ್ನು ಕೊಲ್ಲುವುದಕ್ಕೆ... ಓ ದೇವರೇ ಮುಂದಿನ ಸ್ಟೇಶನ್‌ದಲ್ಲಿ ಬೇರೆ ಯಾರಾದರೂ ಪ್ರಯಾಣಿಕರು ಹತ್ತಬಾರದೆ... ಜೊತೆಗೇ ಅವನು ಈ ಮನುಷ್ಯನ ಬಗ್ಗೆ ಎಚ್ಚರದಿಂದಿರಲಿ ಎಂದು ಹೇಳಬೇಕು... ಅಷ್ಟಕ್ಕೂ ಈ ಕಾಲದಲ್ಲಿ ಜೊತೆ ಕುಳಿತುಕೊಳ್ಳಬಾರದೆಂದರೆ ಅದೆಂತಹ ಪ್ರಯಾಣ? ಇದ್ದಕ್ಕಿದ್ದಂತೆ ಯಾರಾದರೂ ಚಾಕುವಿನಿಂದ ಇರಿದು ಬಿಟ್ಟರೆ? ಮುಂದಿನ ಸ್ಟೇಶನ್‌ವರೆಗೆ ಕುಳಿತುಕೊಂಡರಾಯಿತು ಎಂದು ಮತ್ತೆ ಯೋಚನೆಗೆ ತೊಡಗಿದಳು... ಕಿಟಕಿ ಎದುರು ನಿಂತು ಯಾರಾದರೂ "ಏನಾದರೂ ಬೇಕಿತ್ತೆ?" ಎಂದು ಕೇಳಬಹುದು...

"ನನ್ನ ಜೊತೆ ನನ್ನ ಸೋದರರಿದ್ದಾರೆ. ಬೇರೆ ಡಬ್ಬಿಯಲ್ಲಿ..." ಎಂದಳು.

ಆಬೀದ್ ಗಾಬರಿಗೊಂಡು ಹೇಳಿದ "ಎಲ್ಲಿದ್ದಾರೆ ಅಮ್ಮೀ? ಅವರಂತೂ ಲಾಹೋರ್‌ಗೆ ಹೋಗಿದ್ದಾರಲ್ಲ."

ಸುರೈಯಾ ಬಹಳ ಜೋರಾಗಿ ಬೆದರಿಸಿ "ಸುಮ್ಮನಿರು" ಎಂದಳು.

ಸ್ವಲ್ಪ ಹೊತ್ತಿನ ನಂತರ ಸಿಖ್ "ಇಟಾವಾದಲ್ಲಿ ನಿಮ್ಮವರು ಯಾರಾದರೂ ಇದ್ದಾರೆಯೆ" ಎಂದು ಕೇಳಿದ.

"ಹೌದು."

ಸಿಖ್ ಮೌನವಾದ. ಸ್ವಲ್ಪ ಸಮಯದ ನಂತರ ಪುನಃ ಕೇಳಿದ "ತಮ್ಮ ಸೋದರ ತಮ್ಮೊಂದಿಗೆ ಕುಳಿತುಕೊಂಡಿರಬೇಕಿತ್ತು, ಇಂತಹ ಸಂದರ್ಭಗಳಲ್ಲಿ ಯಾರಾದರೂ ತಮ್ಮವರಿಂದ ದೂರಾಗಿ ಬೇರೆ ಕಡೆ ಕುಳಿತುಕೊಳ್ಳುತ್ತಾರೆಯೆ?"

ಸುರೈಯಾ ಒಳಗೊಳಗೇ ಅಂದುಕೊಂಡಳು "ಈ ಹಾಳಾದವನಿಗೆ ನನ್ನೊಂದಿಗೆ ಯಾರೂ ಇಲ್ಲ ಎನ್ನುವುದು ಗೊತ್ತಾಗಿ ಬಿಟ್ಟಿದೆಯೆ?"

ಸಿಖ್ ತನ್ನಷ್ಟಕ್ಕೇ ಮಾತನಾಡಿಕೊಳ್ಳುತ್ತಿದ್ದಾನೇನೋ ಎನ್ನುವಂತೆ "ಕಷ್ಟ ಕಾಲದಲ್ಲಿ ಯಾರಿಗೂ ಯಾರಿಲ್ಲ... ಎಲ್ಲರೂ ನಮ್ಮವರೇ..." ಎಂದ.

ಗಾಡಿಯ ವೇಗ ಕಡಿಮೆಯಾಯಿತು. ಪುಟ್ಟ ಸ್ಟೇಶನ್. ಇಳಿದುಬಿಡಲೆ? ಕುಳಿತುಬಿಡಲೆ? ಸುರೈಯಾ ಒಂದೂ ತಿಳಿಯದಾಗಿ ಕೂತು ಬಿಟ್ಟಳು.

ಇಬ್ಬರು ವ್ಯಕ್ತಿಗಳು ಡಬ್ಬಿ ಏರಿ ಬಂದರು. ಸುರೈಯಾ ಮನಸ್ಸಿನೊಳಗೇ ಅಂದುಕೊಂಡಳು "ಹಿಂದೂ." ಆಗ ಅವಳು ನಿಜವಾಗಿಯೂ ಭಯಭೀತಳಾದಳು. ಗಂಟು ಗದಡಿ ಎಲ್ಲ ಒಟ್ಟುಗೂಡಿಸತೊಡಗಿದಳು.

ಸಿಖ್ "ತಾವು ಇಳಿದುಬಿಡುವಿರಾ?" ಎಂದು ಕೇಳಿದ.

"ಹೋಗಿ ಸೋದರನ ಜೊತೆ ಕುಳಿತುಕೊಳ್ಳಲೆ ಎಂದು ಯೋಚಿಸತೊಡಗಿದ್ದೇನೆ." ಮನುಷ್ಯನದೂ ಎಂತಹ ಜೀವ? ಇಂತಹ ಸಮಯದಲ್ಲೂ ಸುಳ್ಳಿನ ಅಡ್ಡಗೋಡೆ ಕಟ್ಟಿಕೊಂಡು ಇರಬಯಸುತ್ತಾನೆ? ಎಂತಹ ಪೊಳ್ಳು ತಡೆಗೋಡೆ? ಡಬ್ಬಿ ಬದಲಾಯಿಸಲು ಸ್ವತಃ ಸೋದರನೇ ಬರಬಹುದಿತ್ತಲ್ಲ? ಎಲ್ಲಿಂದ ಬಂದಾನು? ಇದ್ದಿದ್ದರಲ್ಲವೆ...

ಸಿಖ್ "ತಾವು ಕುಳಿತುಕೊಂಡಿರಿ... ತಾವು ಹೆದರಬೇಕಿಲ್ಲ ನಾನು ತಮ್ಮನ್ನು ಸೋದರಿ ಎಂದು ಭಾವಿಸಿದ್ದೇನೆ... ಇವರು ನನ್ನ ಮಕ್ಕಳೇ... ತಮ್ಮನ್ನು ಸುರಕ್ಷಿತವಾಗಿ ಅಲಿಗಢ ತಲುಪಿಸುತ್ತೇನೆ. ಮುಂದೆಯಂತೂ ಯಾವುದೇ ಅಪಾಯವಿಲ್ಲ, ಅಲ್ಲಿಂದ ತಮ್ಮ ಬಾಂಧವರು ಸಹ ಗಾಡಿ ಹತ್ತುವರು" ಎಂದ.

ಒಬ್ಬ ಹಿಂದೂ ಹೇಳಿದ "ಸರದಾರಜಿ, ಹೋಗಬೇಕೆಂದರೆ ಹೋಗಲಿ ಬಿಡ್ರಿ. ನಿಮಗೇನಾಗಬೇಕಿದೆ?"

ಸುರೈಯಾಗೆ ಸಿಖ್‌ನ ಮಾತೂ ಅರ್ಥವಾಗಲಿಲ್ಲ, ಆ ಹಿಂದೂವಿನ ಟಿಪ್ಪಣಿಯನ್ನು ಹೇಗೆ ಅರ್ಥೈಸಿಕೊಳ್ಳಬೇಕೊ ತಿಳಿಯದಾಯಿತು. ಆದರೆ ಗಾಡಿ ಹೊರಟೇಬಿಟ್ಟಿತು. ಆಕೆ ತೀರ್ಮಾನಿಸಿದಳು. ಅವಳು ಕುಳಿತುಬಿಟ್ಟಳು.

ಹಿಂದೂ ಕೇಳಿದ "ಸರದಾರಜಿ, ತಾವು ಪಂಜಾಬದಿಂದ ಬಂದಿರಾ?"

"ಹೌದು."

"ನಿಮ್ಮ ಮನೆ ಎಲ್ಲಿದೆ?"

"ಶೇಖುಪುರಾದಲ್ಲಿತ್ತು, ಈಗ ಇದೇ ಎಂದು ತಿಳಿಯಿರಿ... "

"ಇದೇ? ಹಾಗೆಂದರೇನು?"

"ನಾನೆಲ್ಲಿರುತ್ತೇನೆಯೋ ಅದೇ ನನ್ನ ಮನೆ. ರೈಲಿನ ಡಬ್ಬಿಯ ಒಂದು ಮೂಲೆ."

ಹಿಂದೂ ತನ್ನ ದನಿ ಮೆಲುವಾಗಿಸಿದ. ಗ್ಲಾಸಿನಲ್ಲಿ ಒಂದಿಷ್ಟು ಸಹಾನುಭೂತಿಯನ್ನೇ ಸುರುವುತ್ತಿದ್ದಾನೇನೋ ಎನ್ನುವಂತೆ ಸಿಖ್ ಎದುರು ಚಾಚುತ್ತಾ "ಹಾಗಾದರೆ ತಾವು ನಿರಾಶ್ರಿತರು...?"

ಸಿಖ್ ಆಚೆ ದೂಡಬಿಡಬಯಸಿದ್ದನೇನೋ. "ಇಲ್ಲ, ನಾನು ಕುಡಿಯುವುದಿಲ್ಲ" ಎಂದು ಹುಸಿ ನಗೆ ಬೀರಿದ. ಅದು ಹಿಂದೂವಿನ ಕಿವಿಗಳು ಗ್ರಹಿಸಲಿಲ್ಲ. "ಆಯಿತು" ಎಂದ.

ಹಿಂದೂ ಮಹಾಶಯ ಸ್ವಲ್ಪ ಹೆಚ್ಚಿನ ಆಸಕ್ತಿಯಿಂದ "ನಿಮ್ಮ ಮನೆ ಮಂದಿ ಮೇಲೆ ತುಂಬ ದೌರ್ಜನ್ಯ ನಡೆದಿರಬಹುದು..."

ಸಿಖ್‌ನ ಕಣ್ಣಲ್ಲಿ ಕ್ಷಣಾರ್ಧ ಕಿಡಿ ಹೊತ್ತಿಕೊಂಡಿತು. ಆದರೆ ಅವನು ಈ ಪ್ರಚೋದನೆಗೂ ಒಳಗಾಗಲಿಲ್ಲ, ಮೌನವಾದ. ಹಿಂದೂ ಸುರೈಯಾಳತ್ತ ನೋಡುತ್ತಾ "ದಿಲ್ಲಿಯಲ್ಲಿ ಕೆಲವರು ಹೇಳುತ್ತಿದ್ದರು... ಅವರು ಅಲ್ಲಿ ಎಂತಹ ದೌರ್ಜನ್ಯವೆಸಗಿದರು ಹಿಂದೂಗಳ ಮೇಲೆ... ಅವರು ಎಂತೆಂತಹ ಸಂ
ನಿರೂಪಿಸಿದರು... ಹೇಗೆ ಹೇಳಲಿ... ಆದಿ
ನಾಚಿಕೆಯಾಗುತ್ತದೆ... ಮಹಿಳೆಯರನ್ನು ಬೆತ್ತ

ಸಿಖ್ ತನ್ನ ಜೊತೆ ಮೂಟೆಯಾಗಿ ಕುಳಿ
"ಪುಟ್ಟ, ನೀನು ಮೇಲೆ ಹೋಗಿ ಮಲಗಿಕೊ
ಸ್ಪಷ್ಟವಾಗಿ ಅವನು ಆ ಸಿಖ್‌ನ ಮಗನಾಗಿರಬೇ
ಪ್ರೈಮುರಿಯುತ್ತಾ, ಆದೇಶದನ್ವ
ಹದಿನಾರು-ಹದಿನೇಳು ವಯಸ್ಸಿನ ನೀಳಾದ
ನೀಟಾಗಿಸಿ ಮೇಲಿನ ಬರ್ತ್ ಕಡೆ ನೋಡಿದ.
ಕಣ್ಣಲ್ಲೂ ತಂದೆಯ ಕಣ್ಣುಗಳ ಪ್ರತಿಬಿಂಬವೇ ಒ
ಅವನು ಮೇಲಿನ ಬರ್ತ್ ಏರಿದವನೇ ಮ
ಸಿಖ್ ತನ್ನ ಕಾಲು ಚಾಚಿ ಕಿಟಕಿ
ನೋಡತೊಡಗಿದ.

ಹಿಂದೂ ಮಹಾಶಯನ ಮಾತು ಅರ್ಧ
ಬಿಟ್ಟಿತ್ತು. ಅವನು ಮಾತು ಮುಂದುವರಿಸಿದ. "
ಎದುರೇ ಹೆಣ್ಣು ಮಕ್ಕಳು, ಸೋದರಿಯರ
ಮಾಡಿ..."

ಸಿಖ್ ಹೇಳಿದ "ಅಣ್ಣಾವ್ರೆ, ನಾವು
ನಮಗೇ ಹೇಳುತ್ತಿದ್ದೀರಲ್ಲ..." ಈ ಸಲದ
ಮೊದಲಿಗಿಂತ ಸ್ಪಷ್ಟವಾಗಿತ್ತು, ಆದರೆ ಆ
ಪುನಃ ಕೇಳಲಿಲ್ಲ, ಗತ್ಯಂತರವಿಲ್ಲದವನಂತೆ ತೆ
ಹೇಳುವುದು ಸರಿಯೇ... ಅಷ್ಟಕ್ಕೂ ನಾವು
ನೋವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯ? ಸ
ವ್ಯಕ್ತಪಡಿಸಬಲ್ಲೆವು. ಆದರೆ ನೋವೇ ಇಷ್ಟು ಘೋ
ಸಹಾನುಭೂತಿಯಿಂದ ಏನು ಪ್ರಯೋಜ
ಅರ್ಥವಾಗುತ್ತಿಲ್ಲ ನೀವೇ ಹೇಳಿರಿ. ಆ ಸಿಖ್
ಎಂತಹ ಆಘಾತವಾಗಿರಬಹುದು ಎನ್ನುವುದ
ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು
ಅವರ ಕಣ್ಣೆದುರೇ ಅವರ ಸೊಸೆಯ
ಸೋದರಿಯರನ್ನು..."

ಸಿಖ್ ಸಂಯಮದಿಂದ ಕಂಪಿಸುವ
"ಎಲ್ಲರಿಗೂ ಸೊಸೆಯಂದಿರು ಸೋದರಿಯರು
ಅಣ್ಣಾವರೆ" ಎಂದು ಹೇಳಿದ.

ಹಿಂದೂ ಮಹಾಶಯರು ಸ್ವಲ್ಪ ಆಶ್ಚರ್ಯ
ಸರದಾರನ ಮಾತಿನ ಆಶಯವನ್ನು ತಿಳಿಯದಾದ
ಬಹಳ ಹೊತ್ತಿನವರೆಗೆ ಏನನ್ನೂ ಹೇಳದೆ ಮ
"ಈಗಂತೂ ಹಿಂದೂ-ಸಿಖ್‌ರು ಜಾಗ್ರತರಾಗಿ
ತೀರಿಸಿಕೊಳ್ಳುವುದು ಸರಿಯಲ್ಲ, ಆದರೆ
ಸಹಿಸಿಕೊಳ್ಳುವುದು? ಈ ದಿಲ್ಲಿಯಲ್ಲಿ ಅವರು
ಹೋರಾಡಿದರು. ಕೆಲ ಸಂದರ್ಭಗಳಲ್ಲಿ ಇಟ್ಟಿಗೆ
ಕಲ್ಲು ಎನ್ನುವ ಮಾತನ್ನು ನಿಜಗೊಳಿಸಲಾ
ಹೇಳಬೇಕೆಂದರೆ ಇದೇ ಸರಿಯಾದ ಪರಿಹಾ
ಕೇಳಿದ ಪ್ರಕಾರ ಕರೋಲ್‌ಬಾಗ್‌ದಲ್ಲಿ
ಮುಸಲ್ಮಾನ್ ಡಾಕ್ಟರ್‌ನ ಮಗಳನ್ನು..."

ಈ ಸಲ ಸಿಖ್‌ನ ಮಾತು ಪ್ರತಿಧ್ವನಿಸ
ಆದರೆ ಸ್ಪಷ್ಟವಾದ, ಬಿಕ್ಕಳಿಕೆಯ ನೋವು
"ಅಣ್ಣಾವ್ರೇ, ಹೆಣ್ಣುಮಕ್ಕಳ ಮಾನ್ಭಂಗ ಎಲ್ಲರಿಗೂ
ವಿಷಯವೇ." "ಓ, ತಂಗಿ..." ಎಂದವನೇ ಸು
ಸಂಬೋಧಿಸಿ "ಕ್ಷಮಿಸಬೇಕು. ತಾವು
ಕೇಳಬೇಕಾಯಿತು" ಎಂದ.

ಹಿಂದೂ ಮಹಾಶಯ ತಪ್ಪು
ಸಿಕ್ಕಿಹಾಕಿಕೊಂಡವನಂತೆ "ಏನು... ಏನು...
ಇವರನ್ನು ಲಕ್ಷದಲ್ಲಿಟ್ಟುಕೊಂಡು ಏನೂ
ತೊದಲು ಮಾತುಗಳನ್ನು ಆಡಿದ. ನಂತರ
ಸಾವರಿಸಿಕೊಂಡು ಗಟ್ಟಿ ದನಿಯಲ್ಲಿ "ಇವರು
ಹೊರಟಿದ್ದಾರೋ?" ಎಂದ.

ಸಿಖ್ ಇನ್ನಷ್ಟು ನಿರ್ಭಾವುಕನಾಗಿ ಹೇಳಿ
ಅಲಿಗಢ್‌ವರೆಗೆ ಇವರನ್ನು ತಲುಪಿಸುತ್ತೇನೆ

ಸುರೈಯಾಳ ಅಂತರಂಗವನ್ನುದ್ದೇಶಿಸಿ
ಹೇಳಿದಂತಾಯಿತು. 'ಈ ಸಭ್ಯಗೃಹಸ್ಥ
ಹೊರಟಿದ್ದಾನೆ! ಅಲಿಗಢ... ಅಲಿಗಢ..."
ಒಟ್ಟುಗೂಡಿಸಿಕೊಂಡು "ತಾವು ಅ
ಇಳಿಯುವಿರಾ?" ಎಂದು ಕೇಳಿದಳು.

"ಹೌದು."

"ಅಲ್ಲಿ ನಿಮ್ಮವರು ಯಾರಾದರೂ ಇದ

"ನನ್ನವರು ಅಲ್ಲಿ ಯಾರಿದ್ದಾರೆ? ವ
ನನ್ನೊಂದಿಗಿದ್ದಾನೆ."

"ಅಲ್ಲಿಗೇಕೆ ಹೊರಟಿದ್ದೀರಿ. ಅಲ್ಲೇ ವಾಸ

"ಇಲ್ಲ, ನಾಳೆ ಮರಳಿ ಬರುವೆ."

"ಹಾಗಾದರೆ... ಪ್ರವಾಸ ಹೊರಟಿದ್ದೀರಾ

"ಪ್ರವಾಸ?" ಸಿಖ್ ಮಾತು ಕಳೆದು ಹ
"ಪ್ರವಾಸವೇ?" ಎಂದ. ಮತ್ತೆ ಸಾವರಿಸಿಕೊ
ನಾವು ಎಲ್ಲಿಗೂ ಹೊರಟಿಲ್ಲ, ಎಲ್ಲಿಗೆ ಹೋ
ಯೋಚಿಸುತ್ತಿದ್ದೇನೆ. ಯಾವ ನಿರ್ಧಾರಕ್ಕೂ ಬರ
ಚಲಿಸುವ ಟ್ರೇನ್‌ನಲ್ಲೇ ಯೋಚಿಸಿದರಾಯಿ

ಸುರೈಯಾಳ ಮನಸ್ಸಿನಾಳಕ್ಕಿಳಿದು

ಟ್ವಿಟರ್ ಲೋಕದಲ್ಲೊಂದು ಸುತ್ತು ಹಾಕಿದಾಗ...



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಫೇಸ್‌ಬುಕ್, ವಾಟ್ಸಾಪ್ ಮತ್ತು ಟ್ವಿಟರ್ ಲೋಕಗಳು ...ಜವಾಗಿರುತ್ತವೆ. ಇತ್ತೀಚೆಗೆ ಫೇಸ್‌ಬುಕ್ ಅನ್ನು ಜನರು ...ಮ್ಮ ಕವನಗಳನ್ನು, ಫೋಟೋಗಳನ್ನು, ಹುಟ್ಟುಹಬ್ಬದ ...ಭಾಷಯಗಳನ್ನು ಹಂಚಿಕೊಳ್ಳಲು ಹೆಚ್ಚು ...ಪಯೋಗಿಸುತ್ತಿದ್ದಾರೆ. ಹಾಗೆಯೇ ವಾಟ್ಸಾಪ್ ...ಂಪುಗಳಲ್ಲೂ ಹೆಚ್ಚಾಗಿ ಇಂಥವೇ ನಡೆಯುತ್ತಿರುತ್ತವೆ. ...ದರೆ ಟ್ವಿಟರ್ ಹಾಗಲ್ಲ, ಅಲ್ಲಿ ಕೇವಲ 140 ಅಕ್ಷರಗಳಿಗೆ ...ಪದಗಳ ನಡುವಿನ ಸ್ಪೇಸ್ ಮತ್ತು ಎಮೋಟಿಕಾನ್‌ಗಳೂ ...ಸೇರಿದಂತೆ) ಮಾತ್ರ ಸ್ಥಳಾವಕಾಶ ಇದ್ದು ಯಾರು ಏನನ್ನು ...ಹೇಳಬೇಕಿದ್ದರೂ ಅಷ್ಟರಲ್ಲೇ ಹೇಳಿ ಮುಗಿಸಬೇಕು. ಆದ್ದರಿಂದ ...ಲ್ಲಿ ಜನರು ಸಂಕ್ಷಿಪ್ತವಾಗಿ ತಮ್ಮ ಸಂದೇಶ, ಅಭಿಪ್ರಾಯ, ...ಮರ್ಶೆ, ಚಟಾಕಿ ಇತ್ಯಾದಿಗಳನ್ನು ಹಂಚಿಕೊಳ್ಳುತ್ತಾರೆ. ...ವುಗಳ ಜೊತೆಗೆ ಲೇಖನಗಳ ಲಿಂಕ್‌ಗಳನ್ನು ಮತ್ತು ...ತ್ರಗಳನ್ನು ಜೋಡಿಸಬಹುದು. ಆಸಕ್ತರು ಆ ಲಿಂಕ್‌ಗಳನ್ನು ...ದು ಓದಬಹುದು. ಇತ್ತೀಚೆಗೆ ಟ್ವಿಟರ್‌ನಲ್ಲಿ ನಾನೂ ...ಂದು ಅಕೌಂಟ್ ತೆಗೆದೆ. ಅದರಲ್ಲಿ ಕಂಡ ಹಲವು ...ಶ್ಚರ್ಯಕರವಾದ ಅಭಿಪ್ರಾಯಗಳನ್ನು ಇಲ್ಲಿ ನಿಮ್ಮೊಂದಿಗೆ ...ಹಂಚಿಕೊಳ್ಳುತ್ತೇನೆ.

...ಎಲ್ಲರಿಗೂ ಗೊತ್ತಿರುವಂತೆ ಇತ್ತೀಚೆಗೆ ಚೀನಾ ಸೈನ್ಯವು ...ಕ್ಕಿಮ್ ರಾಜ್ಯದಲ್ಲಿ ಭಾರತದ ಗಡಿಯನ್ನು ಅತಿಕ್ರಮಿಸಿತು. ...ಪ್ರಧಾನಿ ಆಗುವ ಮುನ್ನ ಭಾರತದ ಗಡಿಯನ್ನು ದಾಟಿದವರ ...ಯುದ್ಧ ವೀರಾವೇಶದ ಮಾತುಗಳನ್ನಾಡುತ್ತಿದ್ದ ಮೋದಿ ...ಗ ಮಾತ್ರ ಮೌನಕ್ಕೆ ಶರಣಾಗಿದ್ದಾನೆ. ಆದ್ದರಿಂದ ಈ ...ಗ್ಗೆ ಹರ್ತೋಷ್ ಸಿಂಗ್ ಬಾಲ್ ಎಂಬುವವರು ...ಕ್ರಿಯಿಸಿದ್ದು ಹೀಗೆ: "ಈಗ ಮೋದಿ ವಿರೋಧ ಪಕ್ಷದಲ್ಲಿ ...ದ್ದರೆ ಇಷ್ಟು ಹೊತ್ತಿಗೆ ಚೀನೀ ಸೈನ್ಯವನ್ನು ಬೀಜಿಂಗ್ ...ಕ ಒದ್ದೋಡಿಸುತ್ತಿದ್ದರು."


...ಅಪ್ಪಟ ಮೋದಿಯ ಧ್ವನಿವರ್ಧಕವಾಗಿ ಕೆಲಸ ...ಮಾಡುತ್ತಿರುವ ರಿಪಬ್ಲಿಕ್ ಟಿವಿಯಲ್ಲಿ ನಟ ಅನುಪಮ್ ...ಖೇರ್ ಇನ್ನೋರ್ವ ನಟ ಪರೇಶ್ ರಾವಲ್‌ನನ್ನು ...ಸಂದರ್ಶಿಸಿದರು. ಹೇಳಿಕೇಳಿ ಈ ಇಬ್ಬರು ನಟರೂ ಮೋದಿ ...ರು. ಆದ್ದರಿಂದ ಆ ಸಂದರ್ಶನದಲ್ಲಿ ಪರೇಶ್ ರಾವಲ್ ...ನು ಎಂದೂ ಮೋದಿಯವರು ಆಕಳಿಸಿರುವುದನ್ನೇ ...ಲ್ಲ" ಎಂದು ಮೋದಿಯನ್ನು ಕೊಂಡಾಡಿದರು. ಅದಕ್ಕೆ ...ನ್ನು 'ದಿ ಲಾಸ್ಟ್ ಕೇವ್‌ಮ್ಯಾನ್' ಎಂದೇ ...ಕರೆದುಕೊಳ್ಳುವಾತ ಪ್ರತಿಕ್ರಿಯಿಸಿದ್ದು ಹೀಗೆ: "ಹೌದೌದು, ...ವು ನಿಮ್ಮ ಮುಖವನ್ನು ಆತನ ಆಸನದ್ವಾರದ ಬಳಿ ...ಟ್ಟರೆ ಆತ ಆಕಳಿಸುವುದನ್ನು ನೋಡುವುದು ಕಷ್ಟ."

...ಇತ್ತೀಚೆಗೆ ದೇಶದ ಹಲವಾರು ಕಡೆ ಜಿಎಸ್‌ಟಿ ಜಾರಿಗೆ ...ವಿರೋಧ ವ್ಯಕ್ತವಾಯಿತು. ಅವುಗಳನ್ನು ಖಂಡಿಸಿದ ಕೇಂದ್ರ ...ಸಚಿವೆ ನಿರ್ಮಲಾ ಸೀತಾರಾಮನ್ "ನಿಮಗೆ ಜಿಎಸ್‌ಟಿ ...ಯಲು ಇಷ್ಟವಿಲ್ಲದಿದ್ದರೆ ಮನೆಯಲ್ಲಿ ಅಡುಗೆ ಮಾಡಿ ...ರಿ" ಎಂದರು. ಅದಕ್ಕೆ ಹಲವಾರು ಪ್ರತಿಕ್ರಿಯೆಗಳು ...ಬಂದಿದ್ದು ಎರಡು ನನ್ನ ಗಮನ ಸೆಳೆದವು. "ನಂಬಿದರೆ ...ನಂಬಿ, ಬಿಟ್ಟರೆ ಬಿಡಿ. ಈ ಹೇಳಿಕೆ ಕೊಟ್ಟಿದ್ದು ಓರ್ವ ...ಹಣಕಾಸು ಮಂತ್ರಿ. ನಾವು ಎಲ್ಲಿ ತಿನ್ನಬೇಕು ಎಂದು ನಿರ್ಧರಿಸುವ ...ಹಕ್ಕನ್ನು ಸರ್ಕಾರಕ್ಕೆ ಕೊಟ್ಟಿದ್ದು ಯಾರು? ಅಧಿಕಪ್ರಸಂಗಿ" ...ಎಂದರು ಕೀರ್ತಿ. ದುಶ್ಯಂತ್ ಎಂಬುವವರು "ಇದು ...ಹೇಗಿದೆ ಎಂದರೆ ಹೋಟೆಲ್‌ನಲ್ಲಿ ಬ್ರೆಡ್ ಸಿಗದಿದ್ದರೆ ...ಮನೆಯಲ್ಲಿ ಕೇಕ್ ತಿನ್ನಿರಿ ಎಂದಂತೆ" ಎಂದು ತಮಾಷೆ ...ಮಾಡಿದರು.

...ಜಿಎಸ್‌ಟಿ ವಿರೋಧಿಸಿ ದೇಶದ ವಿವಿಧ ಕಡೆ ರೈತರು ...ಮತ್ತು ವರ್ತಕರು ಪ್ರತಿಭಟನೆಗಳನ್ನು ನಡೆಸಿದ್ದಾರೆ. ಮೋದಿಯ ...ತವರು ರಾಜ್ಯ ಗುಜರಾತಿನ ಸೂರತ್‌ನಲ್ಲಿ ದೊಡ್ಡ ಸಂಖ್ಯೆಯಲ್ಲೇ ...ವರ್ತಕರು ಪ್ರತಿಭಟಿಸಿದರು. ಅವರೆಲ್ಲರ ಮೇಲೆ ಪೊಲೀಸರು ...ಲಾಠಿ ಚಾರ್ಜ್ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ 'ರಿಪಬ್ಲಿಕ್' ...ನ್ನು ಕಡೆದುಕೊಳ್ಳುವವರು "ರೈತರು ಮತ್ತು ವರ್ತಕರು ...ಗುಜರಾತ್‌ನಲ್ಲಿ ಪ್ರತಿಭಟಿಸುತ್ತಿದ್ದಾರೆ. ಆದರೆ ಯಾಕೆ ...ಮಾಧ್ಯಮಗಳು ಅವುಗಳನ್ನು ವರದಿ ಮಾಡುತ್ತಿಲ್ಲ? ಯಾಕೆ ...ಆ ಕುರಿತು ಚರ್ಚೆಗಳನ್ನು ನಡೆಸುತ್ತಿಲ್ಲ?" ಎಂದು ಪ್ರಶ್ನಿಸಿದ್ದಾರೆ.

ಈಗ ಮೋದಿ ಸಾಹೇಬರು ಇಸ್ರೇಲ್ ದೇಶಕ್ಕೆ ಭೇಟಿ ನೀಡಿದ್ದಾರೆ. ಈ ಭೇಟಿಯ ಸುತ್ತಲೂ ಹಲವಾರು ಕಾಮೆಂಟ್‌ಗಳು ವ್ಯಕ್ತವಾಗಿವೆ. ಅವುಗಳಲ್ಲಿ ಹಲವನ್ನು ಆಯ್ಕೆ ಮಾಡಿ ಇಲ್ಲಿ ನೀಡಿದ್ದೇನೆ:

ದಿ ಲಾಸ್ಟ್ ಕೇವ್‌ಮ್ಯಾನ್: "ಆರೆಸ್ಸೆಸ್‌ನ ಪ್ರಚಾರಕರೊಬ್ಬರು ಯಹೂದಿ ಹತ್ಯಾಕಾಂಡದ ಮ್ಯೂಸಿಯಂಗೆ ಭೇಟಿ ನೀಡುತ್ತಿರುವುದು ಮತ್ತು ಆ ಹತ್ಯಾಕಾಂಡ ಕುರಿತು ಆರೆಸ್ಸೆಸ್ ಅಭಿಪ್ರಾಯ." ಇದರ ಜೊತೆಗೆ ಎರಡು ಫೋಟೋಗಳಿವೆ. ಮೊದಲನೆ ಚಿತ್ರದಲ್ಲಿ ಮೋದಿ ಆ ಮ್ಯೂಸಿಯಂನಲ್ಲಿ ಕೊಂದಲ್ಪಟ್ಟವರ ನೆನಪಿಗೆ ನಮನ ಮಾಡುತ್ತಿದ್ದರೆ, ಎರಡನೆಯದರಲ್ಲಿ ಯಹೂದಿಗಳ ಸಾಮೂಹಿಕ ಹತ್ಯೆಯ ಬಗ್ಗೆ ಆರೆಸ್ಸೆಸ್ ನಾಯಕ ಗೋಲ್ವಾಲ್ಕರ್ ಹೇಳಿದ್ದ ಮಾತುಗಳಿವೆ. ಆತ ಹೀಗೆ ಹೇಳಿದ್ದ: "ತನ್ನ ಜನಾಂಗ ಮತ್ತು ಸಂಸ್ಕೃತಿಯ ಶುದ್ಧತೆಯನ್ನು ಉಳಿಸಿಕೊಳ್ಳಲು ಜರ್ಮನಿಯು ಯಹೂದಿಯರನ್ನು ಸಾಮೂಹಿಕವಾಗಿ ಕೊಂದು ಹಾಕುವ ಮೂಲಕ ಪ್ರಪಂಚವನ್ನೇ ಗಾಬರಿಗೊಳಿಸಿತು. ಆದರೆ ಅತ್ಯುನ್ನತವಾದ ಜನಾಂಗೀಯ ಹೆಮ್ಮೆ ಇಲ್ಲಿ ಪ್ರಕಟವಾಗಿದೆ. ವಿವಿಧ ಜನಾಂಗದವರು ಮತ್ತು ವಿವಿಧ ಸಂಸ್ಕೃತಿಯವರು ಸಮೀಕರಣಗೊಳ್ಳಲು ಸಾಧ್ಯವಿಲ್ಲ ಎಂದು ಜರ್ಮನಿ



To keep up the purity of the Race and its culture, Germany shocked the world by her purging the country of the Semitic races--the Jews. Race pride at its highest has been manifested here. Germany has also shown how well nigh impossible it is for Races and cultures, having differences going to the root, to be assimilated into one united whole, a good lesson for us in Hindusthan to learn and profit by.[7][8]

ತೋರಿಸಿದೆ. ಹಿಂದೂಸ್ತಾನ ಇದರಿಂದ ಕಲಿಯಬಹುದಾದ ಮತ್ತು ಲಾಭ ಪಡೆಯಬಹುದಾದ ಮಾರ್ಗ ಇದೆ."

ಕ್ಯೂರಿಯಸ್: "ಭಾರತ ತನ್ನ ಯುದ್ಧಾಸ್ತ್ರಗಳನ್ನು ಖರೀದಿಸಬೇಕು ಎಂಬುದು ಇಸ್ರೇಲ್ ಆಸೆ. ಆದರೆ ಈ ಸರಳ ಅಂಶವನ್ನು ಮರೆತು ಮಾಧ್ಯಮಗಳು ಯಾಕೆ ಮೋದಿ ಭೇಟಿಯನ್ನು ವೈಭವೀಕರಿಸುತ್ತಿವೆ?"

ಸಿದ್ಧಾರ್ಥ್ ಭಾಟಿಯಾ: "ಪ್ರಧಾನಿಯ ವಿದೇಶಿ ಭೇಟಿಯ ಬಗ್ಗೆ ವರದಿ ಮಾಡುತ್ತಿರುವವರಿಗೂ, ಸಿನಿಮಾ ತಾರೆಗಳ ಬಗ್ಗೆ ವರದಿ ಮಾಡುವವರಿಗೂ ಅಷ್ಟೇನು ವ್ಯತ್ಯಾಸ ಇಲ್ಲ, ಅವರೆಲ್ಲರೂ ಕ್ಷುಲ್ಲಕ ವಿಚಾರಗಳನ್ನೇ ವರದಿ ಮಾಡುತ್ತಿದ್ದಾರೆ."

ಡಾ. ಸಾನಿಯಾ: "ಮೂಲಗಳ ಪ್ರಕಾರ ಮೋದಿಯ ತಂಡದಲ್ಲಿ ಭಾರತದಿಂದ ದನದ ಮಾಂಸ ರಫ್ತು ಮಾಡುವ ಇಬ್ಬರು ಇದ್ದಾರೆ ಮತ್ತು ಅವರಿಬ್ಬರು ಇಸ್ರೇಲಿನ ತೊಗಲು ಮಾರಾಟಗಾರನ ಜೊತೆ ಚರ್ಚೆ ನಡೆಸುತ್ತಿದ್ದಾರೆ. ಅಂದರೆ ಗೋ ಮಾತೆ ಡೀಲ್ ಕುದುರುತ್ತಿದೆ!"

ಬಜ್ವಾ: "ಅವರು ಗಾಂಧಿಯನ್ನು ಕೊಂದರು,


ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ವಂಚಿಸಿದರು,

ಯಹೂದಿಯರನ್ನು ಸಾಮೂಹಿಕವಾಗಿ ಕೊಂದದ್ದಕ್ಕೆ ಹಿಟ್ಲರ್‌ನನ್ನು ಹೊಗಳಿದರು.

ಯಾರವರು ಬಲ್ಲಿರಾ?"

ಮೋದಿಯ ಇಸ್ರೇಲ್ ಭೇಟಿಯ ಸುತ್ತಲೂ ಆತನ ಭಕ್ತರು ಫೋಟೋಶಾಪ್ ಮಾಡಿದ್ದ ಚಿತ್ರಗಳನ್ನು ಹಂಚಿಕೊಂಡು ಸಂಭ್ರಮಿಸಿದರು. ಅಂತಹ ಒಂದು ಪ್ರಯತ್ನ "ಇಸ್ರೇಲಿನ ಸಂಸತ್ತಿನ ಮೇಲೆ ಪ್ರಥಮ ಬಾರಿಗೆ ಭಾರತದ ಧ್ವಜವನ್ನು ಹಾರಿಸಲಾಗಿದೆ" ಎಂಬ ಸುಳ್ಳು. ಆದರೆ ಇಸ್ರೇಲ್ ಸಂಸತ್ತಿನ ಚಿತ್ರದ ಮೇಲೆ ಭಾರತದ ಧ್ವಜವನ್ನು ಕೃತಕವಾಗಿ ಜೋಡಿಸಲಾಗಿದೆ ಎಂಬುದನ್ನು 'ಹೋಕ್ಸ್ ಸ್ಲೇಯರ್' ಎಂಬ ವೆಬ್‌ಸೈಟ್ ಬಹಿರಂಗಪಡಿಸಿತು. ಆದರೇನಂತೆ ಮೋದಿ ಭಕ್ತರು ಸುಮ್ಮನೆ ಕೂರುವವರಲ್ಲ, ಅವರು ಇನ್ನೊಂದು ಫೋಟೊ ಹಂಚಿಕೊಂಡು "ಈ ಕಲಾವಿದ ಇಸ್ರೇಲಿನ ರಸ್ತೆಯ ಮೇಲೆ ಮೋದಿಯ ಚಿತ್ರವನ್ನು ಬಿಡಿಸುತ್ತಿದ್ದಾನೆ" ಎಂದು ಘೋಷಿಸಿದರು. ಆದರೆ ಅದೂ ಸುಳ್ಳಾಗಿತ್ತು.





ವಿನಯ್ ಕುಮಾರ್ ದೊಕಾನಿಯಾ ಎಂಬುವವರು ಇನ್ನೊಂದು ಚಿತ್ರವನ್ನು ತೋರಿಸಿ, "ಈ ಕಲಾವಿದ ಇಸ್ರೇಲ್ ರಸ್ತೆಯಲ್ಲಿ ಮೋದಿಯ ಚಿತ್ರವನ್ನು ಬಿಡಿಸುತ್ತಿಲ್ಲ, ವಾಸ್ತವವಾಗಿ ಇದು ಇಸ್ರೇಲ್‌ನಲ್ಲಿ ತೆಗೆದ ಫೋಟೋ ಅಲ್ಲವೇ ಅಲ್ಲ, ಇದನ್ನು 2005ರಲ್ಲಿ ಪ್ಯಾರಿಸ್‌ನಲ್ಲಿ ತೆಗೆಯಲಾಗಿತ್ತು" ಎಂದು ಹೇಳಿ ನಕಲಿ ಮತ್ತು ಅಸಲಿ ಚಿತ್ರಗಳನ್ನು ಅಕ್ಕಪಕ್ಕ ಇಟ್ಟು ತೋರಿಸಿದರು.

ಇವತ್ತು ಬೆಂಗಳೂರಿನ 'ನಮ್ಮ ಮೆಟ್ರೋ'ದಲ್ಲಿ ಹಿಂದಿ ಬಳಕೆಯ ಸುತ್ತ ಚರ್ಚೆ ನಡೆಯುತ್ತಿದೆ. ವೆಂಕಯ್ಯ ನಾಯ್ಡು ಎಂಬ ಚೆಡ್ಡಿ ಪೆದ್ದ ಶಿಖಾಮಣಿಯಂತೆ ಉತ್ತರ ಭಾರತದವವರು ಸುಳ್ಳುಸುಳ್ಳೇ "ಹಿಂದಿ ರಾಷ್ಟ್ರೀಯ ಭಾಷೆ. ಆದ್ದರಿಂದ ದಕ್ಷಿಣ ಭಾರತದವರು ಅದನ್ನು ಕಲಿತರೆ ತಪ್ಪೇನು?" ಎಂದು ವಾದಿಸುತ್ತಿದ್ದಾರೆ. ಅದಕ್ಕೆ ಹಲವಾರು ಜನ ಪ್ರತಿಕ್ರಿಯಿಸಿಯೂ ಇದ್ದಾರೆ. ಅಂತಹವುಗಳಲ್ಲಿ ಇಂಗ್ಲಿಷ್‌ನಲ್ಲಿ ನಡೆದ ಒಂದು ಸಂಭಾಷಣೆ ಹೀಗಿತ್ತು:

ಉತ್ತರ ಭಾರತದವ: ಹಿಂದಿ ಬೇಡ ಅಂದರೆ ಹೇಗೆ. ನಿಮ್ಮ ಪ್ರಕಾರ ನಾನು ಓರ್ವ ತಮಿಳನನ್ನು ಮಾತನಾಡಿಸಬೇಕೆಂದರೆ ನಾನು ತಮಿಳು ಭಾಷೆ ಕಲಿಯಬೇಕೆ?

ದಕ್ಷಿಣ ಭಾರತದಾಕೆ: ಹಾಗೇನಿಲ್ಲವಲ್ಲ.


ಉತ್ತರ ಭಾರತದವ: ನಿಮ್ಮ ಮಾತಿನ ಅರ್ಥ?

ದಕ್ಷಿಣ ಭಾರತದಾಕೆ: ನಾವಿಬ್ಬರೂ ಈಗ ಇಂಗ್ಲಿಷ್‌ನಲ್ಲಿ ಸಂಭಾಷಣೆ ನಡೆಸುತ್ತಿದ್ದೇವಲ್ಲ, ನಿನ್ನ ಪ್ರಾಬ್ಲಮ್ ಏನು!!!??"

ನಿನ್ನೆ ಪಶ್ಚಿಮ ಬಂಗಾಲದಲ್ಲಿ ಕೋಮುಗಲಭೆ ಶುರುವಾಗಿದೆ. ಇದರ ಸುತ್ತಲೂ ಕಾಮೆಂಟ್‌ಗಳು ಹರಿದಾಡುತ್ತಿವೆ. ಸಿಪಿಎಂ ನಾಯಕ ಸೀತಾರಾಮ್ ಯೆಚೂರಿ ಹೀಗೆ ಹೇಳಿದ್ದಾರೆ: "ಬಹುಸಂಖ್ಯಾತರ ಕೋಮುವಾದ ಮತ್ತು ಅಲ್ಪಸಂಖ್ಯಾತರ ಮತೀಯವಾದ ಪರಸ್ಪರ ನೀರೆರೆದುಕೊಳ್ಳುತ್ತವೆ. ಅವೆರಡೂ ಭಾರತಕ್ಕೆ ಮಾರಕ. ಅವುಗಳನ್ನು ನಾವು ಸೋಲಿಸಬೇಕಿದೆ."

ಹಿಂದಿ ಸಿನಿಮಾಗಳಲ್ಲಿ ನಟಿಸುವ ಸ್ವರ ಭಾಸ್ಕರ್ ಎಂಬಾಕೆ ತನ್ನ ಜಾತ್ಯತೀತ, ಪ್ರಗತಿಪರ ನಂಬಿಕೆಗಳನ್ನು ವ್ಯಕ್ತಪಡಿಸುವಲ್ಲಿ ಹಿಂಜರಿಯುವವಳಲ್ಲ. ಆಕೆ ಹಾಕಿದ ಕಾಮೆಂಟ್ ಹೀಗಿದೆ: "ಭಾರತದಲ್ಲಿ ನಾವೆಷ್ಟು ನಾಜೂಕಾಗಿ ಸಮಾನತೆಯನ್ನು ವ್ಯಕ್ತಪಡಿಸುತ್ತೇವೆ! ಈಡಿಯಟ್‌ಗಳು, ವಿಧ್ವಂಸಕರು, ಗೂಂಡಾಗಳು ಎರಡೂ ಪ್ರಮುಖ ಧರ್ಮಗಳ ನಂಬಿಕೆಗಳನ್ನು ನಿರ್ಧರಿಸುತ್ತಿದ್ದಾರೆ. ಬಂಗಾಳದ ವಿಧ್ವಂಸಕರನ್ನು ಖಂಡಿಸಬೇಕಿದೆ."

ಆತ ಮುಸಲ್ಮಾನ ಎಂಬ ಏಕೈಕ ಕಾರಣಕ್ಕೆ ನಡೆದ ಜುನೈದ್ ಎಂಬ 15 ವರ್ಷ ವಯಸ್ಸಿನ ಬಾಲಕನ ಕಗ್ಗೊಲೆ ದೇಶಾದ್ಯಂತ 'ನಾಟ್ ಇನ್ ಮೈ ನೇಮ್' ಪ್ರತಿಭಟನೆಗಳಿಗೆ ಕಾರಣವಾಯಿತು. ಈ ಕುರಿತು ಯಾರೋ ಒಬ್ಬರು ಹಲವಾರು ಲೇಖನಗಳ ಲಿಂಕ್‌ಗಳನ್ನು ಹಂಚಿಕೊಂಡಿದ್ದರು. ಅದಕ್ಕೆ ಪ್ರತಿಕ್ರಿಯೆಯಾಗಿ ಯಾರೋ ಒಬ್ಬರು "ನೀವು ಯಾಕೆ ಹಿಂದೂಗಳ ಬಗ್ಗೆ ಬರೆಯುವುದಿಲ್ಲ. ಅವರ ನೋವು ನಿಮ್ಮನ್ನು ಕಾಡುವುದಿಲ್ಲವೆ?" ಎಂದು ಪ್ರಶ್ನಿಸಿದರು. ಅದಕ್ಕೆ "ಅದು ನಿಮ್ಮನ್ನೂ ಕಾಡುವುದಿಲ್ಲವೆ? ನಾನು ದಲಿತರ ಬಗ್ಗೆ ಮತ್ತು ಅವರ ಬದುಕಿನ ಬಗ್ಗೆ ಹಲವಾರು ಲೇಖನಗಳನ್ನೂ ಬರೆದಿದ್ದೇನೆ" ಎಂದು ಮೊದಲಿನವರು ಉತ್ತರಿಸಿದರು. ಎರಡನೆಯವರು ಅದಕ್ಕೆ ಪ್ರತಿಕ್ರಿಯಿಸಿದ್ದು ಹೇಗೆ ಗೊತ್ತಾ? "ಅಲ್ಲಾ, ನಾನು ಕೇಳಿದ್ದು ನಾರ್ಮಲ್ ಹಿಂದೂಗಳ ಬಗ್ಗೆ". ಇದಕ್ಕೆ ಮೊದಲಿನವರು ಹೇಳಿದ್ದು ಇಷ್ಟನ್ನು ಮಾತ್ರ: "ವಾವ್"



ಉತ್ತರ ಪ್ರದೇಶದಲ್ಲಿ ದಲಿತರ ಮತ್ತು ಮುಸಲ್ಮಾನರ ಮೇಲಿನ ದೌರ್ಜನ್ಯ ಹೆಚ್ಚುತ್ತಿದೆ. ಆ ಹಿನ್ನೆಲೆಯಲ್ಲಿ ಸಿದ್ಧಾರ್ಥ್ ನಾಥ್ ಸಿಂಗ್ "ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲೇ ಸರಿಯಾದ ಆಡಳಿತ ನಡೆಸಲು ಸಾಧ್ಯವಾಗುತ್ತಿಲ್ಲ, ಉತ್ತರ ಪ್ರದೇಶದಲ್ಲಿ ಪ್ರತಿದಿನ ಲೂಟಿ, ಕೊಲೆ, ಸಾಮೂಹಿಕ ಕಗ್ಗೊಲೆ, ಅತ್ಯಾಚಾರಗಳು ಸಂಭವಿಸುತ್ತಿವೆ. ಆದರೂ ಬೇರೆ ರಾಜ್ಯಗಳಿಗೆ ಪುಕ್ಕಟೆ ಸಲಹೆ ಕೊಡುವಷ್ಟು ಸೊಕ್ಕು ಈ ಸರ್ಕಾರಕ್ಕೆ" ಎಂದಿದ್ದಾರೆ.

ಇನ್ನು ಧಾರ್ಮಿಕ ಭಾವನೆಗಳನ್ನು ಕುರಿತು ಸಂಜೀವ್ ಭಟ್ (ಇವರು ಮೋದಿಯ ಕೆಂಗಣ್ಣಿಗೆ ಗುರಿಯಾಗಿ ಅಮಾನತ್ತುಗೊಂಡ ಗುಜರಾತಿನ ಐಪಿಎಸ್ ಅಧಿಕಾರಿ) ಮಾಡಿದ ಕಾಮೆಂಟ್: "ಆಸ್ತಿಕರಿಗೆ ಗೀತೆ, ಕುರ್‌ಆನ್, ಬೈಬಲ್, ಗ್ರಂಥಸಾಹಿಬ್... ಪವಿತ್ರ ಗ್ರಂಥಗಳಿರಬಹುದು. ಆದರೆ ನಾಸ್ತಿಕರಿಗೆ ಅವೆಲ್ಲ ಕತೆ ಪುಸ್ತಕಗಳಷ್ಟೇ."

ದೇಶದ ವಿವಿಧ ಭಾಗಗಳಲ್ಲಿ ಸಂಭವಿಸುವ ವಿವಿಧ ವಿದ್ಯಮಾನಗಳ ಕುರಿತು ಮಾಹಿತಿಗಳನ್ನು ಟ್ವಿಟರ್‌ನಲ್ಲಿ ಜನ ಹಂಚಿಕೊಳ್ಳುತ್ತಾರೆ. ಅವುಗಳಲ್ಲಿ ಹಲವು ಹೀಗಿವೆ:

"ನಂಬಿದರೆ ನಂಬಿ, ಬಿಟ್ಟರೆ ಬಿಡಿ. ತಮ್ಮ ಮಿತ್ರರು ದನದ ಮಾಂಸ ತಿನ್ನುವವರ ಬೆನ್ನುಹತ್ತಿ ಬಡಿಯುತ್ತಿದ್ದರೆ, ಕೇರಳದಲ್ಲಿ ದನದ ಮಾಂಸ ಮಾರಲು ಬಿಜೆಪಿ ಸಹಕಾರ ಸಂಸ್ಥೆಯನ್ನು ಸ್ಥಾಪಿಸಿದೆ."

"ಮೋದಿಯ ಯೋಗ ಮಾಸ್ಟರ್ ಹೆಚ್.ಆರ್.ನಾಗೇಂದ್ರ ಎಂಬಾತನನ್ನು ಸರ್ಕಾರ ಯುಜಿಸಿ ಸಂಸ್ಥೆಗೆ ಮುಖ್ಯಸ್ಥನನ್ನು ಆಯ್ಕೆ ಮಾಡುವ ಸಮಿತಿಯ ಅಧ್ಯಕ್ಷನನ್ನಾಗಿಸಿದೆ. ಇದು ಪ್ರಧಾನಿಯ ಕ್ರೋನಿ-ಆಸನ."

ಲಾಲೂ ಪ್ರಸಾದ್ ಯಾದವ್: "ಯಾವುತ್ತು ಅಖಿಲೇಶ್ ಯಾದವ್ ಮತ್ತು ಮಾಯಾವತಿ ಕೈಜೋಡಿಸುತ್ತಾರೋ ಅವತ್ತು 2019ರ ಮ್ಯಾಚ್ ಮುಗಿದೇ ಹೋಗುತ್ತದೆ. ಆ ನಿಟ್ಟಿನಲ್ಲಿ ನಾನು ಪ್ರಯತ್ನಿಸುತ್ತಿರುವುದರಿಂದ ನನ್ನ ಹಿಂದೆ ಬಿಜೆಪಿ ಬಿದ್ದಿದೆ."



ಶವರ್‌ಥಾಟ್ಸ್: "ಕ್ರಾಂತಿ ಮತ್ತು ಬಂಡಾಯದ ನಡುವಿನ ವ್ಯತ್ಯಾಸ ಸೋಲು ಮತ್ತು ಗೆಲುವು."



"ಏಸುಕ್ರಿಸ್ತನನ್ನು ಪಿಶಾಚಿ ಎಂದು ಬಣ್ಣಿಸಿದ ಗುಜರಾತ್ ಪಠ್ಯಪುಸ್ತಕಗಳನ್ನು ತಿದ್ದುಪಡಿ ಮಾಡಿಲ್ಲ."

ಇದೆಲ್ಲ ಬೇರೆ ರಾಜ್ಯಗಳ ಮಾತಾಯಿತು. ಇವತ್ತು ಕರ್ನಾಟಕದ ರಾಜಕಾರಣಿಗಳು ಮಾಡಿದ ಟ್ವೀಟ್‌ಗಳು ಹೀಗಿವೆ:

ಬಿ.ಎಸ್.ಯಡಿಯೂರಪ್ಪ: "ಇನ್ನು ಮೂರು ದಿನಗಳಲ್ಲಿ ಅಮಿತ್ ಶಾ ಮತ್ತು ನನ್ನ ವಿರುದ್ಧ ಕರ್ನಾಟಕದ ಮುಖ್ಯಮಂತ್ರಿ ಕೊಟ್ಟ ಮಾನಹಾನಿ ಹೇಳಿಕೆಗಳಿಗೆ ಕ್ಷಮೆ ಯಾಚಿಸದಿದ್ದರೆ ನಾನು ಅವರ ವಿರುದ್ಧ ಮಾನನಷ್ಟ ದಾವೆಯನ್ನು ಹೂಡುತ್ತೇನೆ."

ಅದಕ್ಕೆ ಕಾಂಗ್ರೆಸ್ ನಾಯಕ ದಿನೇಶ್ ಗುಂಡೂರಾವ್ ಅವರು ನೀಡಿದ ಪ್ರತಿಕ್ರಿಯೆ ಹೀಗಿದೆ: "ಮುಖ್ಯಮಂತ್ರಿಗಳು ಸತ್ಯವನ್ನೇ ನುಡಿದಿದ್ದಾರೆ. ನೀವು ಮತ್ತು ಅಮಿತ್ ಶಾ ಜೈಲಲ್ಲಿ ಇದ್ದದ್ದು ನಿಜ. ಮೂರು ದಿನ ಯಾಕೆ ಕಾಯುತ್ತೀರಿ!!!" ■

ಶಿರಸಿ: ಹೆಗಡೆಜೀ ಮೊಮ್ಮಗನ ಅದೃಷ್ಟ ಖುಲಾಯಿಸೀತಾ?!



ಉತ್ತರ ಕನ್ನಡದ ಕರಾವಳಿ-ಮಲೆನಾಡು ಮತ್ತು ಅರೆಬಯಲು ಸೀಮೆಯು ಕಲಸುಮೇಲೋಗರದ ರಾಜಕೀಯದ ಶಕ್ತಿಸ್ಥಳ- ಶಿರಸಿ ಜಿಲ್ಲೆಯ ಘಟ್ಟದ ಮೇಲಿನ ರಾಜಕಾರಣದ ವರಸೆಗಳು ಕರಾವಳಿಯ ಕಸರತ್ತಿಗಿಂತ ಕೊಂಚ ವಿಭಿನ್ನ. ಒಂದು ಕಾಲದಲ್ಲಿ ಶಿರಸಿ ಅಂದರೆ, 'ಬಂ' ಮತ್ತು 'ಹೆಗಡೆಜೀ'ಯ ದೀವರು v/s ಬ್ರಾಹ್ಮಣರ ಒಣಪ್ರತಿಷ್ಠೆಯ ಕಾದಾಟದ ಗರಡಿ ಮನೆಯಂತಿತ್ತು. ಈಗದು ಕಾಂಗ್ರೆಸ್-ಬಿಜೆಪಿ-ಜೆಡಿಎಸ್‌ನ ಸಮ ತೂಕದ ಅಖಾಡದಂತೆ ಭಾಸವಾಗುತ್ತಿದೆ. ದೋಷಪಾಂಡೆ-ವ್ಯಾಗಿಯಜ್ಜಿಯ ಮನೆಮುರುಕು ಮಸಲತ್ತುಗಳ ಪ್ರಯೋಗ ಇಲ್ಲದಿದ್ದರೆ ಇಲ್ಲಿ ಚಿಲ್ಡಿ ಪಾಲಿಟಿಕ್ಸ್‌ಗೆ ಚಾನ್ಸ್ ಇರುತ್ತಿರಲಿಲ್ಲ!




ರಾಜ್ಯ ಬಿಜೆಪಿಯ ಮುಂದಿನ ಸಾಲಿನ ಕುಂಕುಮಧಾರಿ ಗಂಡುಗಳಲ್ಲಿ ಒಬ್ಬನಾದ ಕಾಗೇರಿ ವಿಶ್ವೇಶ್ವರ ಹೆಗಡೆ ಸದ್ರಿ ಶಿರಸಿಯಿಂದ ಒಂದಲ್ಲ ಎರಡೆರಡು ಬಾರಿ ಗೆದ್ದು ತಾನು ದಂಡ-ಪಿಂಡ ಎಂಬುದನ್ನು ಸ್ವಯಂ ಸಾಬೀತುಪಡಿಸಿ ಕೊಂಡಿದ್ದಾನೆ. ಆತನ ಸ್ವ-ಪಕ್ಷದ ಹಿತಶತ್ರು ಹೊಡಿ-ಬಡಿ-ಕಡಿ ಬ್ರ್ಯಾಂಡಿನ ಸಂಸದ ಸಾಹೇಬ ಅನಂತಕುಮಾರ್ ಹೆಗಡೆಗೂ ಇದೇ ಶಿರಸಿ ಹೆಡ್‌ಕ್ವಾಟರ್ಸ್. ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷನೂ-'ಬಂ'ರ ಮುದ್ದಿನ ಭಾಮೈದುನ ಅನ್ನಿಸಿದ್ದ ಹೆಂಡೋದ್ಯಮಿ ಭೀಮಣ್ಣ ನಾಯ್ಕನಿಗೂ ಇದೇ ಶಿರಸಿ ಕರ್ಮಕ್ಷೇತ್ರ. ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಜೀಯ ದಾಯಾದಿ ಮೊಮ್ಮಗ ಶಶಿಭೂಷಣ ಹೆಗಡೆ ಅಜ್ಜನಂತೆಯೇ ಪೋಷಾಕು ಹಾಕಿಕೊಂಡು ಶಿರಸಿಯಲ್ಲೇ ಅದೃಷ್ಟ ಅರಸುತ್ತಿದ್ದಾನೆ. ಹೀಗಾಗಿ ಶಿರಸಿ-ಸಿದ್ದಾಪುರದ ಕದನ ಕುತೂಹಲದ ಮಜವೇ ಬೇರೆ!!

ಯುದ್ಧೋನ್ಮಾದದಲ್ಲಿ ಇರುವ ಬಿಜೆಪಿಗರ ಆರ್ಭಟ ಜಿಲ್ಲೆಯ ಉಳಿದೈದು ಕ್ಷೇತ್ರದಲ್ಲಿ ಇರುವಷ್ಟೇನೂ ಶಿರಸಿ-ಸಿದ್ದಾಪುರದಲ್ಲಿ ಇಲ್ಲ. ಇದಕ್ಕೆ ಕಾರಣ-ಹಾಲಿ ಶಾಸಕ ಕಾಗೇರಿಗೆ ಖಂಡಿತ ಬಿಜೆಪಿ ಟಿಕೆಟ್ ಎಂಬ ಭಾವನೆ. ಯಡ್ಡಿ ವಿರೋಧಿ ಕೇಂದ್ರ ಮಂತ್ರಿ ಅನಂತಕುಮಾರ್ ಶಾಸ್ತ್ರಿಯ ಬ್ರಾಹ್ಮಣ ಬಳಗದಲ್ಲಿ ಕಾಗೇರಿ ಇದ್ದಾನೆ. ಈತನ ತಲೆ ಕಂಡರೆ ಯಡ್ಡಿಗೂ ಆಗದು. ಆದರೆ ಯಡ್ಡಿಯನ್ನೇ ಓವರ್‌ಟೇಕ್ ಮಾಡಬಲ್ಲ ಆಶ್ರಯದಾತರನ್ನು ಕೇಶವಕೃಪಾದಲ್ಲಿ ಕಾಗೇರಿ ಕಂಡುಕೊಂಡಿದ್ದಾನೆ. ಕಾಗೇರಿಯನ್ನು ಕಂಟ್ರೋಲ್ ಮಾಡುವ ಪ್ಲಾನ್‌ನಿಂದ ಯಡ್ಡಿ ಯಡವಟ್ಟು ಅನಂತ್ಮಾಣಿಯನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷನಾಗಿ ಮಾಡಿಕೊಂಡಿದ್ದಾರೆ. ಈ ಅನಂತ್ಮಾಣಿ ಒಂದು ಹಂತದಲ್ಲಿ ಕಾಗೇರಿಯನ್ನು ಕೆಡವಿ ಹಾಕಿ ತಾನೇ ಶಿರಸಿಯ ಬಿಜೆಪಿ ಕ್ಯಾಂಡಿಡೇಟಾಗಲು ಕಾರ್ಯಾಚರಣೆ ನಡೆಸಿದ್ದ.

ಶಿರಸಿ ಟಿಕೆಟ್‌ಗೆ ತಿಪ್ಪರಲಾಗ ಹಾಕಿದ ಅನಂತ್ಮಾಣಿ ಅದು ಸಿಗದೆಂದು ಖಾತ್ರಿಯಾದಾಗ ಕಾಗೇರಿಯನ್ನು ಕಿಚಾಯಿಸಲು ಶುರು ಹಚ್ಚಿಕೊಂಡಿದ್ದ. "ನಾನೇ ಮುಂದಿನ ಬಾರಿ ಶಿರಸಿ ಬಿಜೆಪಿ ಕ್ಯಾಂಡಿಡೇಟು... ಕಾಗೇರಿ ಸೀನಿಯರ್ ರಾಜಕಾರಣಿ ಅಲ್ವಾ....? ಅವನ್ನ ಎಲ್ಲಾದ್ರೂ ರಾಜ್ಯಪಾಲರಾಗಿ ಕಳಿಸ್ತೇವೆ..." ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಅಧಿಕಾರದಿಂದ ಮಾತಾಡಿದ್ದೂ ಇದೆ. ಇದಕ್ಕೆಲ್ಲ ನರಿಬುದ್ಧಿಯ ಕಾಗೇರಿ ಪ್ರತಿಕ್ರಿಯಿಸಲಿಲ್ಲ, ಬದಲಿಗೆ ಹೈಕಮಾಂಡ್ ಲೆವೆಲ್‌ನಲ್ಲೇ ಅನಂತ್ಮಾಣಿಗೆ ಮೂಗುದಾರ ಹಾಕಿಸಿಬಿಟ್ಟಿದ್ದ. ಆಗಲೇ ಅನಂತ್ಮಾಣಿ ಕಣ್ಣು ಪಕ್ಕದ ಯಲ್ಲಾಪುರ ಮತ್ತು ಕರಾವಳಿಯ ಕುಮಟಾದ ಮೇಲೆ ಬಿದ್ದಿದ್ದು. ಅನಂತ್ಮಾಣಿಯ ಎಮ್ಮೆಲ್ಲೆಗಿರಿ ಪ್ರಯತ್ನದ ಹಿಂದೆ ರಾಜ್ಯದಲ್ಲಿ ಮಂತ್ರಿಯಾಗುವ ಆಸೆ ಅಡಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ ವಾಸ್ತವವೇ ಬೇರೆ. ಅನಂತ್ಮಾಣಿಗೆ ಮತ್ತೆ ತನಗೆ ಮೋದಿ ಮಾಮ ಎಂಪಿ ಟಿಕೆಟ್ ಕೊಡುತ್ತಾನೆಂಬ ವಿಶ್ವಾಸವಿಲ್ಲ, ಕಳೆದ ಬಾರಿಯೇ ಆತನ ಕರ್ಮಗೇಡಿತನಕ್ಕೆ ಟಿಕೆಟ್ ಕೊಡಬಾರದೆಂಬ ಹುಯಿಲೆದ್ದಿತ್ತು.

ಒಮ್ಮೆ ಹುಸಿ ಹಿಂದೂತ್ವದ ಹಿಕಮತ್ತು, ಮತ್ತೊಮ್ಮೆ ಜಿಲ್ಲಾ ಬಿಜೆಪಿ ಭೀಷ್ಮನಂತಿದ್ದ ಡಾ. ಚಿತ್ತರಂಜನ್ ಹತ್ಯೆ ಅನುಕಂಪ, ಮಗದೊಮ್ಮೆ ವಾಜಪೇಯಿ ನಾಮಸ್ಮರಣೆ, ಕಳೆದ ಬಾರಿ ಮೋದಿ ಎರಚಿದ್ದ ಮಂಕುಬೂದಿ ಮಹಿಮೆಯಿಂದಲೇ ಎಂಪಿಯಾಗಿರುವ ಅನಂತ್ಮಾಣಿಗೆ ಕೆನರಾ ಕ್ಷೇತ್ರದ ಉದ್ದಗಲಕ್ಕೆ ಸ್ವಂತ ಇಮೇಜ್ ಎಂಬುದೇ ಇಲ್ಲ, ಕೇಸ ಮೈಗಳ, ಸ್ವಾರ್ಥಿ, ಅರಣ್ಯಗಳ, ಅದಿರು ಹಫ್ತಾದಾರ,

ಜನರಿಗೆ ಸದಾ ನಾಟ್‌ರಿಚೇಬಲ್ ಎಂದು ಕೆನರಾದ ಮತದಾರರು ಅಸಹ್ಯ ಪಡುತ್ತಾರೆ. ಜನರ ತಾತ್ಸಾರಕ್ಕೆ ತುತ್ತಾದ ಶೇಕಡಾ 50ರಷ್ಟು ಎಮ್ಮೆಲ್ಲೆ, ಎಂಪಿಗಳಿಗೆ ಟಿಕೆಟ್ ತಪ್ಪಿಸಿ ಹೊಸ ಮುಖ ಹೂಡುವ ಮೋದಿ-ಶಾ ತಂತ್ರಗಾರಿಕೆಗೆ ಸಿಕ್ಕು ತಾನು ತರಗೆಲೆ ಆಗುವೆನೆಂಬ ಆತಂಕ ಮಾಣಿಯನ್ನು ಕಾಡುತ್ತಿದೆ. ಹೀಗಾಗಿ ಶಾಸಕನಾಗುವ ತೆವಲು ಆತನ ಕಾಡುತ್ತಿದೆ. ಈ ಅಸ್ತಿತ್ವದ ಅಭದ್ರತೆಯೇ ಅನಂತ್ಮಾಣಿಗೆ ಕಾಗೇರಿ ಮಾಣಿ ಟಿಕೆಟ್ ಕಸಿಯುವ ತಂಟೆಗೆ ಹೋಗದಂತೆ ಮಾಡಿದೆ ಎಂಬ ಗುಸುಗುಸು ಬಿಜೆಪಿ ಬಿಡಾರದಲ್ಲಿ ಬಿರುಸಾಗಿದೆ.

ಹಾಗಂತ ಕಾಗೇರಿಯನ್ನು ಕಾಡೋದು ಮಾತ್ರ ಮಾಣಿ ನಿಲ್ಲಿಸಿಲ್ಲ. ಸ್ಥಳೀಯ ಬಿಜೆಪಿಯಲ್ಲಿ ಕಾಗೇರಿಗೆ ಟಿಕೆಟ್ ಪ್ರತಿಸ್ಪರ್ಧಿಗಳಾಗಿ ಒಂದಿಬ್ಬರನ್ನು ಆತ ತಯಾರು ಮಾಡಿ ಛೂಬಿಟ್ಟಿದ್ದಾನೆ. ತನ್ನ ಗುದುಮುರಿಗೆ ಗೆಳೆಯ ಎಸಳೆ ಕೃಷ್ಣ ಜಿಪಂ ಮಾಜಿ ಸದಸ್ಯನೂ-ಹಣವಂತ ಅಡಿಕೆ ವರ್ತಕನೂ ಆಗಿರುವ ಜಿ.ಎಂ. ಹೆಗಡೆ ಮುಳಖಂಡ್ ಮತ್ತು ಧಾರವಾಡ ಹಾಲು ಒಕ್ಕೂಟದ ಸದಸ್ಯ ಸುರೇಶ್ಚಂದ್ರ ಹೆಗಡೆಯನ್ನು ಟಿಕೆಟ್ ಆಕಾಂಕ್ಷಿಗಳಾಗಿ ಮಾಡಿದ್ದಾನೆ. ಇವರಿಂದ ಕಾಗೇರಿ ಟಿಕೆಟ್ ತಪ್ಪಿಸಲಾಗದೆಂಬುದು ಅನಂತ್ಮಾಣಿಗೂ ಗೊತ್ತಿದೆ. ಈ ಕಿತಾಪತಿ ಕಾಗೇರಿಗೆ ಅಷ್ಟು ಸುಲಭಕ್ಕೆ ಅಭ್ಯರ್ಥಿತನ ದಕ್ಕಲು ಬಿಡಬಾರದೆಂಬ ಹಠಕ್ಕಷ್ಟೇ. ಮತ್ತೊಂದೆಡೆ ಜೆಡಿಎಸ್‌ನ ಚಾಕಲೇಟ್ ಮಾಣಿ-ಮಾಜಿ ಸಿಎಂ ಹೆಗಡೆಜೀ ಮೊಮ್ಮಗ ಶಶಿಭೂಷಣ ಹೆಗಡೆಗೂ ಆತ ಪಂಪ್ ಹೊಡೆಯುತ್ತಿದ್ದಾನೆ. ".... ಅಣ್ಣಾ ಆನು ಬಿಜೆಪಿಗೆ ಬತ್ತಿ... ಕುಮ್ಮೆ ಟಿಕೆಟ್ ಕೊಡ್ಸೋ..." ಎಂದು ದುಂಬಾಲು ಬಿದ್ದಿದ್ದ ಶಶಿಗೆ ಅನಂತ್ಮಾಣಿ ".... ಬ್ಯಾಡ್ರೊ ತಮ್ಮಾ... ನೀ ಅಲ್ಲೇ ಇರು... ನಿಂಗೆ ಎಲೆಕ್ಷನ್‌ನಲ್ಲಿ ಆನು ಹೆಲ್ಪ್ ಮಾಡ್ತಿ...." ಎಂದು ಭರವಸೆಯೂ ಕೊಟ್ಟಿದ್ದ ಅನಂತ್ಮಾಣಿ.

ಈಗ ಕಾಗೇರಿ ಕಷ್ಟಕ್ಕೆ ಸಿಲುಕಿದ್ದಾನೆ. ಶಿರಸಿ-ಸಿದ್ದಾಪುರದ ಬಿಜೆಪಿಯೊಳಗಿನ ಒಳಸುಳಿಗಳ ತಿರುಗುವಿಕೆಯ ಗತಿ ಕಂಡರೆ ಇದು ಎಂಥವರಿಗೂ ಅರ್ಥವಾಗುತ್ತಿದೆ. ಕಳೆದ ಬಾರಿ ಬರೀ ಎರಡೂವರೆ ಸಾವಿರ ಮತದಂತರದಲ್ಲಿ ಏದುಸಿರು ಬಿಡುತ್ತ ಅಂತೂ ಕಾಗೇರಿ ದಡ ಮುಟ್ಟಿದ್ದ. ಪುಂಡ ಪ್ರಚಂಡ ಇಮೇಜ್‌ನ ದೀಪಕ್ ಹೊನ್ನಾವರ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಾಗೇರಿಯನ್ನು ಅಟ್ಟಿಸಿಕೊಂಡು ಹೋದ ಪರಿಗೆ ರಾಜಕೀಯ ವಿಶ್ಲೇಷಕರೇ ಬೆಚ್ಚಿ ಬಿದ್ದಿದ್ದರು. ಅಂದು ಕಾಂಗ್ರೆಸ್‌ನಲ್ಲಿದ್ದ ರವಿನಾಯ್ಕ್, ಭೀಮಣ್ಣ ನಾಯ್ಕನಂಥವರು ದ್ರೋಹ ಮಾಡದಿದ್ದರೆ ಖಂಡಿತ ದೀಪಕ್ ಗೆಲ್ಲುತ್ತಿದ್ದರು. ಸಾಮಾನ್ಯ ಜನರ ಪಾಲಿಗೆ ರಾಬಿನ್ ಹುಡ್‌ನಂತಿದ್ದ ದೀಪಕ್ ಕೈಯಿಂದ ತಪ್ಪಿಸಿಕೊಳ್ಳಲು ಕಾಗೇರಿ ಮತ್ತವನ ಕಾಂಗ್ರೆಸ್ ಗೆಳೆಯ ದೋಷಪಾಂಡೆ ಏಳು ಕೆರೆಯ ನೀರು ಕುಡಿಯಬೇಕಾಗಿ ಬಂದಿತ್ತು. ಬೆನ್ನ ಹಿಂದೆ ಜೆಡಿಎಸ್‌ನ ಶಶಿಭೂಷಣ ಹೆಗಡೆ ನಿರಿತಿದ್ದ. ಶಶಿ ಮತ್ತು ದೀಪಕ್‌ಗೆ ಎರಡ್ಮೂರು ಸಾವಿರದ ವ್ಯತ್ಯಾಸವಷ್ಟೇ ಇತ್ತು. ಶಿರಸಿ-ಸಿದ್ದಾಪುರದ ಜನರಿಗೆ ಕಾಗೇರಿ ಬೇಡವಾಗಿರುವುದಕ್ಕೆ ಇದು ಸಾಕ್ಷಿ-ಪುರಾವೆಯಂತಿದೆ.

ಈಗ ದೀಪಕ್ ಹೊನ್ನಾವರ ದಿವಂಗತನಾಗಿದ್ದಾನೆ. ಆದರೆ ಆತನ 'ದೇವಮಾತೆ' ವ್ಯಾಗಿಯ ಮಗ ನಿವೇದಿತ್ ಆಳ್ವ ಶಿರಸಿ ಕಾಂಗ್ರೆಸ್ ಟಿಕೆಟ್ ಕ್ಲೇಮ್ ಮಾಡುತ್ತಿದ್ದಾನೆ. ದೀಪಕ್ ಹೊನ್ನಾವರನ ಹಿಂಬಾಲಕ ಪಡೆ ತನ್ನನ್ನು ಎಮ್ಮೆಲ್ಲೆ ಮಾಡುತ್ತಾರೆಂದು ಆತ ಹಗಲುಕನಸು ಕಾಣುತ್ತಿದ್ದಾನೆ. ಕೆನರಾದ ಎಂಪಿಯಾಗುವ ಆಸೆಯಲ್ಲಿದ್ದ ಈ ಮೊದ್ಮಣಿ ಈಗ ಶಾಸಕನಾದರೂ ಸಾಕು ಎಂಬ ದಯನೀಸಿ ಸ್ಥಿತಿಗೆ ಬಂದಿದ್ದಾನೆ.

ಅಮ್ಮನ ಇನ್‌ಫ್ಲೂಯೆನ್ಸ್‌ನಿಂದ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಗೂಟದ ಕಾರಲ್ಲಿ ಎರಡೂವರೆ ವರ್ಷ ಓಡಾಡಿದ ನಿವೇದಿತ್ ಶಿರಸಿ-ಸಿದ್ದಾಪುರ ಭಾಗದಲ್ಲಿ ಒಂದಿಷ್ಟು ರಸ್ತೆ-ಮೀನು ಮಾರುಕಟ್ಟೆ-ಸಣ್ಣ ಸೇತುವೆ ಮಾಡಿಸಿದ್ದಾನೆ. ಶಿರಸಿ ಎಮ್ಮೆಲ್ಲೆ ಆಗುವ ದೂ(ದು) ರಾಲೋಚನೆಯಿಂದಲೇ ಮಾಡಿದ ಕಾಮಗಾರಿಗಳಿವು.

ಮಂತ್ರಿ ದೋಷಪಾಂಡೆ ನಿವೇದಿತ್ ಆಳ್ವಗೆ ಟಿಕೆಟ್ ಸಿಗದಂತೆ ಮಾಡಲು ಶಕ್ತಿಮೀರಿ ಪ್ರಯತ್ನಿಸುವುದು ಕಾಂಗ್ರೆಸ್‌ನ ಕಾಲೆಳೆವ ಕುತಂತ್ರಗಾರಿಕೆಯ ಸಹಜ ಪ್ರಕ್ರಿಯೆ. ಹಾಗಂತ ಕಳೆದ ಬಾರಿ ಕೈಕೊಟ್ಟಿದ್ದ ದೇಶಪಾಂಡೆ ಈ ಬಾರಿ ಅಧ್ಯಕ್ಷ ಭೀಮಣ್ಣ ನಾಯ್ಕನ ಕೈಹಿಡಿಯುತ್ತಾ ಹೇಳಲಾಗದು. ಬಹುಸಂಖ್ಯಾತ ದೀವರ ಸಮುದ ಭೀಮಣ್ಣ ನಾಯ್ಕ ಶಾಸಕನ ಮಾಡೋದು ಪಾ ಗುಣಧರ್ಮದ ದೇಶಪಾಂಡೆ ಬೇಡದ ಉಸಾಬರಿ. ಅದೆಷ್ಟೇ ಅಡ್ಡಗಾಲು ಹಾಕಿದರೂ ಈ ಸಲ ದೇಶ ತನಗೆ ಟಿಕೆಟ್ ತಂದುಕೊಡ್ತಾರೆಂಬ ನಿರೀ ಭೀಮಣ್ಣನಿದ್ದಾನೆ. ಈ ಬಾರಿ ಆತ ಕಾಂಗ್ರೆಸ್ ಸಿಗದಿದ್ದರೆ ಮುದ್ದಿನ ಅಳಿಯ (ಮಧು ಬಂ)ನ ಜೆ ಕ್ಯಾಂಡಿಡೇಟ್ ಪರ ಕೆಲಸ ಮಾಡೋದು ಖಂಡಿತ.. ನಡೆದ ಯುವ ಕಾಂಗ್ರೆಸ್ ಎಲೆಕ್ಷನ್‌ನಲ್ಲಿ ತಮ್ಮ ಚೇ ಜಿಲ್ಲಾಧ್ಯಕ್ಷನಾಗಿ ಮಾಡಿಕೊಂಡಿರುವ ನಿವೇದಿತ್ ಆಳ್ವ ದಿವಂಗತ ದೀಪಕ್ ಹೊನ್ನಾವರನ ಫೈನಾನ್ಸಿ ಸಹೋದರಿ ಸುಷ್ಮಾ ರೆಡ್ಡಿಯೂ ಟಿಕೆಟ್ ತಪ್ಪಿದರೆ ಜೆಡಿ ಕೆಲಸ ಮಾಡ್ತಾರೆಂಬ ಗುಸುಗುಸು ಹಬ್ಬಿದೆ. ಉತ್ತರ ಕ ಅಪ್ಪನಂತೆ ದೀವರ ಪ್ರಶ್ನಾತೀತ ನಾಯಕನಾ ಯೋಚನೆಯಲ್ಲಿರುವ ಮಧು ಬಂ ಮಾವ ಕಾ ಕ್ಯಾಂಡಿಡೇಟಾದರೆ ಇಕ್ಕಟ್ಟಿಗೆ ಸಿಲುಕುತ್ತಾನೆ, ಪಾಪ

ಕಾಂಗ್ರೆಸ್‌ನಲ್ಲಿ ಹಠಾತ್ ಹಾರಾಟ ಆರಂಭ ರಿಯಲ್ ಎಸ್ಟೇಟ್ ಕಿಂಗ್ ಉಪೇಂದ್ರ ಪೈ ಕ್ಯಾಂಡಿಡೇಟೆಂಬ ಧರತಿಯಲ್ಲಿ ಅಂಡಲೆಯಲಾರಂಭಿ ತನ್ನದೇ ಹೆಸರಿನ ಧರ್ಮಾರ್ಥ ಟ್ರಸ್ಟ್ ಕಟ್ಟಿಕೊಂ ಈ ಕೊಂಕಣಿ ಕುಳ ಯಾರ್‍ಯಾರದೋ ಮದುವೆ, ಪುಸ್ತ ಬೊಜ್ಜ ಸೋಬ್ನ, ಕ್ರಿಕೆಟ್ ಆಟ, ನಾಟಕ, ಸಾ ಕಾರ್ಯಕ್ರಮಕ್ಕೆ ಕಾಸು ಹಂಚುತ್ತಿದ್ದಾನೆ. ಜಾತಿ ವಿಪರೀತವಿರುವ ಮಂತ್ರಿ ದೋಷಪಾಂಡೆ ಈ ಕುಲಬ ಉಪೇಂದ್ರ ಪೈಗೆ ಟಿಕೆಟ್ ಕೊಡಿಸಿದರೂ ಪಡುವಂಥದ್ದೇನೂ ಇಲ್ಲವೆಂದು ಕಾಂಗ್ರೆಸ್‌ನ ಹಳೇ ತ ಕತೆ ಹೇಳುತ್ತಿವೆ!! ಉಪೇಂದ್ರನೂ ತನಗೆ ದೋಷ ಸಾಹೇಬರೇ ರಾಜಕೀಯ ದೀಕ್ಷೆ ಕೊಟ್ಟಿದ್ದಾರೆಂಬ ಅಭಿ ಮೂಡುವಂತೆ ಮಸಲತ್ತು ನಡೆಸಿದ್ದಾರೆ.

ಕಳೆದ ವಾರ ಸಿದ್ದಾಪುರಕ್ಕೆ ಜೆಡಿಎಸ್ ಯಜಮಾನ ಕುಮಾರಸ್ವಾಮಿ ಪರಿವಾರ ಬಿಜಯಂಗೆ ಬಹಿರಂಗ ಸಭೆಯಲ್ಲಿ ಶಶಿಭೂಷಣ ಹೆಗಡೆ ಮುಂ ಅಸೆಂಬ್ಲಿ ಚುನಾವಣೆಯಲ್ಲಿ ಸ್ಥಳೀಯ ಹುರಿಯಾ ಘೋಷಿಸಿ ಹೋಗಿದ್ದಾರೆ. ಕಳೆದ ಬಾರಿ ಸಣ್ಣ ಅಂತ ಸೋತ ಶಶಿ ಹವ್ಯಕ ಬ್ರಾಹ್ಮಣರ ಓಟು ಒಡೆಯು ಅನುಮಾನವೇ ಇಲ್ಲ.

ದೊಡ್ಡ ಸಂಖ್ಯೆಯಲ್ಲಿರುವ ರಾಮಕೃಷ್ಣ ಅಭಿಮಾನಿಗಳು ಮತ್ತು ಮಧು ಬಂ ದೆಸೆಯಿಂದ ಭಕ್ತರಾದ ದೀವರ ಒಂದು ವರ್ಗ ಜೆಡಿಎಸ್‌ಗೆ ಒಲಿ ಸಾಧ್ಯತೆಯಿದೆ. ಭೀಮಣ್ಣ ಬಿಟ್ಟು ಬೇರೆ ಯಾರೇ ಕಾ ಕ್ಯಾಂಡಿಡೇಟಾದರೆ ಬಿಜೆಪಿಯ ಕಾಗೇರಿ ಮತ್ತು ಜೆಡಿ ಶಶಿ ಎಂಬ ಹೈಗರ ಮಾಣಿಗಳ ಭರ್ಜರಿ ನಡೆಯಲಿದೆ. ಆಗ ಕಾಗೇರಿಯ ಜಡಭರತ ನೀತಿಯ ಬೇಸತ್ತಿರುವ ಹೈವಕರಲ್ಲಿ ಹೆಚ್ಚಿನವರು ಶಶಿಗೇ ಒತ್ತುತ್ತಾರೆ. ಬಿಜೆಪಿ ಸಂಸದ ಅನಂತ್ಮಾಣಿಯ ಕಾ ಹಠಾವೋ ಆಂದೋಲನದ ಲಾಭ ಜೆಡಿಎಸ್‌ಗೇ ದಕ್ಕ

ಕಾಂಗ್ರೆಸ್ ಭೀಮಣ್ಣನನ್ನು ಕಣಕ್ಕೆ ಇಳಿಸಿದರೆ ಆಗುವ ಸಮೀಕರಣವೇ ಬೇರೆ. ಆಗ ತ್ರಿಕೋನ ಕಾಳಗ ಕಾಂಗ್ರೆಸ್‌ನ ಭೀಮಣ್ಣನ ಜೀವನದ ಕೊನೆಯ ಈಡೇರುವ ಸಾಧ್ಯತೆ ಇರುತ್ತದೆ. ಬಿಜೆಪಿಯ ಕಾಗೇರಿ ಅನೈತಿಕ ಸಂಬಂಧ ಹೊಂದಿರುವ ದೋಷಪಾ ಪ್ರಾಮಾಣಿಕ ಪ್ರಯತ್ನ ಭೀಮಣ್ಣನ ಪರವಾಗಿ ನಡೆಸು ಸಮಯಸಾಧಕತನವನ್ನೇ ಸಿದ್ಧಾಂತ ಮಾಡಿಕೊಂಡ ಖುದ್ದು ದೇಶಪಾಂಡೆಯಲ್ಲೂ ಈ ಪ್ರಶ್ನೆಗೆ ಸದ್ಯಕ್ಕೆ ಉತ್ತರವಿಲ್ಲ. ನಂಬಿರುವ ದೊರೆಯ ನಾಡಿ ಅರಿಯಲಾಗದೆ ಭೀಮಣ್ಣ ನಾಯ್ಕ್ ಚಡಪಡಿಸುತ್ತಿ ಶಶಿ ಜೆಡಿಎಸ್‌ನ ಖಾಲಿ ಬುಟ್ಟಿಯನ್ನು ಜೇರೋ ತುಂಬುತ್ತ ಹೋಗಬೇಕಾದ ಸಂಕಟದಲ್ಲಿದ್ದಾನೆ; ಕಾ ನಿಂತ ನೆಲವೇ ಬರಿಯುತ್ತಿರುವ ದುಃಸ್ವಪ್ನ ಕಂಗೆಡಿಸು

■ ನಹಾ

ಮಂಡ್ಯ: ಮೈಷುಗರ್‌ಗೆ ಬೇಕಿದೆ ಸರ್ಕಾರದ ಸಹಾಯಹಸ್ತ


1933ರಲ್ಲಿ ಸ್ಥಾಪನೆಯಾದ ಮೈಷುಗರ್ ಕಾರ್ಖಾನೆ ...ಡ್ಯ ಜಿಲ್ಲೆಯ ರೈತರ ಜೀವನಾಡಿ ಎಂದರೆ ...ಗಲಾರದು. ಜಿಲ್ಲೆಯ ರೈತರಿಗೆ ಆರ್ಥಿಕ ಭದ್ರತೆ ನೀಡಿದ್ದ ...ಷುಗರ್ ಕಾರಣಕ್ಕೆ ಮಂಡ್ಯಕ್ಕೆ ಸಕ್ಕರೆ ನಾಡು ಎಂಬ ...ರು ಬಂದಿತು. ಕಳೆದೊಂದು ದಶಕದಿಂದ ಆರ್ಥಿಕ ...ತಿಗೊಳಗಾಗಿ ಆಗಾಗ್ಗೆ ಮುಚ್ಚುತ್ತಾ- ತೆರೆಯುತ್ತಾ ...ರು- ಕಾರ್ಮಿಕರ ಸಂಕಷ್ಟಕ್ಕೆ ಕಾರಣವಾದ ಮೈಷುಗರ್ ...ರ್ಖಾನೆ ಕಳೆದ ಎರಡು ವರ್ಷಗಳಿಂದ ಸಂಪೂರ್ಣವಾಗಿ ...ಗೊಂಡು ರೈತರು- ಕಾರ್ಮಿಕರು ಮತ್ತಷ್ಟು ಸಂಕಷ್ಟಕ್ಕೆ ...ಗುವಂತೆ ಮಾಡಿತ್ತು. ಈಗ ಬರೋಬ್ಬರಿ 2 ವರ್ಷಗಳ ...ರ ಮೈಷುಗರ್ ಕಾರ್ಖಾನೆ ಕಾರ್ಯಾರಂಭ ಮಾಡಲಿದ್ದು ...ರು- ಕಾರ್ಮಿಕರ ಮೊಗದಲ್ಲಿ ಮಂದಹಾಸ ...ಡುವಂತೆ ಮಾಡಿದೆ.

2015ರ ಏಪ್ರಿಲ್ 21ರಂದು ಸ್ಥಗಿತಗೊಂಡಿದ್ದ ...ಷುಗರ್ ಕಾರ್ಖಾನೆಯ ಚಕ್ರಗಳು ರೈತರು, ಕಾರ್ಮಿಕರು ...ೂ ವಿವಿಧ ಸಂಘಟನೆಗಳ ಮುಖಂಡರು ನಡೆಸಿದ ...ರಾಟದ ಫಲವಾಗಿ ಮತ್ತೆ ತಿರುಗಲಿವೆ. ಜುಲೈ 5ರಂದು ...ರ್ಖಾನೆಯ ಬಾಯ್ಲರ್‌ಗೆ ಚಾಲನೆ ನೀಡಲಾಗಿದ್ದು, ಜುಲೈ ...ಂದು ಸಿಎಂ ಸಿದ್ದರಾಮಯ್ಯನವರೇ ಕಾರ್ಖಾನೆಯನ್ನು ...ಕೃತವಾಗಿ ಪುನರಾರಂಭ ಮಾಡಲಿದ್ದಾರೆ.

...ಬ್ರಿಟಿಷ್ ಆಡಳಿತದಲ್ಲಿದ್ದ ಲೆಸ್ಲಿ ಕೋಲ್‌ಮನ್‌ರ ...ತ್ನದ ಫಲವಾಗಿ 1937ರಲ್ಲಿ ಆರಂಭವಾದ ಕಾರ್ಖಾನೆ ...ಡ್ಯ ಜಿಲ್ಲೆಯ ಆರ್ಥಿಕತೆಗೆ ಭದ್ರ ಬುನಾದಿ ಹಾಕಿತ್ತು. ...ಂದ 2000ರವರೆಗೆ ಕಾರ್ಖಾನೆ ಯಾವುದೇ ಆತಂಕವಿಲ್ಲದೆ ನಡೆದುಕೊಂಡು ಬಂತು. ಆದರೆ 2000 ...ಯಿಂದೀಚೆಗೆ ಕಾರ್ಖಾನೆ ಸ್ವಲ್ಪ-ಸ್ವಲ್ಪವಾಗಿ ಆರ್ಥಿಕ ...ತಿಯೆಡೆಗೆ ಸಾಗತೊಡಗಿತ್ತು. 2005ರ ಹೊತ್ತಿಗೆ ...ರ್ಖಾನೆ ಭಾರೀ ನಷ್ಟಕ್ಕೆ ಒಳಗಾಯಿತು. ಮೈಷುಗರ್ ...ಚ್ಚಿದರೆ ರೈತರು-ಕಾರ್ಮಿಕರು ಭಾರೀ ಸಂಕಷ್ಟಕ್ಕೆ ...ಗಾಗುತ್ತಾರೆಂದು ತಿಳಿದ ಈ ಹಿಂದಿನ ಸರ್ಕಾರಗಳು ...ರಾರು ಕೋಟಿಗಳನ್ನು ಕೊಟ್ಟು ಮೇಲೆತ್ತುವ ಪ್ರಯತ್ನ ...ಡಿದವು. ಆದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ...ಯೂರಪ್ಪನ ಆಪ್ತನೊಬ್ಬ ಯಾವಾಗ ಕಾರ್ಖಾನೆಗೆ ...ಟ್ಟನೋ ಆಗಿನಿಂದ ಕಾರ್ಖಾನೆ ಸಂಪೂರ್ಣ ...ಷ್ಟಕ್ಕೊಳಗಾಗಿ ಬಾಗಿಲು ಹಾಕಿಕೊಂಡಿತು. ಬಿಜೆಪಿ ಸರ್ಕಾರ ...ಗಡೆ ಮಾಡಿದ ನೂರಾರು ಕೋಟಿಯಷ್ಟು ಹಣವನ್ನು ...ಮಿಲ್, ಬಾಯ್ಲರ್‌ಗಳ ಖರೀದಿಗೆ ಬಳಸುವ ಬದಲು ...ರಿಗೆ ಸುರಿದ ಪರಿಣಾಮ ಕಾರ್ಖಾನೆ ಮತ್ತಷ್ಟು ...ೀಗತಿಗೆ ಸಿಲುಕಿತು. ಮೈಷುಗರ್ ಕಾರ್ಖಾನೆಗೆ ಬಂದು ...ಅಧ್ಯಕ್ಷರು ಹಾಗೂ ಅಧಿಕಾರಿಗಳ ಭ್ರಷ್ಟಾಚಾರ, ...ಷ್ಟ ಆಡಳಿತದ ಪರಿಣಾಮ 2015ರ ಹೊತ್ತಿಗೆ ...ರ್ಖಾನೆ ಆರ್ಥಿಕವಾಗಿ ದಿವಾಳಿ ಅಂಚಿಗೆ ತಲುಪಿ ಬಾಗಿಲು ...ಕೊಂಡಿತು. ಅದರ ಪರಿಣಾಮವೆಂಬಂತೆ ಜಿಲ್ಲೆಯಲ್ಲಿ ...ನ್ನೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿಹೋದರು.


ಬೇಕಿದೆ ಸಿಎಂ ಸಹಾಯಹಸ್ತ

2015-16 ಮತ್ತು 2016-17ರಲ್ಲಿ ಕಬ್ಬು ...ಲು ಮೈಷುಗರ್ ಕಾರ್ಖಾನೆಗೆ ಆಗಲೇ ಇಲ್ಲ. ...ಹೊಸ ಮಿಲ್ ಹಾಕಲಾಗಿದ್ದು ಪ್ರಸ್ತುತ 2 ಲಕ್ಷ ...ಕಬ್ಬು ಪೂರೈಸಲು ರೈತರಿಗೆ ಒಪ್ಪಿಗೆ ನೀಡಲಾಗಿದೆ. ...ಬಾಗದ ಪರಿಣಾಮ ಜಿಲ್ಲೆಯಾದ್ಯಂತ ಕಬ್ಬು ಬಿತ್ತನೆ ...ಲ್ಪ ಬೋರ್‌ವೆಲ್ ನೀರಿನ ಸಹಾಯದಿಂದ ಬೆಳೆದಿರುವ ...ಮಾತ್ರ ಕಾರ್ಖಾನೆಗೆ ಬರಲಿದೆ. ಒಂದು ಟನ್ ...3500 ನೀಡುವಂತೆ ರೈತರು, ಪ್ರಗತಿಪರ ...ಟನೆಗಳ ಮುಖಂಡರು ಸರ್ಕಾರವನ್ನು ಒತ್ತಾಯಿಸಿದ್ದಾರೆ. ...ಗಲೇ ಜಿಲ್ಲೆಯಾದ್ಯಂತ ಆಲೆಮನೆಗಳು ಟನ್ ಕಬ್ಬಿಗೆ ... ರೂ. ಆಸುಪಾಸು ನೀಡುತ್ತಿವೆ. ಮೈಷುಗರ್ ...ರ್ಖಾನೆ ಎಫ್‌ಆರ್‌ಪಿ ದರವಾದ 2550 ರೂ.ಗಳನ್ನು ...ವುದಾಗಿ ಹೇಳುತ್ತಿದೆ. ಆಲೆಮನೆಗಳಲ್ಲಿ ನೀಡುವ ...ತ 200 ರೂ. ಕಡಿಮೆ ಕೊಟ್ಟರೂ ಪರವಾಗಿಲ್ಲ ಎಫ್‌ಆರ್‌ಪಿ ದರ 2550 ರೂ. ಮಾತ್ರ ಬೇಡವೆಂದು ...ಪ್ರಕಾಶ್‌ರವರಿಗೆ ರೈತರು ಮನವಿ ಮಾಡಿದ್ದಾರೆ. ...ಆರ್‌ಪಿ ದರಕ್ಕೆ ರೈತರು ಮೈಷುಗರ್ ಕಾರ್ಖಾನೆಗೆ ...ಬಿ ತರುತ್ತಾರೆ? ಅಲ್ಲೇ ಪಕ್ಕದ ಯಾವುದಾದರೂ ...ಮನೆಗೆ 3000 ರೂ. ಹಣಕ್ಕೆ ಕಬ್ಬು ಮಾರುತ್ತಾರೆ. ...ಬಿದ್ದ ಆಡಳಿತ ಮಂಡಳಿ ಹಾಗೊಂದು ವೇಳೆ ...ರ್‌ಬಗೆ ಜೋತುಬಿದ್ದರೆ ಮೈಷುಗರ್ ಮತ್ತೆ ಸಂಕಷ್ಟಕ್ಕೆ ...ವುದರಲ್ಲಿ ಯಾವುದೇ ಅನುಮಾನವಿಲ್ಲ. ಸಿಎಂ ...ಮಯ್ಯನವರು ಈಗಾಗಲೇ ಕಾರ್ಖಾನೆಗೆ 130 ...ಗೂ ಹೆಚ್ಚು ಹಣ ನೀಡಿದ್ದಾರೆ. ಆದರೆ ಕುಸಿದು ...ದ ಕಾರ್ಖಾನೆಯ ಉದ್ಧಾರಕ್ಕೆ ಅದು ಏನಕ್ಕೂ ...ು. ಇನ್ನಷ್ಟು ನೆರವು ಚಾಚುವತ್ತ ಸಿದ್ದರಾಮಯ್ಯನವರು ...ಬೇಕಿದೆ.



ನಿರ್ಲಕ್ಷ್ಯತನದ ಪರಮಾವಧಿ

2004ರಿಂದೀಚೆಗೆ ಕಾರ್ಖಾನೆಗೆ ಬಂದ ಅಧ್ಯಕ್ಷರುಗಳು ಹಾಗೂ ಆಡಳಿತ ನಡೆಸಿದ ಅಧಿಕಾರಿಗಳ ದುಷ್ಟಕೂಟ ಬೆಂದ ಮನೆಯಲ್ಲಿ ಗಳ ಹಿರಿಯುವ ಕೆಲಸ ಮಾಡಿದ್ದರಿಂದ ಕಾರ್ಖಾನೆ ಮತ್ತಷ್ಟು ನಷ್ಟಕ್ಕೊಳಗಾಗಿ ಅಧೋಗತಿಗೆ ಇಳಿಯಿತು. ವಿವಿಧ ಪಕ್ಷಗಳ ರಾಜಕೀಯ ಮುಖಂಡರೇ ಅಧ್ಯಕ್ಷರಾಗಿ ಕಾರ್ಖಾನೆ ಅಭಿವೃದ್ಧಿಗಿಂತ ತಮ್ಮ ಅಭಿವೃದ್ಧಿಗೆ ಗಮನ ಕೊಟ್ಟರು. ಹಾಗಂತ ಹಿಂದಿನ ಅಧ್ಯಕ್ಷರುಗಳು ಸಂಪೂರ್ಣ ಸಾಚಾಗಳೇನಲ್ಲ. ಅವರ ಕಾಲದಲ್ಲಿಯೂ ಭ್ರಷ್ಟಾಚಾರ ನಡೆದಿತ್ತು. ಆದರೆ ಅದರ ಪ್ರಮಾಣ ಸಣ್ಣದಾಗಿತ್ತಷ್ಟೇ. ಆದರೆ 2005ರ ನಂತರ ಬಂದ ಅಧ್ಯಕ್ಷರುಗಳು ತಿನ್ನಲು ಕುಂತಾಗ ಕಾರ್ಖಾನೆಯ ಆಡಳಿತಾಧಿಕಾರಿಗಳು ತಾವೇ ನಿಂತು ಉಣ್ಣಲು ಮಣೆ ಹಾಕಿಕೊಟ್ಟರು. ಹಾಗಾಗಿ ಕಾರ್ಖಾನೆ ಮತ್ತಷ್ಟು ನಷ್ಟಕ್ಕೊಳಗಾಯಿತು.




2004ರಲ್ಲಿ 30 ಮೆಗಾವ್ಯಾಟ್ ಸಾಮರ್ಥ್ಯದ ಸಹ-ವಿದ್ಯುತ್ ಘಟಕ (ಕೋ-ಜೆನ್) ಹಾಕಲು ಮೈಷುಗರ್ ಮುಂದಾಗಿತ್ತು. 30 ಮೆಗಾವ್ಯಾಟ್ ಸಾಮರ್ಥ್ಯದ ಕೋ-ಜೆನ್ ಹಾಕಬೇಕಾದರೆ ಪ್ರತಿ ದಿನ 5000 ಟನ್ ಕಬ್ಬು ಅರೆಯಬೇಕು. ಆದರೆ ಮೈಷುಗರ್‌ಗೆ ಆ ಸಾಮರ್ಥ್ಯವಿಲ್ಲ. ಹಾಗಾಗಿ ಯಾವುದೇ ಕಾರಣಕ್ಕೂ ಕೋ-ಜೆನ್ ಘಟಕ ಬೇಡವೇ ಬೇಡ ಎಂದು ಕಾರ್ಮಿಕರು ಬೇಡಿಕೊಂಡರೂ ಅಧ್ಯಕ್ಷರು ಹಾಗೂ ಅಧಿಕಾರಿ ವರ್ಗ ಕೇಳಲೇ ಇಲ್ಲ. ಹೋಗಲಿ 30 ಮೆಗಾವ್ಯಾಟ್ ಬೇಡ, 15 ಮೆಗಾವ್ಯಾಟ್ ಸಾಮರ್ಥ್ಯದ 2 ಘಟಕಗಳನ್ನು ಹಾಕಿ ಎಂದು ಕಾರ್ಮಿಕರು ಬಾಯಿ ಬಡಿದುಕೊಂಡರೂ ನುಂಗುವುದನ್ನೇ ಕಾಯಕ ಮಾಡಿಕೊಂಡಿದ್ದ ಅಧಿಕಾರಿಗಳು ಹಾಗೂ ರಾಜಕೀಯ ಪಕ್ಷಗಳ ಅಧ್ಯಕ್ಷರುಗಳ ಕೂಟ 30 ಮೆಗಾವ್ಯಾಟ್‌ನ ಕೋ-ಜೆನ್ ಘಟಕ ಪ್ರಾರಂಭಿಸಿಯೇ ಬಿಟ್ಟಿತು. ಪ್ರತಿದಿನ 5 ಸಾವಿರ ಟನ್ ಕಬ್ಬು ಅರೆಯುವ ಸಾಮರ್ಥ್ಯವಿರಬೇಕಾಗಿದ್ದ ಕಾರ್ಖಾನೆ ಯಲ್ಲಿ ಅಂದು 2500 ಟನ್ ಅರೆಯುವ ಸಾಮರ್ಥ್ಯ ಮಾತ್ರ ಇತ್ತು. ಎರಡು ಬಾಯ್ಲರ್‌ಗಳು ಹಾಳಾಗಿ ರಿಪೇರಿ ಕೆಲಸ ನಡೆಯುತ್ತಿತ್ತು. ಹೀಗಿದ್ದರೂ ಕಾಮನ್‌ಸೆನ್ಸ್ ಇಲ್ಲದಂತೆ ಅಧಿಕಾರಿಗಳ ವರ್ಗ ಅದ್ಯಾವ ಆಮಿಷಕ್ಕೆ ಒಳಗಾಗಿ 30 ಮೆಗಾವ್ಯಾಟ್‌ನ ಕೋ-ಜೆನ್ ಘಟಕ ತೆರೆಯಿತೋ ಭಗವಂತನೇ ಬಲ್ಲ.

ಐತಿಹಾಸಿಕ ಕಾರ್ಖಾನೆಯೆಂಬ ಹೆಗ್ಗಳಿಕೆ, ಸರ್ಕಾರಿ ಸ್ವಾಮ್ಯವೆಂಬ ಪ್ರತಿಷ್ಠೆ ಕಾರಣಕ್ಕೆ, 2004ರಲ್ಲಿ ಧರ್ಮಸಿಂಗ್ ಸಿಎಂ ಆದ ನಂತರದಿಂದ ಇದುವರೆಗೂ 435 ಕೋಟಿಗಿಂತಲೂ ಹೆಚ್ಚು ಹಣವನ್ನು ಕಾರ್ಖಾನೆಗೆ ಕೊಡಲಾಗಿದೆ. ಸಿಎಂ ಸಿದ್ದರಾಮಯ್ಯನವರೊಬ್ಬರೇ 130 ಕೋಟಿಗೂ ಹೆಚ್ಚು ಹಣವನ್ನು ಮೈಷುಗರ್‌ಗೆ ನೀಡಿದ್ದಾರೆ. ಯಾರ್‍ಯಾರು ಎಷ್ಟೆಷ್ಟು ಹಣ ತಿಂದರೋ ಗೊತ್ತಿಲ್ಲ, ಕಾರ್ಖಾನೆ ಮಾತ್ರ ನಷ್ಟದಿಂದೀಚೆಗೆ ಮಾತ್ರ ಹೊರ ಬರುತ್ತಿಲ್ಲ. ಈಗ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಬಂದಿರುವ ಪ್ರಕಾಶ್ ಕಾರ್ಖಾನೆಯಲ್ಲಿರುವ ಕಾರ್ಮಿಕರು, ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಮಾಡಿ ಕಾರ್ಖಾನೆ ಆರಂಭವಾಗುವಂತೆ ಮಾಡಿದ್ದಾರೆ. ಎಂಎಸ್‌ಐಎಲ್ ಎಂಡಿ ಮತ್ತು ಕಬ್ಬು ಆಯುಕ್ತರು ಕೂಡ ಆಗಿರುವ ಪ್ರಕಾಶ್‌ರವರು ಮೈಷುಗರ್‌ಗೆ ಬಂದನಂತರ ಕಾರ್ಖಾನೆಯ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಹಾಗೂ ಕಾರ್ಖಾನೆ ಯನ್ನು ನಷ್ಟದಿಂದ ಮೇಲೆತ್ತಲು ಹಲವು ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ಕಾರ್ಯಗತಗೊಳಿಸಲು ಹೊರಟಿದ್ದಾರೆ.

ಆದರೆ ದುರಾದೃಷ್ಟಕ್ಕೆ ಮಳೆಯಿಲ್ಲದೆ ಕಬ್ಬು ಬೆಳೆ ಬಂದಿಲ್ಲ. 8 ಲಕ್ಷ ಟನ್ ಕಬ್ಬು ಅರೆದರೆ ಮಾತ್ರ ಕಾರ್ಖಾನೆಗೆ ಲಾಭ ಬರೋದು. ಲಾಭ ಬಂದರೆ ರೈತರಿಗೆ ಹಣ ಬಟವಾಡೆ ಮತ್ತು ಕಾರ್ಮಿಕರಿಗೆ ಸಂಬಳ ಕೊಡಲು ಸಾಧ್ಯ. ಆದರೆ ಈಗ ಮೈಷುಗರ್ ವ್ಯಾಪ್ತಿಯಲ್ಲಿ ಕಬ್ಬು ಒಪ್ಪಿಗೆ ಮಾಡಿರುವ ರೈತರಿಂದ ಹೆಚ್ಚೆಂದರೆ 1.75ರಿಂದ 2 ಲಕ್ಷ ಟನ್ ಮಾತ್ರ ಕಬ್ಬು ಬರಬಹುದು. ಹೀಗಾದರೆ ಕಾರ್ಖಾನೆ ಆರಂಭವಾದರೂ ಮುಂದೇನು? ಎಂಬ ಆತಂಕ ರೈತರು ಮತ್ತು ಕಾರ್ಮಿಕರನ್ನು ಕಾಡುತ್ತಿದೆ.

ನಷ್ಟಕ್ಕೆ ಹಲವು ಕಾರಣ

2004ರಿಂದೀಚೆಗೆ ಬಂದ ಸರ್ಕಾರಗಳು 435 ಕೋಟಿಗೂ ಹಣವನ್ನು ಕೊಟ್ಟರೂ ಮೈಷುಗರ್ ಕಾರ್ಖಾನೆ ನಷ್ಟಕ್ಕೆ ಒಳಗಾಗಲು ಹಲವು ಕಾರಣಗಳಿವೆ. ಯಡಿಯೂರಪ್ಪ ಸಿಎಂ ಆಗಿದ್ದಾಗ ಅವರ ಆಪ್ತ ಶಿಷ್ಯ ಮೈಷುಗರ್‌ಗೆ ಕಾಲಿಟ್ಟ. ಕಾರ್ಖಾನೆಯ ಮಿಲ್‌ಗಳ ಅರೆಯುವ ಸಾಮರ್ಥ್ಯವನ್ನು 5000 ಟನ್‌ಗೆ ಹೆಚ್ಚಳ ಮಾಡುತ್ತೇನೆಂದು ಅದಕ್ಕಾಗಿ ಹಳೇ ಮಿಲ್ ಮತ್ತು ಬಾಯ್ಲರ್ ರಿಪೇರಿ ಮಾಡಿಸಲು ಮುಂದಾದ. ಆದರೆ ಹಳೇ ಮಿಲ್ ಮತ್ತು ಬಾಯ್ಲರ್ ರಿಪೇರಿ ಮಾಡಿಸಿದ ಖರ್ಚಿನಲ್ಲೇ ಹೊಸ ಮಿಲ್ ಮತ್ತು ಬಾಯ್ಲರ್ ಹಾಕಬಹುದಿತ್ತು. ಈತನಿಗೆ ಸಹಕಾರ ಕೊಟ್ಟ ಅಧಿಕಾರಿಗಳ ಅದಕ್ಷತೆಯಿಂದ ನೋಡನೋಡುತ್ತಿದ್ದಂತೆ ಕಾರ್ಖಾನೆ ಸರಿಪಡಿಸ ಲಾಗದಷ್ಟು ನಷ್ಟಕ್ಕೆ ಒಳಗಾಗಿ, ಆರ್ಥಿಕವಾಗಿ ದಿವಾಳಿ ಅಂಚಿಗೆ ತಲುಪಿ ರೋಗಗ್ರಸ್ತ ಕಾರ್ಖಾನೆಗಳ ಪಟ್ಟಿಗೆ ಸೇರಿತು. ಎಚ್.ಆರ್. ಮಹದೇವ್ ಎಂಬಾತ ವ್ಯವಸ್ಥಾಪಕ ನಿರ್ದೇಶಕನಾಗಿ ಬಂದಾಗ ಆತ ಪರಮ ಪ್ರಾಮಾಣಿಕ, ದಕ್ಷನೆಂಬಂತೆ ಕೊಟ್ಟ ಪೋಸು ನೋಡಿ ಕಾರ್ಖಾನೆ ಉದ್ಧಾರವಾಗಿಯೇ ಹೋಯಿತು ಎಂದುಕೊಂಡರೆ, ಬಾಯ್ಲರ್ ಸಂಪೂರ್ಣ ಹಾಳಾಗಿಹೋಯಿತು. ತನಗೆ ಬಹುಪರಾಕ್ ಹಾಕುವ ಅಧಿಕಾರಿಗಳ ವರ್ಗವನ್ನು ಜೊತೆಯಲ್ಲಿಟ್ಟುಕೊಂಡು ತನ್ನ ಅದಕ್ಷತೆ ಮುಚ್ಚಿಹಾಕಲು ಅದನ್ನು ಕಾರ್ಮಿಕರ ತಲೆಗೆ ಕಟ್ಟಿ ಕಾರ್ಮಿಕ ಸಂಘಟನೆಗಳ ನಡುವೆ ಒಡಕು ಮೂಡಿಸಿದ. ಕೆಲವು ಕಾರ್ಮಿಕರ ಮೇಲೆ ಕೇಸು ಹಾಕಿ ಅಧ್ವಾನ ಮಾಡಿಟ್ಟುಹೋದ.




ಎಚ್.ಆರ್.ಮಹದೇವ್, ಪಿ.ಕೆ.ಗರ್ಗ್, ಅಜಯ್ ನಾಗಭೂಷಣ್, ಜಿಯಾವುಲ್ಲ (ಇಬ್ಬರು ಪ್ರಭಾರ) ನಂತರ ಈಗ ಪ್ರಕಾಶ್ ಎಂಡಿಯಾಗಿ ಬಂದಿದ್ದಾರೆ. 6 ತಿಂಗಳಿನಿಂದ ಸಂಬಳ ಇಲ್ಲದೆ ಕೆಲಸ ಮಾಡುತ್ತಿರುವ ಕಾರ್ಮಿಕರು ತಮ್ಮ ಬಾಕಿ ಸಂಬಳ ಅತ್ಲಾಗಿರಲಿ, ಮೈಷುಗರ್ ಕಾರ್ಖಾನೆ ಮೊದಲು ಪ್ರಾರಂಭಿಸಿ, ಲಾಭ ಬಂದಮೇಲೆ ಸಂಬಳ ಕೊಡಿ ಎಂದು ಕಾರ್ಮಿಕರು ಎಂಡಿ ಪ್ರಕಾಶ್‌ಗೆ ಹೇಳಿದ್ದರು. ರೈತರು ಕೂಡ ಮೈಷುಗರ್ ಉಳಿಯಲು ನಾವು ಕೈ ಜೋಡಿಸುತ್ತೇವೆ ಅಂತ ಹೇಳಿ ಆಲೆಮನೆಗಿಂತ 200 ರೂ ಕಡಿಮೆ ಆದ್ರೂ ಪರವಾಗಿಲ್ಲ ಕಬ್ಬು ಹೊಡೀತೀವಿ ಅಂತ ಹೇಳುತ್ತಿದ್ದಾರೆ. ಆದ್ರೆ ಎಂಡಿ ಪ್ರಕಾಶ್ ಎಫ್‌ಆರ್‌ಪಿ ದರ 2550 ರೂಗಳನ್ನು ಮೊದಲು ಕೊಡುವುದಾಗಿ ಹೇಳಿದ್ದಾರೆ. ಅಲ್ಲದೆ ಈ ಹಿಂದೆ 2015-16ನೇ ಸಾಲಿನಲ್ಲಿ ಬನ್ನಾರಿ ಅಮ್ಮನ್ ಕಾರ್ಖಾನೆಗೆ ಸಿಎಂ ಸಿದ್ದರಾಮಯ್ಯನವರು ಹೇಳಿದ್ದರಿಂದಲೇ ಕಬ್ಬು ಸರಬರಾಜು ಮಾಡಿದ್ದರು. ಕಾನೂನು ಪ್ರಕಾರ ಒಪ್ಪಿಗೆ ವ್ಯಾಪ್ತಿಗೆ ಕಾರ್ಖಾನೆಯಿಂದ ಬೇರೆ ಕಾರ್ಖಾನೆಗೆ ಕಬ್ಬು ಸಾಗಾಣಿಕೆ ಮಾಡಲು ಸಬ್ಸಿಡಿ ಕೊಡಬೇಕಿತ್ತು. ಆದರ ಬಾಬ್ತು ರೈತರಿಗೆ 2.55 ಕೋಟಿ ಹಣ ಸಾಗಾಣಿಕೆ ವೆಚ್ಚವಾಗಿ ಬರಬೇಕಿತ್ತು. ಅದನ್ನು ಕೊಡಿಸುವುದಾಗಿ ಎಂಡಿ ಪ್ರಕಾಶ್ ಹೇಳಿದ್ದಾರೆ. ಇನ್ನು ಬನ್ನಾರಿ ಅಮ್ಮನ್ ಕಾರ್ಖಾನೆ ಎಫ್‌ಆರ್‌ಪಿ ದರಕ್ಕಿಂತ ಕಡಿಮೆ ಹಣವನ್ನು ಕೊಟ್ಟಿದ್ದು, ಅದರ ಬಾಕಿ 3 ಕೋಟಿ ಹಣವನ್ನು ರೈತರಿಗೆ ಕೊಟ್ಟಿಲ್ಲ. ಈ ಹಣವನ್ನು ಕೇಳಿದರೆ ನಾವೇನೂ ಮೈಷುಗರ್ ವ್ಯಾಪ್ತಿಯ ರೈತರ ಕಬ್ಬು ಅರೆಯುವುದಾಗಿ ಹೇಳಿರಲಿಲ್ಲ, ಸರ್ಕಾರವೇ ಬಲವಂತ ಮಾಡಿದ್ದರಿಂದ ಅರೆದಿದ್ದೇವೆ. ಹಾಗಾಗಿ ನಾವು ಕೊಡೋದಿಲ್ಲ ಅಂತ ಹೇಳಿದ್ದಾರೆ. ಅದರ ಬಾಬ್ತು 3 ಕೋಟಿ ಹಣವನ್ನು ಜಿಲ್ಲಾಧಿಕಾರಿ, ಸರ್ಕಾರ ಬನ್ನಾರಿ ಅಮ್ಮನ್ ಷುಗರ್ಸ್ ಆಡಳಿತ ಮಂಡಳಿ ಜೊತೆ ಮಾತನಾಡಿ ಕೊಡಿಸಿದರೆ, ಮೊದಲೇ ಸಂಕಷ್ಟದಲ್ಲಿ ಬೇಯುತ್ತಿರುವ ರೈತರಿಗೆ ಅನುಕೂಲವಾಗಲಿದೆ.

ಗೋಸುಂಬೆ ರಾಜಕಾರಣಿಗಳು

ಮೈಷುಗರ್ ಕಾರ್ಖಾನೆ ಮುಚ್ಚಿ ಎರಡು ವರ್ಷಗಳು ಕಳೆದರೂ ಜಿಲ್ಲೆಯ ರಾಜಕೀಯ ಪಕ್ಷಗಳು ಅತ್ತ ಕಣ್ಣೆತ್ತಿಯೂ ನೋಡಲಿಲ್ಲ. ಮೈಷುಗರ್ ಕಾರ್ಖಾನೆ ಮುಚ್ಚಿದ ಕಾರಣಕ್ಕೆ ಸಾಲುಸಾಲು ರೈತರು ಹೆಣಗಳಾಗಿ ಮಣ್ಣು ಸೇರಿದರೂ ರಾಜಕೀಯ ಪಕ್ಷಗಳ ಮುಖಂಡರು ತಲೆಕೆಡಿಸಿಕೊಳ್ಳಲಿಲ್ಲ. ಜಿಲ್ಲೆಯಲ್ಲಿ ಪ್ರಬಲವಾಗಿರುವ ಜೆಡಿಎಸ್ ಪಕ್ಷ, ಅದರ ಜಿಲ್ಲಾಧ್ಯಕ್ಷ ಸೇರಿದಂತೆ ಹಾಲಿ ಶಾಸಕರು, ಮಾಜಿಗಳು ಕಾರ್ಖಾನೆ ಆರಂಭಕ್ಕೆ ಸಣ್ಣದೊಂದು ಪ್ರತಿಭಟನೆಯನ್ನು ನಡೆಸಲಿಲ್ಲ. ಕಾರ್ಖಾನೆ 2 ವರ್ಷ ಮುಚ್ಚಿದಾಗಲೂ ಹಿರಿಯರಾದ ಜಿ.ಮಾದೇಗೌಡ, ಚೌಡಯ್ಯನಂತಹವರು ರೈತರು - ಜನಸಾಮಾನ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರತಿಭಟನೆ ಮಾಡಿ ಸರ್ಕಾರದ ಮೇಲೆ ಒತ್ತಡ ಹೇರುವ ಕೆಲಸವನ್ನು ಮಾಡಲಿಲ್ಲ. ಮಂಡ್ಯ ಶಾಸಕ ಅಂಬರೀಶ್‌ಗೆ ಮಂತ್ರಿ ಸ್ಥಾನವಿದ್ದರೂ ಕಾರ್ಖಾನೆಯ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಅಂಬರೀಶ್ ನಿಷ್ಕ್ರಿಯತೆ ಕಂಡೇ ಆತನನ್ನು ಸಚಿವ ಸ್ಥಾನದಿಂದ ಕಿತ್ತು ಹಾಕಿದರೂ ಆತನಿಗಿನ್ನೂ ಬುದ್ಧಿ ಬಂದಿಲ್ಲ. ಮೈಷುಗರ್ ಕಾರ್ಖಾನೆ ಆರಂಭಕ್ಕೂ ಮುನ್ನ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಪ್ಪನವರ ನೇತೃತ್ವದಲ್ಲಿ ಕಳೆದ ಜೂನ್ 29ರಂದು ಕಾರ್ಖಾನೆ ಆವರಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿತ್ತು. ಸಭೆಗೆ ವಿವಿಧ ಸಂಘಟನೆಗಳ ಮುಖಂಡರಾದ ಡಾ.ವಾಸು, ಶಂಭೂನಹಳ್ಳಿ ಸುರೇಶ್, ಕೃಷ್ಣ, ಶಾಸಕರಾದ ರಮೇಶ್‌ಬಾಬು, ನಾರಾಯಣಗೌಡ, ಮಾಜಿ ಶಾಸಕರಾದ ಎಂ.ಶ್ರೀನಿವಾಸ್, ಎಂ.ಎಸ್.ಆತ್ಮಾನಂದ, ಚೌಡಯ್ಯ, ಜಿ.ಮಾದೇಗೌಡ ಎಲ್ಲರೂ ಬಂದಿದ್ದರು. ಆದರೆ ಅಂದು ಮದ್ದೂರಿನ ಕೊಪ್ಪ ಜಿ.ಪಂ. ಉಪ ಚುನಾವಣೆಯ ಅಭ್ಯರ್ಥಿ ಹಾಗೂ ಮಂಡ್ಯ ನಗರದ 28ನೇ ವಾರ್ಡ್‌ನ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ಬಂದಿದ್ದ ಅಂಬರೀಶ್ ಸಭೆಗೆ ಬರಲೇ ಇಲ್ಲ. ಈ ಸಭೆ ತನಗೆ ಬಹಳ ಮುಖ್ಯವಾಗಿತ್ತು ಎಂಬುದು ಅಂಬರೀಶ್ ತಿಳಿಯಲೇ ಇಲ್ಲ. ಮಂಡ್ಯ ಶಾಸಕನಾಗಿರುವ ಅಂಬರೀಶ್‌ಗೆ ರೈತರು- ಕಾರ್ಮಿಕರು ಕಾಣಲೇ ಇಲ್ಲ. ಇನ್ನು ಅಂಬರೀಶ್ ತನ್ನ ವ್ಯಾಪಾರ- ವ್ಯವಹಾರದ ನಿಮಿತ್ತ ಮಲೇಷ್ಯಾಗೆ ಹೋಗುತ್ತಿರುವುದರಿಂದ ಸಿಎಂ ಸಿದ್ದರಾಮಯ್ಯ ಮೈಷುಗರ್ ಪುನರಾರಂಭ ಮಾಡಲು ಜುಲೈ 11ರಂದು ಬರಲ್ಲ ಎಂದು ಆತನ ಶಿಷ್ಯರೇ ಹೇಳುತ್ತಿದ್ದಾರೆ. ವಸತಿ ಸಚಿವನಾಗಿದ್ದ ಸಂದರ್ಭದಲ್ಲೂ ಜಿಲ್ಲೆಯ ಅಭಿವೃದ್ಧಿಗೆ ಏನೂ ಮಾಡದ ಅಂಬರೀಶ್ ಈಗ ಮತ್ತೆ ಮುಂದಿನ ಬಾರಿ ಎಂಎಲ್‌ಎ ಆಗಲು ಬಯಸಿದ್ದಾರೆಂಬ ಸುದ್ದಿ ಕೇಳಿಬರುತ್ತಿದೆ. ಇಂತಹ ಗೋಸುಂಬೆ ರಾಜಕಾರಣಿಗಳ ಬಗ್ಗೆ ಜಿಲ್ಲೆಯ ಜನರು ಎಚ್ಚರಿಕೆಯಿಂದಿರಲಿ.

■ ಮಂಡ್ಯ ನಾಗೇಶ್


ರೋಣ: ದೊಡ್ಡಮೇಟಿ ಎಂಟ್ರಿಯಿಂದ ಕಂಗಾಲಾದ 'ಪಾಟೀಲ'ರ 'ಬಂಡಿ



ರವೀಂದ್ರನಾಥ್ ದೊಡ್ಡಮೇಟಿ

ರೋಣದ ಪೊಲಿಟಿಕಲ್ ಗ್ರಾಫು ಕೊಂಚ ತಬ್ಬಿಬ್ಬಾಗಿದೆ. ಕಾಂಗ್ರೆಸ್‌ನ ಹಾಲಿ ಶಾಸಕ ಜಿ.ಎಸ್. ಪಾಟೀಲ್ ಮತ್ತು ಬಿಜೆಪಿಯ ಕಳಕಪ್ಪ ಬಂಡಿ ಪರಸ್ಪರ ಕಾದಾಟಕ್ಕೆ ಸ್ಕೆಚ್ ಹೆಣೆದು ಕೂತಿದ್ದರು. ಯಾಕೆಂದ್ರೆ ಇವರಿಬ್ಬರನ್ನು ಬಿಟ್ಟರೆ ಇಲ್ಲಿ ಬೇರೆ ಪಕ್ಷದವರಿಗೆ ಅಸ್ತಿತ್ವವೇ ಇರಲಿಲ್ಲ. ಆದರೆ ರೋಣ ರಾಜಕಾರಣದ ಹಳೇ ದಿಗ್ಗಜ ಕುಟುಂಬವೊಂದು ತನ್ನ ರಾಜಕೀಯ ಅಜ್ಞಾತವಾಸದಿಂದ ಮೈಕೊಡವಿ ಎದ್ದು ನಿಂತಿರೋದು ಇವರಿಬ್ಬರ ನಿದ್ದೆಗೆಡಿಸಿದೆ. ಆದ್ಯಾವಾಗ ಮಾಜಿ ಸಿಎಂ ಕುಮಾರಸ್ವಾಮಿಯ ಸಮ್ಮುಖದಲ್ಲಿ ರವೀಂದ್ರನಾಥ ದೊಡ್ಡಮೇಟಿ ಜೆಡಿಎಸ್ ಸೇರಿಕೊಂಡ ಸುದ್ದಿ ತಲುಪಿತೋ ಆಗಿನಿಂದ ರೋಣದ ರಾಜಕೀಯ ಲೆಕ್ಕಾಚಾರವೇ ತಲೆಕೆಳಗಾಗಿದೆ.

ರೋಣದ ರಾಜಕಾರಣದಲ್ಲಿ ದೊಡ್ಡಮೇಟಿ ಕುಟುಂಬ ತನ್ನದೇ ಆದ ವರ್ಚಸ್ಸು ಹೊಂದಿದೆ. ಈಗ ಜೆಡಿಎಸ್ ಸೇರಿಕೊಂಡಿರುವ ರವೀಂದ್ರನ ಅಜ್ಜ ಅಂದಾನಪ್ಪ ದೊಡ್ಡಮೇಟಿ ಸ್ವಾತಂತ್ರ್ಯಪೂರ್ವ ಕಾಲದಿಂದಲೇ ಜನನಾಯಕರಾಗಿದ್ದವರು. 1933ರಲ್ಲಿ ಮುಂಬೈ ಅಸೆಂಬ್ಲಿಗೆ ಧಾರವಾಡ ಕ್ಷೇತ್ರದಿಂದ ಆಯ್ಕೆಯಾಗಿದ್ದ ಅವರು ನಂತರ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ತಮ್ಮ ಸ್ವಗ್ರಾಮ ಜಕ್ಕಲಿಗೆ ಗಾಂಧೀಜಿ ಮತ್ತು ನೆಹರೂರವರನ್ನು 1934ರಲ್ಲಿ ಕರೆಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಜೈಲು ಶಿಕ್ಷೆಯನ್ನೂ ಅನುಭವಿಸಿದ್ದರು. 1952ರಲ್ಲಿ ಮೊದಲ ಬಾರಿ, 1958ರಲ್ಲಿ ಎರಡನೆಯ ಬಾರಿ, 1967ರಲ್ಲಿ ಮೂರನೆ ಬಾರಿ ಹಾಗೂ 1978ರಲ್ಲಿ ನಾಲ್ಕನೆ ಬಾರಿ ಕಾಂಗ್ರೆಸ್ ಪಕ್ಷದಿಂದ ಮೈಸೂರು ಅಸೆಂಬ್ಲಿಗೆ ಶಾಸಕರಾಗಿ ಆಯ್ಕೆಯಾಗಿದ್ದರು. ನಾಲ್ಕನೇ ಬಾರಿ ಶಾಸಕರಾಗಿದ್ದಾಗ ಸಣ್ಣ ನೀರಾವರಿ ಮಂತ್ರಿ ಗಾದಿಯೂ ಅವರಿಗೆ ಒಲಿದುಬಂದಿತ್ತು. ಕರ್ನಾಟಕ ಏಕೀಕರಣ ಹೋರಾಟದಲ್ಲೂ ಅಂದಾನಪ್ಪನವರು ಭಾಗವಹಿಸಿದ್ದರು.

ಆದರೆ ಕಾಂಗ್ರೆಸ್‌ಗೆ ಅಷ್ಟೆಲ್ಲ ನಿಷ್ಠರಾಗಿದ್ದ ಅಂದಾನಪ್ಪನವರ ಮಗ ಜ್ಞಾನದೇವ ದೊಡ್ಡಮೇಟಿಯವರು ತಮ್ಮ ರಾಜಕಾರಣದ ಹಾದಿ ತುಳಿದದ್ದು ಮಾತ್ರ ಜನತಾ ಪಕ್ಷದಲ್ಲಿ. 1981ರಲ್ಲಿ ಜನತಾ ಪಕ್ಷಕ್ಕೆ ಸೇರ್ಪಡೆಯಾಗಿ 1983 ಮತ್ತು 85ರಲ್ಲಿ ಎರಡು ಬಾರಿ ಶಾಸಕರಾಗಿ ಆಯ್ಕೆಯಾದ ಅವರು 1989ರ ಚುನಾವಣೆಯಲ್ಲಿ ಮೂರನೇ ಬಾರಿ ಜನತಾ ಪಕ್ಷದಿಂದ ಸ್ಪರ್ಧಿಸಿದಾಗ ಜಿ.ಎಸ್.ಪಾಟೀಲರ ವಿರುದ್ಧ ಸೋಲುಂಡರು. ಅನಂತರದಲ್ಲಿ ಆ ಕುಟುಂಬ ಸಕ್ರಿಯ ರಾಜಕಾರಣದಿಂದ ಅದ್ಯಾಕೊ ದೂರ ಉಳಿಯಿತು.


ಜಿ.ಎಸ್. ಪಾಟೀಲ


ಕಳಕಪ್ಪ ಬಂಡಿ


1994ರ ವಿಧಾನಸಭಾ ಚುನಾವಣೆ ಸಮಯದಲ್ಲಿ ರಾಮಕೃಷ್ಣ ಹೆಗಡೆ ಮತ್ತು ದೇವೇಗೌಡರು ಜ್ಞಾನದೇವ ದೊಡ್ಡಮೇಟಿಯವರನ್ನು ಸಂಪರ್ಕಿಸಿ "ರೋಣ ಕ್ಷೇತ್ರದಿಂದ ನೀವು ನಿಲ್ಲಿ ಅಥವಾ ನಿಮ್ಮ ಅಣ್ಣನ ಮಗ ರವಿಂದ್ರನಾಥರನ್ನಾದರು ನಿಲ್ಲಿಸಿ. ನಾವು ಬಿಫಾರ್ಮ್ ಕೊಡುತ್ತೇವೆ" ಅಂದಿದ್ದರು. ಆದರೆ ಜ್ಞಾನದೇವರವರು 1983ರ ಚುನಾವಣೆಯಲ್ಲಿ ಜನತೆ ತಮ್ಮ ಕುಟುಂಬಕ್ಕೆ ಸೋಲಿನ ತೀರ್ಪು ನೀಡಿದ್ದು, ತಮ್ಮ ಕುಟುಂಬ ಸ್ಪರ್ಧಿಸುವುದು ಬೇಡ ಎಂಬ ನಿರ್ಧಾರಕ್ಕೆ ಬಂದಿದ್ದರು.


ಕೊನೆಗೆ ಅವರೇ ಮುಂದೆನಿಂತು ಸೂಡಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದ ಶ್ರೀಶೈಲಪ್ಪ ಬಿದರೂರರನ್ನು ಜನತಾದಳದ ಅಭ್ಯರ್ಥಿಯನ್ನಾಗಿಸಿ ಶಾಸಕರನ್ನಾಗಿ ಮಾಡಿದ್ದರು. 1998ರಲ್ಲಿ ರಾಮಕೃಷ್ಣ ಹೆಗಡೆಯವರ ಲೋಕಶಕ್ತಿ ಪಾರ್ಟಿ ಸೇರಿಕೊಂಡ ಜ್ಞಾನದೇವ ದೊಡ್ಡಮೇಟಿಯವರು ಚುನಾವಣಾ ರಾಜಕಾರಣಕ್ಕೆ ಇಳಿಯಲಿಲ್ಲವಾದರೂ 1999ರಲ್ಲಿ ನಡೆದ ಎಂಪಿ ಎಲೆಕ್ಷನ್‌ನಲ್ಲಿ ಲೋಕಶಕ್ತಿ ಪಾರ್ಟಿಯ ಬಾಗಲಕೋಟೆ ಅಭ್ಯರ್ಥಿ ಅಜಯ್ ಕುಮಾರ್ ಸರ್‌ನಾಯಕ್‌ಗೆ ರೋಣದಿಂದ ಬರೋಬ್ಬರಿ 30,000 ಮತಗಳು ಹರಿದುಹೋಗುವಂತೆ ಮಾಡಿದ್ದರು. ಲೋಕಶಕ್ತಿ ಅಭ್ಯರ್ಥಿಯ ಗೆಲುವಿನಲ್ಲಿ ಅದು ಪ್ರಮುಖ ಪಾತ್ರ ವಹಿಸಿತ್ತು.

ಅಷ್ಟರಮಟ್ಟಿಗೆ ಈ ಕುಟುಂಬ ರೋಣದಲ್ಲಿ ತನ್ನ ಪ್ರಭಾವವನ್ನು ಕಾಯ್ದುಕೊಂಡು ಬಂದಿತ್ತು. ಇತ್ತೀಚೆಗೆ ಜ್ಞಾನದೇವ ದೊಡ್ಡಮೇಟಿಯವರು ನಿಧನರಾದಾಗ ಸಂತಾಪ ಸೂಚಿಸಲು ಅವರ ಮನೆಗೆ ಆಗಮಿಸಿದ್ದ ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿಯವರು ಜೆಡಿಎಸ್ ಸೇರಿಕೊಳ್ಳುವಂತೆ ರವೀಂದ್ರರನ್ನು ಆಹ್ವಾನಿಸಿ ಹೋಗಿದ್ದರು. ಅದಕ್ಕೆ ಒಗೊಟ್ಟ ರವೀಂದ್ರ ಮೊನ್ನೆ ಬೆಂಗಳೂರಿನಲ್ಲಿ ಅಧಿಕೃತವಾಗಿ ಜೆಡಿಎಸ್‌ನ ತೆನೆಹೊತ್ತಿದ್ದಾರೆ. ಅವರ ಜೊತೆಗೆ ರೋಣದ ಪ್ರಮುಖರಾದ ವೆಂಕಣ್ಣ ಬಂಗಾರಿ, ರೋಣ ತಾಲ್ಲೂಕು ಬಿಜೆಪಿ ವಕ್ತಾರನಾಗಿದ್ದ ಗುರುರಾಜ ಕುಲಕರ್ಣಿ, ನರೆಗಲ್ಲ ಪ್ರಸಿದ್ಧ ವೈದ್ಯ ಡಾ|| ಜಿ.ಕೆ ಕಾಳೆ ಸಂಜುರಾವ್ ಕುಲಕರ್ಣಿ ಕೂಡಾ ಜೆಡಿಎಸ್ ಸೇರಿಕೊಂಡಿದ್ದಾರೆ.


ಹಾಗೆಂದ ಮಾತ್ರಕ್ಕೆ ರವೀಂದ್ರನಾಥರ ರಾಜಕೀಯ ಹಾದಿ ಹೂವಿನ ಹಾಸಿಗೆಯಾಗಲಿದೆ ಅಂತೇನೂ ಅಲ್ಲ. ಹಿಂದೊಮ್ಮೆ ಇಲ್ಲಿ ಜನತಾ ಪರಿವಾರ ಪೂರ್ಣವಾಗಿ ನೆಲೆ ಕಂಡುಕೊಂಡಿತ್ತಾದರೂ ಈಗ ಅದರ ಬೇರುಗಳು ಸವೆದುಹೋಗಿವೆ.


ಎಚ್.ಎಸ್. ಸೊಂಪುರ


ಹೇಮಗಿರೀಶ್


ನಿಂಗನಗೌಡ ಪಾಟೀಲ್


ರವಿ



ಶ್ರೀಶೈಲಪ್ಪ

ಜೆಡಿಎಸ್‌ನ ಮಾಜಿ ಶಾ... ಎಸ್.ವಿ.ಬಿದರೂರ 2004ರಲ್ಲಿ ಬಿಜೆಪಿ ಸೇ... ನಂತರವಂತೂ ಜೆಡಿಎಸ್‌ನ ಅಸ್ತಿತ್ವ... ಇಲ್ಲದಂತಾಗಿದೆ. ತನ್ನ ಪಾರಂಪರಿಕ ರಾಜಕೀ... ಎದುರಾಳಿ ಜಿ.ಎಸ್.ಪಾಟೀಲರನ್ನು ಸೋಲಿ... ಕಾರಣಕ್ಕೆ ಬಿದರೂರ ಬಿಜೆಪಿ ಮನೆಹೊಕ್ಕು ಕ... ಬಂಡಿಗೆ ಜೈ ಅಂದಿದ್ದ. ಆ ಚುನಾವಣೆ... ಬಿಜೆಪಿ ಗೆದ್ದರೆ, ಜೆಡಿಎಸ್‌ನ ಅಭ್ಯರ್ಥಿಯಾ... ವಿಶ್ವಬ್ರಾಹ್ಮಣ ಮಂಜುನಾಥ ಗಳಿಸಿದ್ದು ಕೇ... 2000 ಮತಗಳನ್ನು ಮಾತ್ರ. 200... ಜೆಡಿಎಸ್ ಅಭ್ಯರ್ಥಿಯಾಗಿದ್ದ ರವಿ ದಂ... 10,000 ಮತಗಳಿಗೇ ಸುಸ್ತಾಗಿ ಠೇ... ಕಳೆದುಕೊಂಡು ನಂತರ ಕಾಂಗ್ರೆಸ್ ಸೇರಿದರೆ, 201... ಅಖಾಡಕ್ಕಿಳಿದ ಜಿಲ್ಲಾ ಪಂಚಾಯತಿ ಸದಸ್ಯ ಹೇಮಗಿ... ಹಾವಿನಾಳ 6000 ಮತ ಪಡೆದು ಹೀನಾಯ ಸೋಲು... ಬಿಜೆಪಿ ಅಂಗಳ ತೂರಿಕೊಂಡಿದ್ದಾನೆ.

ಒಟ್ಟಿನಲ್ಲಿ ರೋಣದಲ್ಲಿ ಜೆಡಿಎಸ್‌ನ ಅಸ್ತಿ... ಕುಸಿದುಹೋಗಿದೆ. ಇಂತಹ ಸಮಯದಲ್ಲಿ ರವೀಂದ್ರ... ಆ ಪಕ್ಷಕ್ಕೆ ತಮ್ಮ ಹೆಗಲು ಕೊಟ್ಟಿರೋದು ಎಷ್ಟು... ಅನ್ನೋದು ಮುಂದೆ ಗೊತ್ತಾಗಲಿದೆ. ಅಲ್ಲದೇ ಜೆಡಿಎಸ್... ಈಗಾಗಲೇ ಕುರುಬ ಸಮುದಾಯದ ನಿಂಗನ... ಪಾಟೀಲ್, ಕನ್ನಡಪರ ಹೋರಾಟಗಾರ ಎಚ್... ಸೊಂಪುರ, ತಾಲೂಕು ಜೆಡಿಎಸ್ ಅಧ್ಯಕ್ಷ ಮ... ಮುಖಂಡ ಮುಕ್ತುಮ ಸಾಗರ ಟಿಕೆಟ್‌ಗಾಗಿ ಕಸ... ನಡೆಸುತ್ತಿದ್ದಾರೆ. ಅವರೆಲ್ಲ ರವೀಂದ್ರರ ಎಂಟ್ರಿಯನ್ನು ಯಾ... ರೀತಿ ಸ್ವೀಕರಿಸುತ್ತಾರೆ ಎಂಬುದನ್ನು ಕಾದು ನೋಡಬೇ...

ಒಟ್ಟಿನಲ್ಲಿ ರವೀಂದ್ರನಾಥ ದೊಡ್ಡಮೇಟಿಯ ಜೆಡಿ... ಎಂಟ್ರಿಯಿಂದಾಗಿ ಬಿಜೆಪಿಯ ಕಳಕಪ್ಪ ಬಂಡಿ ... ಕಾಂಗ್ರೆಸ್‌ನ ಜಿ.ಎಸ್.ಪಾಟೀಲರ ಮುಖಗಳು ಕಿ... ಗಂಟಿಕ್ಕಿರುವುದು ಮಾತ್ರ ಸುಳ್ಳಲ್ಲ.

■ ವರದಿಗಾ...


ರವಿಕುಮಾರ್

ಮಂಡ್ಯ : ರವಿಕುಮಾರನ ಬಗ್ಗೆ ಇನ್ನಷ್ಟು...


ಮಂಡ್ಯ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಿ ರವಿಕುಮಾರ ಚಾವಲಾಪುರ ಎಂಬ ವ್ಯಕ್ತಿ ವಕ್ಕರಿಸಿಕೊಂಡು ಮಾಡುತ್ತಿರುವ ಅನಾಹುತಗಳು ಈಗಾಗಲೇ ಮಂಡ್ಯ ಜಿಲ್ಲೆಯಲ್ಲಿ ಜನಜನಿತವಾಗಿವೆ. ಆದರೂ ಈತ ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ತನ್ನ ದಂಧೆಯನ್ನು ಮುಂದುವರಿಸಿದ್ದಾನೆ. ಇಂತಹ ಚಟುವಟಿಕೆ ಈ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ನಮ್ಮ ಹಲವಾರು ಜಿಲ್ಲೆಗಳಲ್ಲಿ ಈಚೆಗೆ ಕಾಣಿಸಿಕೊಂಡಿರುವ ಹೊಸ ಸಂಸ್ಕಾರವಂತ ಸಾಹಿತ್ಯೋಪಜೀವಿಗಳು, ಸಾಹಿತ್ಯ ಸಮ್ಮೇಳನದ ಎತ್ತುವಳಿ ದಂಧೆಯಿಂದ ಕುಬೇರರಾಗಿ ಬೆಳೆಯುತ್ತಿರುವುದನ್ನು ಸಾಹಿತ್ಯಾಸಕ್ತರು ಬೆರಗುಗಣ್ಣಿಂದ ನೋಡುತ್ತಿದ್ದಾರೆ. ಈ ಮಹಾಶಯರು ಏರ್ಪಡಿಸುವ ಸಾಹಿತ್ಯ ವೇದಿಕೆಗಳಲ್ಲಿ ಅನಿವಾರ್ಯವಾಗಿ ಕಾಣಿಸಿಕೊಂಡು ಭ್ರಷ್ಟತೆ ವಿರುದ್ಧ ಜಾತ್ಯತೀತ ಮನಸ್ಸುಗಳನ್ನು ಕಟ್ಟುವ ಭಾಷಣಗಳನ್ನು ಕುಟ್ಟಿ, ಕವರಿನೊಳಗಡೆ ಸಂಭಾವನೆ ಎಷ್ಟಿದೆಯೋ ಎಂದು ಲೆಕ್ಕಾಚಾರ ಹಾಕುತ್ತ ಹೋಗುತ್ತಿದ್ದಾರೆ. ಹೋಗುವ ಮುನ್ನ ಎತ್ತುವಳಿ ಪ್ರವೀಣರು ಏರ್ಪಡಿಸುವ ಪಾನಗೋಷ್ಠಿಯಲ್ಲೂ ಭಾಗವಹಿಸುತ್ತಿರುವುದು ಮಂಡ್ಯದ ರವಿಕುಮಾರನಂತವರ ದಂಧೆಗೆ ಪ್ರೋತ್ಸಾಹ ನೀಡತೊಡಗಿದೆ.

ಯಾರು ಏನೇ ಬರೆದುಕೊಂಡರು, ಮಾತನಾಡಿಕೊಂಡರೂ, ಆ ಕಡೆ ಕಿವಿಗೊಡದೆ ತನ್ನ ಎಂದಿನ ದಂಧೆ ಮುಂದುವರಿಸಿರುವ ರವಿಕುಮಾರ, ಸಾದದೊಳಲು ಸ್ವಾಮಿಯನ್ನು ಕಸಾಪ ಅಂಗಳಕ್ಕೆ ತಂದು ಮೆರೆಸಿ ಕಳುಹಿಸಿರುವುದು ಮಂಡ್ಯದ ಸ್ವಾಭಿಮಾನಿ ಜನಕ್ಕೆ ಈತ ಮಾಡಿದ ಘೋರ ಅಪಮಾನವಾಗಿದೆ. ಸಾಹಿತ್ಯ ಪರಿಷತ್ತು ಇಂತಹ ಚಟುವಟಿಕೆ ಬಗ್ಗೆ ಏನು ಹೇಳುತ್ತದೆ ಎಂದು ಕಾಯುತ್ತಿದ್ದೇವೆ. ನಾವೆಲ್ಲಾ ಈ ಸಾಹಿತ್ಯ ಪರಿಷತ್‌ನಿಂದ ದೂರ ಇದ್ದವರು. ಆದರೆ ಲಂಕೇಶ್ ತೀರಿಕೊಂಡ ನಂತರ ಧೈರ್ಯವಾಗಿ ಹೋಗಿ ಸಾಹಿತ್ಯ ಪರಿಷತ್ ವೇದಿಕೆಯಲ್ಲಿ ಕಾಣಿಸಿಕೊಂಡ ಫಲವಾಗಿ ಈಗ ನಮ್ಮ ತಪ್ಪಿನ ಅರಿವಾಗತೊಡಗಿದೆ.

ಈಚೆಗೆ ಮಂಡ್ಯದಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವು ಪ್ರೊ. ಕೃಷ್ಣೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಅವರಿಗೆ ಗೌರವ ಕೊಡುವ ಸಂಭ್ರಮದಿಂದ ಜಿಲ್ಲೆಯ ಅಷ್ಟೋ ಇಷ್ಟೋ ಇನ್ನು ಮಾನ ಉಳಿಸಿಕೊಂಡ ಸಾಹಿತಿಗಳನೇಕರು ಭಾಗ ವಹಿಸಿದ್ದೆವು. ಆದರೆ ಅಲ್ಲಿ ರವಿಕುಮಾರ ಚಾವಲಾಪುರನ ಬಾನಗಡಿಗಳನ್ನು ಕೇಳಿ ದಂಗು ಬಡಿದೆವು. ಪತ್ರಕರ್ತರೆಲ್ಲಾ ಹೆಚ್ಚು ಕಡಿಮೆ ಈ ಸಾಹಿತ್ಯ ಸಮ್ಮೇಳನವನ್ನು ಬಹಿಷ್ಕರಿಸಿದ್ದರು. ಆದರೆ ರವಿಕುಮಾರ ಅದಾವುದಕ್ಕೂ ಕೇರ್ ಮಾಡದೆ ತನ್ನ ಕೆಲಸ ಪೂರೈಸಿಕೊಂಡ.

ಆ ಸಮಯದಲ್ಲೇ ನಾಗಮಂಗಲದಲ್ಲೂ ಸಾಹಿತ್ಯ ಸಮ್ಮೇಳನ ಜರುಗಿತ್ತು. ಆಗ ತಾಲ್ಲೂಕು ಸಾಹಿತ್ಯ ಪರಿಷತ್ ಅಧ್ಯಕ್ಷ ಚಂದ್ರಶೇಖರ್ ಅವರಿಗೆ ನಾನು, ನಾಗತಿಹಳ್ಳಿ ಚಂದ್ರಶೇಖರ, ಹಾ.ಕಾ. ರಾಜೇಗೌಡರು ಮತ್ತಿತರ ವಿದ್ವಾಂಸರು ಸೇರಿಕೊಂಡು ಸಮ್ಮೇಳನದ ಅಧ್ಯಕ್ಷರಾಗಿ ಬಿಂಡಿಗನವಿಲೆ ನಾರಾಯಣ ಸ್ವಾಮಿಯವರನ್ನು ಆಯ್ಕೆ ಮಾಡುವಂತೆ ವಿನಂತಿಸಿಕೊಂಡೆವು. ಅದನ್ನ ಒಪ್ಪಿಕೊಂಡ ಚಂದ್ರಶೇಖರ, ರವಿಕುಮಾರನಿಗೆ ಹೇಳಲಾಗಿ, ಆತನಾಗಲೇ ಯಾರೊ ಪತ್ರಕರ್ತನನ್ನು ನಾಗಮಂಗಲ ತಾಲ್ಲೂಕು ಸಾಹಿತ್ಯ ಸಮ್ಮೇಳನ ಅಧ್ಯಕ್ಷನಾಗಿ ಆಯ್ಕೆ ಮಾಡಿದ್ದೂ ಅಲ್ಲದೆ, ಈ ಬಗ್ಗೆ ದುಸರಾ ಮಾತನಾಡದಂತೆ ಎಚ್ಚರಿಕೆ ಹೇಳಿಕಳಿಸಿದ್ದ.

ಆಘಾತಗೊಂಡ ಚಂದ್ರಶೇಖರ ತನ್ನ ಅಸಹಾಯಕತೆಯನ್ನು ನಮಗೆ ಹೇಳಿದರು. ಆದರೆ ನಾವು "ನಾರಾಯಣಸ್ವಾಮಿಯವರು ಐದು ದಶಕದ ಹಿಂದೆ ಬಂಗಾಳಿ ನಾಟಕಗಳನ್ನ ಕನ್ನಡಕ್ಕೆ ತಂದಿದ್ದಾರೆ. ಅಲ್ಲದೆ ಇಂಗ್ಲಿಷ್, ಬಂಗಾಳಿ, ತಮಿಳಿನಲ್ಲಿ ಪ್ರಭುತ್ವ ಹೊಂದಿರುವ ಅವರ ವಿದ್ವತ್ತಿಗೆ ಸರಿಗಟ್ಟುವವರು ಜಿಲ್ಲೆಯಲ್ಲೇ ಯಾರೂ ಇಲ್ಲ. ಅವರನ್ನ ಗೌರವಿಸಬೇಕಾದದ್ದು ನಮ್ಮ ಕರ್ತವ್ಯ. ಆದ್ದರಿಂದ ಅವರೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬೇಕು" ಎಂದು ವಾದಿಸಿದೆವು. ಅದಕ್ಕೆ ಚಂದ್ರಶೇಖರ "ಅದೇನಾಗುತ್ತೋ ಆಗ್ಲಿ ಸಾರ್, ನಾರಾಯಣಸ್ವಾಮಿಯವರೇ ಅಧ್ಯಕ್ಷರು" ಎಂದು ಹೇಳಿ ಸಮ್ಮೇಳನ ನಡೆಸಲು ತಯಾರಿ ನಡೆಸಿದ.


ಚಂದ್ರಶೇಖರ್ ಸಿ.ಆರ್

ಆಗ ಕೆಂಡಮಂಡಲವಾದ ರವಿಕುಮಾರ "ನೀನು ಅದು ಹೇಗೆ ನಾಗಮಂಗಲದಲ್ಲಿ ಅದ್ಯಾರೊ ವಿದ್ವಾಂಸನನ್ನು ಅಧ್ಯಕ್ಷನನ್ನಾಗಿ ಮಾಡಿಕೊಂಡು ಸಾಹಿತ್ಯ ಸಮ್ಮೇಳನ ಮಾಡುತ್ತೀಯೋ ನೋಡುತ್ತೇನೆ. ಸಮ್ಮೇಳನದ ಜಾಗದಲ್ಲೇ ಗಲಾಟೆ ಮಾಡುತ್ತೇನೆ" ಎಂದು ಧಮಕಿ ಹಾಕಿದ. ಆದರೆ ಚಂದ್ರಶೇಖರ ಇದಾವುದಕ್ಕೂ ಹೆದರದೆ ಚುಂಚನಗಿರಿಯ ಪ್ರಸನ್ನನಾಥ ಸ್ವಾಮಿಯವರ ಬೆಂಬಲದಿಂದ ಬಹಳ ಚೆನ್ನಾಗಿ ಸಾಹಿತ್ಯ ಸಮ್ಮೇಳನ ನಡೆಸಿದ.

ಈ ಸಮ್ಮೇಳನಕ್ಕೆ ಬಹುದೊಡ್ಡ ವಿದ್ವಾಂಸರ ಪಡೆಯೇ ಬಂದಿದ್ದರಿಂದ ರವಿಕುಮಾರ ಬಾಲ ಮುದುರಿಕೊಂಡು ಸುಮ್ಮನಾಗಿದ್ದ. ಆದರೂ ಒಳಗೇ ಕುದಿಯುತ್ತಿದ್ದ. ಏಕೆಂದರೆ ಈತನೊಬ್ಬ ಅಸಾಹಿತ್ಯಕ, ವ್ಯವಹಾರದ ಮನುಷ್ಯನಾದ್ದರಿಂದ ಎಲ್ಲ ಮುಗಿದ ಮೇಲೆ ಚಂದ್ರಶೇಖರನನ್ನು ಆ ಸ್ಥಾನದಿಂದ ತೆಗೆದುಹಾಕಿ ತಾನು ಹೇಳಿದಂತೆ ಕೇಳುವ ಗುಲಾ... ಗುಣದ ಪರಿಚಾರಕನನ್ನ ತಾಲ್ಲೂಕು ಕನ್ನಡ ಸಾಹಿತ್ಯ ಪರಿ... ಅಧ್ಯಕ್ಷನನ್ನಾಗಿ ನೇಮಿಸಿದ. ಆಗ ಚಂದ್ರಶೇಖರ ಪ... ಹೆದರದೆ ಪೀಡೆ ತೊಲಗಿತೆಂದುಕೊಂಡು ಸುಮ್ಮನ... ಆದರೂ ಈ ರವಿಕುಮಾರ ಎಂಬುವನ ನಡವಳಿಕೆಯಿ... ನಾಗಮಂಗಲದ ವಿದ್ವಾಂಸರಿಗೆ ಅವಮಾನವಾಗಿದೆ. ಸಾ... ಪರಿಷತ್ ಎಂಬ ವೇದಿಕೆಯನ್ನು ... ತೆಗೆದುಕೊಂಡ ಈತ ಮಾಡುತ್ತಿರುವ ... ಮತ್ತು ಅನಾಹುತಗಳ ವಿರುದ್ಧ ... ಮಾಡಲಾಗದ ಸ್ಥಿತಿಯಲ್ಲಿ ಮಂ... ಪ್ರಜ್ಞಾವಂತರು ಗೊಣಗುತ್ತಿದ್ದಾ... ಈಗಾಗಲೇ ಈ ಸಾಹಿತ್ಯ ಪರಿಷ... ಯಾಚಕ ಸಂಸ್ಕೃತಿ ಮತ್ತು ... ನಡೆಸುತ್ತಿರುವ ಸಮಾರಂಭಗಳು ಜನ... ವಾಕರಿಕೆ ತರಿಸಿವೆ. ಸಾಹಿತಿಗಳಾದ... ಇಂತಹದೊಂದು ಸಮ್ಮೇಳನಕ್ಕೆ ಬಂ... ಎಂದು ಹೇಳಿಕೊಳ್ಳಲು ನಾಚಿಕೆಪಡುವಂತಾಗಿದೆ.

ಈಗ ನಮ್ಮ ಮುಂದಿರುವ ಪ್ರಶ್ನೆ, ಮಂ... ಮಾನವಂತರು ಈ ಸಾಹಿತ್ಯ ಪರಿಷತ್ ಅನ್ನ ಮೊದಲಿ... ಮಾಡಬೇಕಾದರೆ ಏನು ಮಾಡಬೇಕು. ಸಾಹಿತ್ಯದ ಸಭೆ... ಬಡ್ಡಿ ದಂಧೆಗೆ ಬಂಡವಾಳ ಒದಗಿಸುವ ಸಭೆ... ಗುತ್ತಿರುವುದನ್ನು ತಡೆಯಲು ಏನು ಮಾಡಬೇ... ಸಾಹಿತ್ಯೋಪಜೀವಿಗಳು ಮತ್ತು ಸಂಕೋಚದ ಮಾನವ... ಕೈಗೆ ಈ ಸಾಹಿತ್ಯ ಪರಿಷತ್ ಸಿಗುವಂತೆ ಏನು ಮಾಡ... ಎಂಬುದನ್ನು ಚಿಂತಿಸಬೇಕಿದೆ. ಇಲ್ಲವಾದರೆ ... ರವಿಕುಮಾರನ ಅಸಾಹಿತ್ಯಕ ಅನಾಗರಿಕ ಪಡೆ ಸಾಹಿತಿ... ಬಲವಂತವಾಗಿ ಹಿಡಿದು ತಂದು ಸಭೆ ಮಾಡಿ ಎತ್ತು... ದಂಧೆ ಮುಂದುವರಿಸುವ ದಿನ ದೂರವಿಲ್ಲ!

■ ಬಿ.ಚಂದ್ರೇಗೌ...

...ಂಗಾವತಿ: ನಗರಸಭೆ ಎಲೆಕ್ಷನ್ ಹಿಂದೆ ಪೊಲಿಟಿಕಲ್ ಗುದಮುರಗಿ



ಹುಲಿಗೆಮ್ಮ ದೇವಪ್ಪಕಾಮದೊಡ್ಡಿ


ರಾಜಕಾರಣಿಗಳ ಅಧಿಕಾರದ ಹಾಕ್ಯಾಟದಿಂದಾಗಿ ...ವತಿ ನಗರಸಭೆಗೆ ಮತ್ತೊಂದು ಅಧ್ಯಕ್ಷೀಯ ಚುನಾವಣೆ ...ಾಗಿದೆ. ಈಗ್ಗೆ ಮೂರು ತಿಂಗಳ ಹಿಂದಷ್ಟೇ ಚುನಾವಣೆ ...ತ್ತು. ಆಗ ನಡೆದಿದ್ದ ಕುದುರೆ ವ್ಯಾಪಾರದ ಕಲಸು ...ೋಗರದಿಂದಾಗಿ ಕಾಂಗ್ರೆಸ್‌ನಲ್ಲಿದ್ದ ಸಣ್ಣ ಹುಲಿಗೆಮ್ಮ ...ಪಾರ್ಟಿಯ ವಿರೋಧದ ನಡುವೆಯೂ ಅನ್ಸಾರಿಯ ...ಸ್ ಬೆಂಬಲದಿಂದ ಗೆದ್ದು ಎರಡನೇ ಬಾರಿ ...ಯಾಗಿದ್ದರು. ಇದು ಕಾಂಗ್ರೆಸ್‌ನ ಲೋಕಲ್ ...ಗಳಾದ ಕನಕಗಿರಿ ಎಂಎಲ್‌ಎ ಶಿವರಾಜ್ ತಂಗಡಗಿ ... ಮಾಜಿ ಎಂಎಲ್‌ಸಿ ಎಚ್.ಆರ್. ಶ್ರೀನಾಥ್‌ಗೆ ... ಮುಖಭಂಗ ಉಂಟುಮಾಡಿತ್ತು. ಯಾಕೆಂದರೆ ...ಬ್ಬರು ಮೊದಲಿನಿಂದಲೂ ಅನ್ಸಾರಿ ವಿರುದ್ಧ ...ಾರಣ ಮಾಡುತ್ತಾ ಬಂದವರು. ಗಂಗಾವತಿಯಲ್ಲಿ ...ರಿಯ ಪ್ರಭಾವ ತಗ್ಗಿಸಿ ತಮ್ಮ ವರ್ಚಸ್ಸು ...ಕೊಳ್ಳಬೇಕೆಂದು ಲೆಕ್ಕಾಚಾರ ಹಾಕುತ್ತಿದ್ದವರು. ...ರಿಗೆ ತಮ್ಮದೇ ಪಾರ್ಟಿಯ ಹುಲಿಗೆಮ್ಮ ಕೈಕೊಟ್ಟು ...ರಿ ಪಟಾಲಮ್ಮು ಸೇರಿ ಅಧ್ಯಕ್ಷೆಯಾದರೆ ...ಗಿರಬೇಡ?

...ದಕ್ಕೆಂದೇ ಶಿವರಾಜ್ ತಂಗಡಗಿ ಪಕ್ಷದ ವಿಪ್ ...ಘಿಸಿದ್ದಕ್ಕಾಗಿ ಹುಲಿಗೆಮ್ಮನ ವಿರುದ್ಧ ಜಿಲ್ಲಾಧಿಕಾರಿಗೆ ...ತರ ನಿಷೇಧ ಕಾಯ್ದೆಯಡಿ ದೂರು ದಾಖಲಿಸಿದ್ದ. ...ಣೆ ನಡೆಸಿದ ಡೀಸಿ ಸಾಹೇಬರು ಇತ್ತೀಚೆಗಷ್ಟೆ ...ಮ್ಮ ತಪ್ಪಿತಸ್ಥೆ ಅಂತ ತೀರ್ಮಾನಿಸಿ ಆಕೆಯ ನಗರಸಭೆ ...ತ್ವವನ್ನೇ ರದ್ದು ಮಾಡಿದ್ದರು. ಪರಿಣಾಮವಾಗಿ ಆಕೆ ಅಧ್ಯಕ್ಷಗಿರಿಯನ್ನೂ ಕಳೆದುಕೊಂಡು ಮಧ್ಯಂತರ ...ಯ ಚುನಾವಣೆ ತಂದೊಡ್ಡಿದ್ದಾಳೆ.


...ೇಲ್ನೋಟಕ್ಕೆ ಇದು ನಗರಸಭೆ ಅಧ್ಯಕ್ಷ ಗಾದಿಗೆ ...ಯುತ್ತಿರುವ ಸಣ್ಣ ಕದನದಂತೆ ಕಂಡುಬಂದರೂ ಇದರ 2018ರ ಎಂಎಲ್‌ಎ ಎಲೆಕ್ಷನ್‌ನ ಛಾಯೆ ದಟ್ಟವಾ... ಕಂಡುಬರುತ್ತಿದೆ. ಜೆಡಿಎಸ್‌ನಿಂದ ಗೆದ್ದು ಶಾಸಕನಾಗಿ ... ಅನ್ಸಾರಿ ಈಗ ಒಂದು ಕಾಲನ್ನು ಕಾಂಗ್ರೆಸ್ ಗಡಿ... ಇಟ್ಟಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ...ಗಿರೋದ್ರಿಂದ ಮುಂದಿನ ಎಲೆಕ್ಷನ್‌ನಲ್ಲಿ ಆತ ...ತಿಯ ಕಾಂಗ್ರೆಸ್ ಅಭ್ಯರ್ಥಿಯಾಗೋದು ಬಹುತೇಕ ...ಾಗಿದೆ. ಆದರೆ ಈ ಬೆಳವಣಿಗೆ ಕಾಂಗ್ರೆಸ್ ಟಿಕೆಟ್ ಮೇಲೆ ಕಣ್ಣಿಟ್ಟಿರುವ ಮಾಜಿ ಸಂಸದ ಎಚ್.ಜಿ. ರಾಮುಲು ಮಗ ಶ್ರೀನಾಥ್‌ಗೆ ಕೊಂಚವೂ ಇಷ್ಟವಾಗುತ್ತಿಲ್ಲ. ಅಪ್ಪನ ನಾಮಬಲದ ಮೇಲೆ ಒಮ್ಮೆ ಎಂಎಲ್‌ಸಿ ಆಗಿದ್ದು ಬಿಟ್ಟರೆ ಶ್ರೀನಾಥ್ ಕ್ಷೇತ್ರದಲ್ಲಿ ತನ್ನದೇ ಆದ ಒಂದು ವರ್ಚಸ್ಸು ರೂಪಿಸಿಕೊಳ್ಳುವಲ್ಲಿ ಸಂಪೂರ್ಣ ಸೋತು ಹೋಗಿದ್ದಾನೆ. ಆದರೂ ಅಧಿಕಾರದ ಕನವರಿಕೆ ಅಷ್ಟು ಸುಲಭಕ್ಕೆ ಬಿಡಬೇಕಲ್ಲ. ಅದರಲ್ಲೂ ಆತನ ತಂದೆ ಒಂದು ಕಾಲಕ್ಕೆ ಈ ಪ್ರಾಂತದ ಕಾಂಗ್ರೆಸ್ ಪಾರ್ಟಿಗೆ ಅಧಿಪತಿಯಾಗಿ ಮೆರೆದಿದ್ದವರು. ಆ ಪಾಳೇಗಾರಿಕೆಯ ರುಚಿ ಕಂಡಿರುವ ಶ್ರೀನಾಥ್‌ಗೆ ರಾಜಕಾರಣದಲ್ಲಿ ಬೇರು ಬಿಡುವ ಆಸೆ ಇದ್ದೇಇದೆ. ಹಾಗಾಗಿ ಮುಂದಿನ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಕೊಂಡು ಗೆದ್ದುಬರುವ ಲೆಕ್ಕಾಚಾರದಲ್ಲಿದ್ದ.

ಆದರೆ ಅದ್ಯಾವಾಗ ಅನ್ಸಾರಿ ಜೆಡಿಎಸ್‌ನಿಂದ ಅಮಾನತುಗೊಂಡು ಕಾಂಗ್ರೆಸ್‌ನ ಕಾಲಿಂಗ್ ಬೆಲ್ ಒತ್ತಲು ಶುರು ಮಾಡಿದರೋ ಆಗಿನಿಂದ ಶ್ರೀನಾಥ್ ಕಂಗಾಲಾಗಿ ಹೋಗಿದ್ದಾನೆ. ಅನ್ಸಾರಿ ಕಾಂಗ್ರೆಸ್‌ಗೆ ಬರೋದನ್ನು ತಡೆಯಬೇಕು ಅನ್ನೋದೆ ಆತನ ಸಿಂಗಲ್ ಅಜೆಂಡಾವಾಗಿದೆ. ಅದಕ್ಕೆ ಒಂದು ವೇದಿಕೆಯಾಗಿ ಬಳಕೆಯಾಗುತ್ತಿರೋದೆ ಈಗ ನಡೆಯಲಿರುವ ನಗರಸಭೆ ಅಧ್ಯಕ್ಷಗಾದಿ ಚುನಾವಣೆ. ಯಾರು ತಮ್ಮ ಬೆಂಬಲಿಗರನ್ನು ನಗರಸಭೆ ಅಧ್ಯಕ್ಷಗಾದಿಯಲ್ಲಿ ಕೂರಿಸುತ್ತಾರೋ ಅವರೇ ಗಂಗಾವತಿಯ ಎಂಎಲ್‌ಎ ಎಲೆಕ್ಷನ್‌ನಲ್ಲಿ ಗೆದ್ದು ಬರುತ್ತಿರೋದು ಇತ್ತೀಚಿನ ದಿನದ ವಾಡಿಕೆಯಂತಾಗಿದೆ. ಮುಸ್ಲಿಂ ಮತಗಳ ಬಾಹುಳ್ಯವಿರುವ ಕಾರಣಕ್ಕೆ ಅನ್ಸಾರಿ ಮತ್ತೆಮತ್ತೆ ಗೆದ್ದು ಬರುತ್ತಿರೋದು ಹಾಗೂ ನಗರಸಭೆ ಅಧ್ಯಕ್ಷಗಾದಿಯಲ್ಲಿ ತನ್ನದೇ ಬೆಂಬಲಿಗರನ್ನು ಪ್ರತಿಷ್ಠಾಪಿಸುತ್ತಿರೋದು ಇಂತಹ ವಾಡಿಕೆ ಹುಟ್ಟಿಕೊಳ್ಳಲು ಕಾರಣ.


ಈ ಸಲವಾದರೂ ಅಧ್ಯಕ್ಷಗಾದಿಯಲ್ಲಿ ತಮ್ಮವರನ್ನು ಕೂರಿಸಿ, ಅನ್ಸಾರಿಗೆ ಮುಖಭಂಗ ಮಾಡುವುದರ ಜೊತೆಗೆ ಆತ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಕೊಳ್ಳುವುದಕ್ಕೆ ಅಡ್ಡಗಾಲು ಹಾಕಬೇಕೆನ್ನುವುದು ಶ್ರೀನಾಥನ ತುಡಿತ. ಅದಕ್ಕೆ ಸಾಥ್ ನೀಡುತ್ತಿರೋದು ಕನಕಗಿರಿಯ ಶಾಸಕ ಶಿವರಾಜ್ ತಂಗಡಗಿ. ಕನಕಗಿರಿ ಒಂದು ವಿಧಾನಸಭಾ ಕ್ಷೇತ್ರವಾದರು ಅದು ಗಂಗಾವತಿ ಶಹರದ ಛಾಯೆಯಿಂದ ಹೊರಬಂದಿಲ್ಲ. ಗಂಗಾವತಿ ಕ್ಷೇತ್ರವನ್ನೇ ಕೊರೆದು ತೆಗೆದು ಸೃಷ್ಟಿಸಿದ ಹೊಸಕ್ಷೇತ್ರ ಕನಕಗಿರಿ. ಹಾಗಾಗಿ ಕನಕಗಿರಿ ರಾಜಕಾರಣ ಬೇರಲ್ಲ, ಗಂಗಾವತಿ ರಾಜಕಾರಣ ಬೇರಲ್ಲ. ಸಹಜವಾಗಿಯೇ



ಇಕ್ಬಾಲ್ ಅನ್ಸಾರಿ



ಶಿವರಾಜ್ ತಂಗಡಗಿ



ಶ್ರೀನಾಥ್

ಇದು ಕಾಂಗ್ರೆಸ್‌ನ ತಂಗಡಗಿ ಮತ್ತು ಜೆಡಿಎಸ್‌ನ ಅನ್ಸಾರಿ ನಡುವೆ ಪ್ರತಿಸ್ಪರ್ಧಿ ರಾಜಕಾರಣಕ್ಕೆ ಎಡೆ ಮಾಡಿಕೊಟ್ಟಿತ್ತು. ಇತ್ತ ಶ್ರೀನಾಥ್ ಮತ್ತು ತಂಗಡಗಿ ಒಂದೇ ಪಾರ್ಟಿಯವರಾದ್ದರಿಂದ ಇಬ್ಬರಿಗೂ ಸಲುಗೆ ಚೆನ್ನಾಗಿದೆ. ಹಾಗಾಗಿ ಶ್ರೀನಾಥ್‌ನ ನಗರಸಭೆ ಹಪಾಹಪಿಗೆ ತಂಗಡಗಿ ಕೈಜೋಡಿಸಿದ್ದಾನೆ.

ಹಾಗೆ ನೋಡಿದರೆ, ಮೂರು ತಿಂಗಳ ಹಿಂದೆ ನಡೆದ ನಗರಸಭೆ ಅಧ್ಯಕ್ಷೀಯ ಚುನಾವಣೆಯಲ್ಲೇ ಅನ್ಸಾರಿಗೆ ಮಣ್ಣು ಮುಕ್ಕಿಸಲು ಈ ಜೋಡಿ ಸಜ್ಜಾಗಿತ್ತು. ಗಂಗಾವತಿ ನಗರಸಭೆ ಒಟ್ಟು 30 ಸಂಖ್ಯಾ ಬಲದ್ದು. ಇದರಲ್ಲಿ ಅನ್ಸಾರಿ ಬೆಂಬಲಿಗರು 18 ಮಂದಿ ಇದ್ದರೆ, ಕಾಂಗ್ರೆಸ್‌ನಿಂದ 8 ಮತ್ತು ಬಿಜೆಪಿಯಿಂದ ನಾಲ್ವರು ಸದಸ್ಯರು ಗೆದ್ದು ಬಂದಿದ್ದಾರೆ. ಒಬ್ಬ ಶಾಸಕ ಮತ್ತು ಒಬ್ಬ ಸಂಸದರ ಮತಗಳನ್ನೂ ಸೇರಿಸಿದರೆ ಒಟ್ಟು 32 ಮತಗಳಾಗುತ್ತವೆ. ಹಾಗೆ ನೋಡಿದರೆ ಅನ್ಸಾರಿ ಟೀಮೇ ಇಲ್ಲಿ ಮೇಲುಗೈ ಹೊಂದಿದೆ. ಆದಾಗ್ಯೂ ಕಳೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಕುದುರೆ ವ್ಯಾಪಾರಕ್ಕಿಳಿದ ತಂಗಡಗಿ ಒಂದಷ್ಟು ಅನ್ಸಾರಿ ಬೆಂಬಲಿಗರನ್ನು ಖರೀದಿಸಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಅನ್ಸಾರಿಗೆ ಮುಖಭಂಗ ಮಾಡುವ ಸ್ಕೆಚ್ ಹೆಣೆದಿದ್ದ. ಈ ಪ್ರಯತ್ನದಲ್ಲಿ ಐವರು ಅನ್ಸಾರಿ ಬೆಂಬಲಿಗರಿಗೆ ಗಾಳ ಹಾಕಿ ಮೂವರನ್ನು ತನ್ನತ್ತ ಸೆಳೆದುಕೊಳ್ಳುವಲ್ಲೂ ತಂಗಡಗಿ ಯಶಸ್ವಿಯಾಗಿದ್ದ.

ಆದರೆ ಚಾಣಾಕ್ಷ ತಂತ್ರಗಾರಿ ಅನ್ಸಾರಿಗೆ ಇದರ ವಾಸನೆ ಬಡಿಯುತ್ತಿದ್ದಂತೆಯೇ 28ನೇ ವಾರ್ಡ್‌ನಿಂದ ಕೈ ಪಾರ್ಟಿಯಿಂದ ಗೆದ್ದಿದ್ದ ಸಣ್ಣ ಹುಲಿಗೆಮ್ಮನಿಗೆ ಗಾಳ ಹಾಕಿ ತನ್ನ ಬಣಕ್ಕೆ ಸೆಳೆದುಕೊಂಡಿದ್ದ. 15 ತಿಂಗಳ ಹಿಂದೆ ನಗರಸಭೆ ಅಧ್ಯಕ್ಷೆಯಾಗಿ ರುಚಿ ಕಂಡಿದ್ದ ಆಕೆಗೆ ಮತ್ತೊಮ್ಮೆ ಅಧ್ಯಕ್ಷೆ ಮಾಡುವ ಆಸೆ ತೋರಿಸುತ್ತಿದ್ದಂತೆಯೇ ತನ್ನೊಟ್ಟಿಗೆ ರಾಧಾ ಐಲಿ ಎಂಬ ಮತ್ತೊಬ್ಬ ಕಾಂಗ್ರೆಸ್ ಸದಸ್ಯೆಯನ್ನೂ ಕರೆದುಕೊಂಡು ಅನ್ಸಾರಿ ದಡಕ್ಕೆ ಜಂಪ್ ಮಾಡಿದ್ದಳು. ಕುದುರೆ ವ್ಯಾಪಾರದ ಭರಾಟೆಯಲ್ಲಿದ್ದ ತಂಗಡಗಿ ಮತ್ತು ಶ್ರೀನಾಥ್ ಹುಲಿಗೆಮ್ಮನ ಲಾಂಗ್‌ಜಂಪ್ ಕಂಡು ದಂಗಾಗಿ ಹೋಗಿದ್ದರು. ಅತ್ತ ಅನ್ಸಾರಿ ಕೊಟ್ಟ ಮಾತಿನಂತೆ ಹುಲಿಗೆಮ್ಮನನ್ನು ಅಧ್ಯಕ್ಷೆಯನ್ನಾಗೇನೋ ಮಾಡಿದ್ದರು, ಆದರೆ ಇತ್ತ ಶಿವರಾಜ್ ತಂಗಡಗಿ ಆಕೆಯ ವಿರುದ್ಧ ಪಕ್ಷಾಂತರ ನಿಷೇಧ ದೂರು ಕೊಟ್ಟು ವಿಚಾರಣೆಗೆ ಎಳೆದಿದ್ದ. ಅದರ ಫೈಸಲು ಈಗ ಹೊರಬಿದ್ದಿದೆ. ಮತ್ತೊಂದು ಅಧ್ಯಕ್ಷೀಯ ಚುನಾವಣೆ ಧುತ್ತನೆ ಎರಗಿಬಂದಿದೆ.

ಈ ಸಲವಾದರೂ ಅನ್ಸಾರಿಗೆ ಮುಖಭಂಗ ಮಾಡಬೇಕು ಅಂತ ತಂಗಡಗಿ ಹಾಗೂ ಶ್ರೀನಾಥ್ ಭಾರೀ ಕಸರತ್ತು ನಡೆಸುತ್ತಿದ್ದಾರೆ. ಅದಕ್ಕೋಸ್ಕರ ಬಿಜೆಪಿಯ ಪರಣ್ಣ ಮುನವಳ್ಳಿಯ ಜೊತೆಗೂ ಕೂಡಿಕೆ ಒಪ್ಪಂದ ಮಾಡಿಕೊಂಡಿದ್ದಾರೆ ಎನ್ನಲಾಗುತ್ತಿದೆ. ಪರಮ ಕೋಮುವಾದಿ ಕುತಂತ್ರ ರಾಜಕಾರಣಿಯಾದ ಪರಣ್ಣನಿಗೆ ಅಕ್ಬಾಲ್ ಅನ್ಸಾರಿಯ ಮುಖ ಕಂಡರೆ ಆಗದು.

ಹಿಂದೊಮ್ಮೆ ಭಜರಂಗಿ ಭಕ್ತರನ್ನು ಛೂಬಿಟ್ಟು ಕೋಮುದಳ್ಳುರಿ ಹಚ್ಚಿ ಶಾಸಕ ಅನ್ಸಾರಿಯ ಕಾಲೆಳೆಯಲು ಹೋಗಿ ಸೋತಿದ್ದ ಈ ಬಿಜೆಪಿ ಆಸಾಮಿ ಮೊನ್ನೆಯಷ್ಟೇ ಅನ್ಸಾರಿಯ ಎರಡನೇ ಹೆಂಡತಿ ಪಂಚಮಿಯ ಆಸ್ತಿ ವಿಚಾರವನ್ನು ತನ್ನೊಬ್ಬ ಚೇಲಾ ಪತ್ರಕರ್ತನ ಮೂಲಕ ಟೀವಿ ಬ್ರೇಕಿಂಗ್ ನ್ಯೂಸ್ ಆಗಿಸುವ ನೀಚ ಕೆಲಸಕ್ಕೂ ಕೈಹಾಕಿದ್ದ. ಅಂತವನಿಗೆ ಈಗ ತಂಗಡಗಿ–ಶ್ರೀನಾಥ್ ದೋಸ್ತಿ ಅನ್ಸಾರಿ ವಿರುದ್ಧ ತೊಡೆ ತಟ್ಟುತ್ತಿರೋದು ನೋಡಿ ವಿಪರೀತ ಖುಷಿಯಾಗಿದೆ. ಹಾಗಾಗಿ ತನ್ನ ನಾಲ್ವರು ಬಿಜೆಪಿ ಸದಸ್ಯರನ್ನು ಕಾಂಗ್ರೆಸ್‌ಗೆ ಅಡ ಇಟ್ಟಿದ್ದಾನೆ.

ವಿಪರ್ಯಾಸವೆಂದರೆ ಗಂಗಾವತಿ ಸಿಟಿ ಅನ್ನೋದು ಮೂಲ ಸೌಲಭ್ಯಗಳಿಲ್ಲದೆ ಗಬ್ಬೆದ್ದು ಹೋಗಿದೆ. ಎಲ್ಲೆಂದರಲ್ಲಿ ಕಸ ಚೆಲ್ಲಾಡಿ ಗಾರ್ಬೇಜ್ ಶಹರವಾಗಿ ಮಾರ್ಪಟ್ಟಿದೆ. ಅದರತ್ತ ಗಮನಹರಿಸಬೇಕಿದ್ದ ನಗರಸಭೆ ಅಧ್ಯಕ್ಷಗಾದಿ ಚುನಾವಣೆ ನೆಪದಲ್ಲಿ ಕುದುರೆ ವ್ಯಾಪಾರದ ಮಾರ್ಕೆಟ್ಟಿನಂತಾಗಿದೆ. ಶಾಸಕನಿಗೆ ತನ್ನ ವರ್ಚಸ್ಸು ಉಳಿಸಿಕೊಳ್ಳುವ ತೆವಲು, ವಿರೋಧಿಗಳಿಗೆ ಆತನ ಕಾಲೆಳೆಯುವ ಅಮಲು, ಇನ್ನು ಸದಸ್ಯರು ಎನ್ನಿಸಿಕೊಂಡವರಿಗೆ ಬಂದಷ್ಟು ಪೀಕಿಕೊಂಡು ಬ್ಯಾಂಕ್ ಬ್ಯಾಲೆನ್ಸ್ ಗಟ್ಟಿ ಮಾಡಿಕೊಳ್ಳುವ ತುಮುಲ. ಹೀಗೇ ಆದ್ರೆ ಗಂಗಾವತಿಯನ್ನು ಉದ್ಧಾರ ಮಾಡೋರು ಯಾರು?

■ ಮುತ್ತುರಾಜು



ಗಂಗಾವತಿ ತುಂಬೆಲ್ಲ ಹರಡಿರುವ ಕಸ

ಪ್ರತೀಕಾರ....

...ಂತೆನಿಸಿತು. 'ಅಲಿಗಢ, ಅಲಿಗಢ... ಪಾಪ, ಸಭ್ಯ ...ತ.'

...ವಳು ಅಂದಳು "ಅಲಿಗಢ ಒಳ್ಳೆಯ ಸ್ಥಳವಲ್ಲ... ...ಕೆ ಹೊರಟಿದ್ದೀರಿ?"

...ಂದೂ ಮಹಾಶಯನೂ ದನಿಗೂಡಿಸಿದ. ಹುಚ್ಚನಿಗೆ ...ಭೂತಿ ತೋರುವವನಂತೆ "ಕೇಳಿರಿ... ಕೇಳಿರಿ"

...ನಗೆ ಒಳ್ಳೆಯದೇನು? ಕೆಟ್ಟದ್ದೇನು?"

...ದಾಗ್ಯೂ ನಿಮಗೆ ಹೆದರಿಕೆಯಾಗುತ್ತಿಲ್ಲವೆ? ರಾತ್ರಿ ...ದರೂ ಚಾಕುವಿನಿಂದ ಇರಿದರೆ?"

...ರ್ ಮುಗುಳ್ನಕ್ಕ, "ಅದನ್ನು ಒಂದು ರೀತಿಯ ... ಎಂದುಕೊಳ್ಳುವೆ. ಹೀಗೆ ನೀವು ಎಂದಾದರೂ ...ಸಿದ್ದೀರಾ?"

...ದೇನು? ಹೀಗೆ ಮಾತಾಡುವಿರಲ್ಲ?"

...ಷ್ಟೇನು? ಕೊಲ್ಲುವವನಾದರೂ ಯಾರು? ...ನ್... ಇಲ್ಲವೆ ಹಿಂದೂ. ಮುಸಲ್ಮಾನ್ ಕೊಂದರೆ ... ಮನೆ ಮುಂದೆಯಿಲ್ಲ ಹೋಗಿರುವರೋ ನಾನು ...ಲ್ಲೇ ಹೋಗುವೆ. ಒಂದು ವೇಳೆ ಹಿಂದೂ ... ಇದೂ ಒಂದು ಚಾಕಿ ಉಳಿದಿತ್ತು ಎಂದು ಭಾವಿಸುವೆ. ದೇಶದಲ್ಲಿ ಹರಡಿರುವ ಕಾಯಿಲೆ ಉಲ್ಬಣಗೊಂಡು ಸ್ಥಿತಿ ಗಂಭೀರವಾಯಿತು ಎಂದುಕೊಳ್ಳುವೆ. ಇನ್ನು ಚೇತರಿಸಿಕೊಂಡು ಆರೋಗ್ಯದ ಸ್ಥಿತಿ ಮರಳುವ ಸಾಧ್ಯತೆ ಸ್ಪಷ್ಟವಾಗಬಹುದು."

"ಅದೇಕೆ ಹಿಂದೂ ಕೊಂದಾನು? ಹಿಂದೂ ಅದೆಷ್ಟೇ ಕೆಟ್ಟವನಾದರೂ ಅಂತಹ ಕೆಲಸ ಮಾಡಲಾರ."

ಸಿಖ್‌ನಿಗೆ ಇದ್ದಕ್ಕಿದ್ದಂತೇ ಕೋಪ ನೆತ್ತಿಗೇರಿದಂತಾಯಿತು. ಅವನು ತಿರಸ್ಕಾರದಿಂದ ಮಾತಿಗೆ ತೊಡಗಿದ. "ಇರಲಿ ಬಿಡ್ರಿ ಅಣ್ಣಾವ್ರೇ. ಇದೀಗ ನೀವೇ ತುಂಬ ಖುಷಿಪಟ್ಟವರಂತೆ ದಿಲ್ಲಿಯ ಸಂಗತಿಗಳನ್ನು ನಿರೂಪಿಸುತ್ತಿದ್ದಿರಿ. ನಿಮ್ಮ ಹತ್ತಿರ ಚಾಕು ಇದ್ದಿದ್ದರೆ, ನಿಮಗೆ ಯಾವ ಅಪಾಯವೂ ಇಲ್ಲದಿದ್ದರೂ ನೀವೂ ನಿಮ್ಮ ಜತೆ ಪ್ರಯಾಣಿಸುವವರನ್ನು ಸುಮ್ಮನೇ ಬಿಡುತ್ತಿದ್ದೀರಾ? ನಾನು ಮಧ್ಯ ಪ್ರವೇಶಿಸಿದರೆ ನನ್ನನ್ನೂ ಬಿಟ್ಟುಬಿಡುತ್ತಿದ್ದಿರಾ?" ಹಿಂದೂಗಳು ಅದೇನೋ ಹೇಳಬೇಕೆಂದಿದ್ದರು. ಕೈಯಿಂದ ಸನ್ನೆ ಮಾಡುತ್ತಾ ಅಧಿಕಾರಯುತವಾಗಿ ಅವರನ್ನು ಸುಮ್ಮನಾಗಿಸಿದ ಆ ಸಿಖ್. "ನೀವು ಈಗ ಕೇಳಿರಿ ಕಿವಿಗೊಟ್ಟು. ನಾನು ನಿಮ್ಮ ಶರಣಾರ್ಥಿ ಎಂದು ಭಾವಿಸಿ ನೀವು ನನಗೆ ಸಹಾನುಭೂತಿ ತೋರುತ್ತಿದ್ದೀರಿ. ಸಹಾನುಭೂತಿ ಅಸಹ್ಯವಾದುದು. ನೀವು ನನಗೆ ಸಹಾನುಭೂತಿ ವ್ಯಕ್ತಪಡಿಸಲು ಅರ್ಹರಾಗಿದ್ದರೆ ನಾನೊಬ್ಬ ಶರಣಾರ್ಥಿ ಎಂದುಕೊಳ್ಳುತ್ತಿದ್ದೆ. ದಿಲ್ಲಿಯ ದುರ್ಘಟನೆಗಳನ್ನು ಅದೇ ಉಸಿರಿನಲ್ಲಿ ಭಾವನೆಗಳೇ ಇಲ್ಲದವರಂತೆ ನಿರೂಪಿಸಿದರೆ ನೀವು ನನ್ನ ನೋವನ್ನು ಹೇಗೆ ಅರ್ಥ ಮಾಡಿಕೊಳ್ಳಬಲ್ಲಿರಿ? ನೀವು ನನಗೆ ಸಹಾನುಭೂತಿ ತೋರಬಹುದಿತ್ತು, ಅಷ್ಟೊಂದು ಹೃದಯಂತರಾಗಿದ್ದರೆ ನೀವು ಆ ಮಾತುಗಳನ್ನು ಹೇಳಬಯಸುವಾಗ ನಾಚಿಕೆಯಿಂದ ನಿಮ್ಮ ನಾಲಿಗೆಯ ಮಾತಿನ ಶಕ್ತಿಯೇ ಉಡುಗಿ ಹೋಗುತ್ತಿತ್ತು, ತಲೆ ಬಾಗಿ ಬಿಡುತ್ತಿತ್ತು. ಮಹಿಳೆಯ ಮಾನಹರಣ ಎಂದರೆ ಮಹಿಳೆಯ ಮಾನಹರಣ – ಹಿಂದೂ ಇಲ್ಲವೆ ಮುಸಲ್ಮಾನ್ ಮಹಿಳೆಯದಲ್ಲ – ಮಾನವತೆಯ ಮಾತೆಯ ಮಾನಹರಣ. ಶೇಖುಪುರಾದಲ್ಲಿ ನಮ್ಮ ವಿಷಯದಲ್ಲಿ ಏನು ಆಯಿತೋ ಆಯಿತು. ನನಗೆ ಗೊತ್ತು ನಾನು ಅದರ ಪ್ರತೀಕಾರದ ಬಗ್ಗೆ ಯೋಚಿಸುವುದಿಲ್ಲ, ಕಾರಣ ಅದರ ಪ್ರತೀಕಾರವೇ ಸಾಧ್ಯವಿಲ್ಲ, ನಾನು ಪ್ರತೀಕಾರ ತೀರಿಸಿಕೊಳ್ಳುವೆ. ಅದೇನೆಂದರೆ ನನ್ನೊಂದಿಗೆ ಏನು ನಡೆಯಿತೊ ಅದು ಬೇರೆಯವರೊಂದಿಗೆ ಆಗಬಾರದು. ಆದ್ದರಿಂದ ದಿಲ್ಲಿ ಮತ್ತು ಅಲಿಗಢದ ನಡುವೆ ಜನರನ್ನು ಅತ್ತಿಂದಿತ್ತ ಇತ್ತಿಂದತ್ತ ತಲುಪಿಸುತ್ತೇನೆ. ನನ್ನ ದಿನಗಳೂ ಉರುಳುತ್ತಿರುತ್ತವೆ, ಜೊತೆಗೆ ಅಷ್ಟಿಷ್ಟು ಪ್ರತೀಕಾರ ಸಹ ತೀರಿಸಿಕೊಂಡಂತಾಗುತ್ತದೆ. ಹೀಗೇ ಮಾಡುತ್ತಿರುವಾಗ ಯಾರಾದರೂ ಕೊಂದು ಬಿಟ್ಟರೆ ಪ್ರತೀಕಾರ ಪೂರ್ತಿಯಾದಂತಾಗುತ್ತದೆ - ಕೊಂದವನು ಮುಸಲ್ಮಾನ ಆಗಿರಬಹುದು ಇಲ್ಲವೆ ಹಿಂದೂ ಆಗಿರಬಹುದು. ನನ್ನ ಉದ್ದೇಶವಿಷ್ಟೇ ಅವನು ಹಿಂದೂ ಆಗಿರಲಿ ಇಲ್ಲವೆ ಮುಸಲ್ಮಾನ್ ಆಗಿರಲಿ ಇಲ್ಲವೆ ಸಿಖ್ ಆಗಿರಲಿ ನಾನು ನೋಡಿದ್ದನ್ನೆಲ್ಲ ಬೇರೆಯವರು ಯಾರೂ ನೋಡುವಂತಾಗಬಾರದು ಎನ್ನುವುದು. ಸಾಯುವುದಕ್ಕೆ ಮುನ್ನ ನನ್ನ ಮನೆಮುಂದಿಗೆ ಒದಗಿದ ಗತಿ ಬೇರೆಯವರ ಸೊಸೆಯಂದಿರು– ಹೆಣ್ಣುಮಕ್ಕಳು ನೋಡುವಂತಾಗದಿರಲಿ, ಓ ದೇವರೇ!"

ಇದಾದನಂತರ ಗಾಡಿಯಲ್ಲಿ ತುಂಬ ಹೊತ್ತು ನೀರವ ಮೌನ ಆವರಿಸಿತ್ತು. ಅಲಿಗಢಕ್ಕೆ ಮೊದಲು ಗಾಡಿ ನಿಧಾನವಾಗುತ್ತಲೇ ಆ ಸಿಖ್‌ನಿಗೆ ಧನ್ಯವಾದ ಎನ್ನುವ ಒಂದು ಶಬ್ದ ಹೇಳಬೇಕೆಂದು ಸುರೈಯಾಗೆ ಎನ್ನಿಸುತ್ತಲೇ ಇತ್ತು ಆದರೆ ಅವಳ ಬಾಯಿಂದ ಮಾತೇ ಹೊರಡಲಿಲ್ಲ.

ಸರದಾರ್‌ನೇ ಎದ್ದು ನಿಂತು ಮೇಲಿನ ಬರ್ತ್‌ದತ್ತ ಕಣ್ಣು ಹಾಯಿಸಿ "ಹುಟ್ಟಿ, ಏಳು. ಅಲಿಗಢ ಬಂತು" ಎಂದ. ನಂತರ ಹಿಂದೂ ಮಹಾಶಯನತ್ತ ನೋಡಿ "ಅಣ್ಣಾವ್ರೆ ಬಿರುಸು ಮಾತೇನಾದ್ರೂ ಆಡಿದ್ದರೆ ಕ್ಷಮಿಸಿರಿ. ನಾವಂತೂ ತಮ್ಮ ಶರಣಾರ್ಥಿಗಳು" ಎಂದ.

ಸಿಖ್ ಇಳಿಯದೆ ಹೋಗಿದ್ದರೆ ಸ್ವತಃ ತಾವೇ ಇಳಿದು ಬೇರೆ ಡಬ್ಬಿ ಹತ್ತಿ ಕುಳಿತುಕೊಳ್ಳುತ್ತಿದ್ದರು ಎನ್ನುವುದು ಹಿಂದೂ ಮಹಾಶಯರ ಮುಖದಿಂದ ಸ್ಪಷ್ಟವಾಗಿತ್ತು.

■ ಹಿಂದಿ ಮೂಲ: ...ಶ್ಲೇಯ

ಕನ್ನಡಕ್ಕೆ: ಹಸನ್ ನಯೀಂ ಸುರಕೋಡ

ಹಾಕಿದ ಉರುಳಿಗೆ ಹಾರದ ಬಣ್ಣ



ಪ್ರತೀವರ್ಷ ಕನ್ನಡಿಗರಿಗಾಗುವ ಹಾನಿ 22,160 ಕೋಟಿ!

ಜಿಎಸ್‌ಟಿಯಿಂದಾಗಿ ಕೇಂದ್ರದ ಜೊತೆ ತೆರಿಗೆ ಹಂಚಿಕೆ ಮಾಡಿಕೊಳ್ಳುವುದರಿಂದ ಪ್ರತಿವರ್ಷ ಕರ್ನಾಟಕಕ್ಕಾಗುವ ನಷ್ಟ ಕಮ್ಮಿಯೆಂದರೂ 7,769 ಕೋಟಿ ರೂಪಾಯಿಗಳು. ವ್ಯಾಟ್ ರದ್ದತಿಯಿಂದಾಗಿ ಅದರ ಅರ್ಧ ಪಾಲಿನಷ್ಟು ಜಿಎಸ್‌ಟಿಯ ಮೂಲಕ ಕೇಂದ್ರದ ಪಾಲಾಗಿ ಹಿಂದಿನ ಆದಾಯದ ಅರ್ಧವನ್ನಷ್ಟೇ ಕರ್ನಾಟಕ ನೆಚ್ಚಿಕೊಳ್ಳಬೇಕು. ಈತನಕ ಹೊರರಾಜ್ಯಗಳಿಂದ ಬರುತ್ತಿದ್ದ ವಸ್ತುಗಳ ಮೇಲಿನ ಎಂಟ್ರಿ ಟ್ಯಾಕ್ಸ್ ರದ್ದಾಗಿ ಜಿಎಸ್‌ಟಿಯ ಮೂಲಕ ಅದರ ಅರ್ಧ ಪಾಲು ಕೇಂದ್ರದ ಪಾಲಾಗಿ ಉಳಿಕೆ ಅರ್ಧಕ್ಕಷ್ಟೇ ನಾವು ತೃಪ್ತಿ ಪಡಬೇಕು. ಈ ಹಿಂದೆ ಲಕ್ಸುರಿ ತೆರಿಗೆಯಲ್ಲಿ ಕರ್ನಾಟಕಕ್ಕೆ ಪ್ರತಿವರ್ಷ ಬರುತ್ತಿದ್ದ ಆದಾಯದ ಅರ್ಧದಷ್ಟು ಕೇಂದ್ರದ ಪಾಲಾಗಲಿದೆ. ಯಥಾವತ್ತು ಸ್ಟಾಂಪ್ಸ್ ಮತ್ತು ನೋಂದಣಿ, ಮಾರಾಟ ತೆರಿಗೆ, ಪ್ರೊಫೇಶನ್ ಟ್ಯಾಕ್ಸ್ ಮತ್ತು ವಿದ್ಯುತ್ ತೆರಿಗೆಗಳನ್ನಷ್ಟೇ ಕರ್ನಾಟಕ ನೆಚ್ಚಿಕೊಳ್ಳಬೇಕು. ಮಿಕ್ಕಂತೆ ಹಿಂದಿದ್ದ ಅನೇಕ ತೆರಿಗೆಗಳ ಬಾಬತ್ತು ಜಿಎಸ್‌ಟಿಯ ಮೂಲಕ ಕೇಂದ್ರ ಕಿತ್ತುಕೊಂಡಂತಾಗಿದೆ!

ಈ ರೀತಿ ರಾಜ್ಯದ ಪಾಲಿಗಿದ್ದ ಎಂಟ್ರಿ ಟ್ಯಾಕ್ಸ್, ಸಿಎಸ್‌ಟಿ, ಬೆಟ್ಟಿಂಗ್ ಮತ್ತು ಮನರಂಜನೆ ತೆರಿಗೆಗಳ ಪಾಲು ಕೇಂದ್ರದ ಪಾಲಾದ ಪರಿಣಾಮವಾಗಿ ಪ್ರತಿವರ್ಷ ರಾಜ್ಯಕ್ಕಾಗುವ ಹಾನಿಯೇ 5,835 ಕೋಟಿ ರೂಪಾಯಿಗಳು. ಇನ್ನು ಕೇಂದ್ರದ ಜೊತೆ ತೆರಿಗೆ ಹಂಚಿಕೊಳ್ಳುವುದರ ಪರಿಣಾಮವಾಗಿ ಮೊದಲೇ 7,769 ಕೋಟಿ ರೂಪಾಯಿಗಳು ಕೈತಪ್ಪಿ ಹೋಗಿರುತ್ತದೆಯಲ್ಲ; ಇದರ ಮೇಲೆ ಬರೆ ಎಳೆದಂತೆ ತೆರಿಗೆ ಹರಿವಿನಿಂದಾಗಿ ರಾಜ್ಯಕ್ಕಾಗುವ 8,556 ಕೋಟಿ ರೂಪಾಯಿಗಳ ಹೆಚ್ಚುವರಿ ನಷ್ಟ ಬೇರೆ. ಅಂದರೆ ಜಿಎಸ್‌ಟಿಯಿಂದಾಗಿ ವರ್ಷವೊಂದಕ್ಕೆ ಕನ್ನಡಿಗರಿಗಾಗುವ ಅರ್ಥಾತ್ ಕರ್ನಾಟಕಕ್ಕಾಗುವ ಒಟ್ಟು ಹಾನಿಯೆಷ್ಟು ಗೊತ್ತೆ?

22 ಸಾವಿರದ 160 ಕೋಟಿ ರೂಪಾಯಿಗಳು!

ಪ್ರತಿವರ್ಷ ಕರ್ನಾಟಕವೊಂದೇ ಜಿಎಸ್‌ಟಿಯಿಂದಾಗಿ ಈ ಪ್ರಮಾಣದ ನಷ್ಟ, ಹಾನಿಗೆ ತಲೆಕೊಡಬೇಕೆಂದರೆ ಅದರಲ್ಲಿ ರಾಜ್ಯದ ಪ್ರತಿಯೊಬ್ಬ ರೈತನ, ಜನಸಾಮಾನ್ಯನ, ಕೂಲಿ, ಕಾರ್ಮಿಕ, ನೌಕರ, ನಿರುದ್ಯೋಗಿಯ ತಲೆಮೇಲೆ ಬೀಳುವ ಹೊರೆಯ ಭಾರವಾದರೂ ಎಷ್ಟು?

ಇದು ಕೇವಲ ಕರ್ನಾಟಕಕ್ಕಾಗುವ ಹಾನಿಯ ಸಣ್ಣ ಲೆಕ್ಕಾಚಾರವಷ್ಟೇ. ಇನ್ನು ಭಾರತದ ಎಲ್ಲಾ ರಾಜ್ಯಗಳು, ಅವುಗಳ ನಷ್ಟ ಮತ್ತು ಇದರಿಂದ ಕೇಂದ್ರದ ಬೊಕ್ಕಸಕ್ಕೆ ಹರಿದುಬರುವ ಜನಸಾಮಾನ್ಯರ ಬೆವರು, ನಿಟ್ಟುಸಿರಿನ ರೂಪಾಯಿಗಳ ರೂಪದ ಪ್ರಮಾಣವನ್ನು ಲೆಕ್ಕ ಹಾಕುವವರ್‍ಯಾರು?

ಉರುಳಿಗೂ ಸಂಭ್ರಮ?

ಜಿಎಸ್‌ಟಿ ಅಂದರೆ ಏಕರೂಪ ಸರಕು ಮತ್ತು ಸೇವಾ ತೆರಿಗೆಯ ಮಸೂದೆಯನ್ನು ಮೋದಿ ಸರ್ಕಾರ ಭಾರೀ ಪ್ರಚಾರದಿಂದಲೇ ಮಹಾನ್ ಸಾಧನೆಯೆಂಬಂತೆ ಜಾರಿಗೆ ತಂದಿದೆ. ಅಮಿತಾಬ್‌ರಂಥ ಬಾಲಿವುಡ್ ದೈತ್ಯನನ್ನೇ ಜಿಎಸ್‌ಟಿಯ ರಾಯಭಾರಿಯನ್ನಾಗಿ ಮಾಡಿಕೊಂಡು ಅದಕ್ಕೊಂದು ನೂರಾರು ಕೋಟಿಯ ಜಾಹಿರಾತು, ಸಾಮಾಜಿಕ ಜಾಲಗಳಲ್ಲಿ ಅದೊಂದು ಕ್ರಾಂತಿಯೆಂಬಂತೆ, ದೇಶಭಕ್ತಿಯ ಪ್ರತೀಕವೇ... , ಸ್ವರ್ಗ ಭೂಮಿಗಿಳಿಸಿದಂತೆ ಬಿಂಬಿಸಿದ ರೀತಿ, ನಡೆಸಿದ ... ಸಗಳು ಅದಕ್ಕೊಂದು ಪ್ರಭುತ್ವ ನೀಡಿದ ಕುಮ್ಮಕ್ಕು ಮತ್ತು ಎಲ್ಲಕ್ಕೂ ಮುಖ್ಯವಾಗಿ ಮಾಧ್ಯಮಗಳಲ್ಲಿ ಅದರ ಪರವಾಗಿ ಬಂದ ಹೊಗಳಿಕೆ, ಭಜನಾವಳಿಗಳೆಲ್ಲವೂ ಏನನ್ನು ಸೂಚಿಸುತ್ತದೆ?

ಹಾಗೆ ನೋಡಿದರೆ ಜಿಎಸ್‌ಟಿಯೆಂಬುದು ಸರ್ಕಾರವೊಂದರ ಅಧಿಕಾರ ಸಹಜ ತೆರಿಗೆ ಸುಧಾರಣಾ ಕ್ರಮವಲ್ಲದೆ ಮತ್ತೇನಲ್ಲ. ವಿಶ್ವದ ನೂರೈವತ್ತಕ್ಕೂ ಅಧಿಕ ದೇಶಗಳಲ್ಲಿ ಜಿಎಸ್‌ಟಿ ಜಾರಿಯಲ್ಲಿದೆ. ಚೀನಾ, ಜಪಾನ್, ಯೂರೋಪ್ ಸೇರಿದಂತೆ ವಿಶ್ವದ ಹಲವಾರು ದೇಶಗಳು ಜಿಎಸ್‌ಟಿ ಜಾರಿಗೊಳಿಸಿ ಯಾವುದೋ ಕಾಲವಾಗಿದೆ ಮತ್ತು ಅದೊಂದು ಹೆಗ್ಗಳಿಕೆಯೆಂಬಂತೆ, ಹೆಮ್ಮೆಯೆಂಬಂತೆ ಯಾರೂ ಭಾವಿಸಿಲ್ಲ. ಹಾಗೆಂದು ಬಿಂಬಿಸಲೂ ಯತ್ನಿಸಿದ ಉದಾಹರಣೆಯಿಲ್ಲ. ಈಗ ಭಾರತ ಜಿಎಸ್‌ಟಿ ರಾಷ್ಟ್ರಗಳ ಸಾಲಿಗೆ ಕೊನೆಯ ಬೆಂಚಿನ ಸದಸ್ಯನಾಗಿ ಸೇರ್ಪಡೆಯಾಗಿದ್ದು ಬಿಟ್ಟರೆ ಅದರಲ್ಲಿ ವಿಶೇಷ ಅಂತಿದ್ದರೆ ಭಾರತ ತನ್ನ ಪ್ರಜೆಗಳ ಮೇಲೆ ವಿಶ್ವದ ಯಾವುದೇ ಸಾಮಾನ್ಯ ದೇಶವೊಂದು ಹೊರಿಸಿದ ಹೊರೆಗಳಿಗಿಂತಲೂ ಅಧಿಕ ಮೊತ್ತದ, ಅಧಿಕ ಭಾರದ ತೆರಿಗೆಯ ಹೊರೆ ಹೊರಿಸುತ್ತಿರುವುದು!

ಸಣ್ಣ ಪುಟ್ಟ ರಾಷ್ಟ್ರಗಳೇ ಶೇ. 11 ರಿಂದ 18ರವರೆಗೆ ತೆರಿಗೆ ವಿಧಿಸಿರುವಾಗ ಎಂತೆಂಥಾ ಬಲಾಢ್ಯ ಮತ್ತು ದೈತ್ಯ ರಾಷ್ಟ್ರಗಳೇ ಶೇ.20 ಕ್ಕಿಂತ ಹೆಚ್ಚು ತೆರಿಗೆ ಹಾಕಲು ಹಿಂದೇಟು ಹಾಕುತ್ತಿರುವಾಗ ಮೋದಿ ಪ್ರಭುತ್ವ ನಿರಂಕುಶ ಶೇಕಡ 28ರಷ್ಟು ತೆರಿಗೆ ಹೇರುತ್ತಿದೆ. ಅಂದರೆ ಭಾರತ ಇಡೀ ಏಷ್ಯಾ ಖಂಡದಲ್ಲೇ ಅತ್ಯಂತ ದುಬಾರಿಯ ಅತೀಹೆಚ್ಚು ಹೊರೆಯ ಜಿಎಸ್‌ಟಿ ದೇಶ!

ರಾಜ್ಯಗಳ ಆರ್ತನಾದ

ಚೀನಾ, ಜಪಾನ್, ಸಿಂಗಾಪೂರ್, ಮಲೇಷಿಯಾದಂಥ ಜವಾಬ್ದಾರಿಯುತ ದೇಶಗಳೇ ತನ್ನ ಪ್ರಜೆಗಳ ಜೆ... ಹೊರಿಸದಷ್ಟು ತೆರಿಗೆಯ ಹೊರೆಯನ್ನು ಹೊರಿಸುತ್ತಿ... ಮೋದಿ ಅದಕ್ಕೆ ಪ್ರತಿಯಾಗಿ ಎಂತಹ ವ್ಯವಸ್ಥೆಯನ್ನು ಕಲ್ಪಿ... ಪಡಿಸುತ್ತಿದ್ದಾರೆ? ಜನಕ್ಕೆ ತಾವು ಕಟ್ಟುವ ತೆರಿಗೆಗೆ ಪ್ರತಿಯ... ಇದಕ್ಕೊಂದು ಸಂಭ್ರಮಿಸಬೇಕಾದ ಹೆಮ್ಮೆ ಪಡಬೇ... ಒಂದೇ ಒಂದು ಕಾರಣವಾದರೂ ಬೇಕಲ್ಲವೆ?

ಹಾಗೆ ನೋಡಿದರೆ ದೇಶದ ಬಹುತೇಕ ರಾಜ... ಮುಖ್ಯ ಆದಾಯವೇ ತಂಬಾಕು, ಅಬಕಾರಿ ಮ... ಪೆಟ್ರೋಲಿಯಂ ಉತ್ಪನ್ನಗಳಿಂದ ಬರುವ ತೆರಿಗೆಯೇ. ಖು... ಮೋದಿಯೇ ಗುಜರಾತ್ ಮುಖ್ಯಮಂತ್ರಿಯಾಗಿದ... ಜಿಎಸ್‌ಟಿಯಿಂದಾಗಿ ತನ್ನ ರಾಜ್ಯಕ್ಕೆ ಪ್ರತಿವರ್ಷ 50 ಸಾ... ಕೋಟಿಗೂ ಅಧಿಕ ಮೊತ್ತದ ನಷ್ಟವಾಗುತ್ತದೆ ಎ... ಬೊಬ್ಬೆ ಹಾಕಿದ್ದೂ ಇದೆ. ಹೀಗಾಗಿ ತಂಬಾಕು, ಅಬ... ಮತ್ತು ಪೆಟ್ರೋಲಿಯಂ ಬಾಬತ್ತನ್ನು ಜಿಎಸ್‌ಟಿ ವ್ಯಾಪ್ತಿಯಿ... ಹೊರಗಿಡಬೇಕೆಂದು ಬಹುತೇಕ ರಾಜ್ಯಗಳು ಮ... ಮಾಡಿಕೊಂಡಿದ್ದವು. ಜಿಎಸ್‌ಟಿ ಜಾರಿಯಿಂದ ತಮ... ಬಾಡಿಗೆ ಆದಾಯ ನಷ್ಟವಾಗುತ್ತದೆ ಮತ್ತು ಈ ನಷ್ಟವ... ಕೇಂದ್ರವೇ ಭರಿಸಬೇಕೆಂಬ ಬೇಡಿಕೆಯೂ ರಾಜ್ಯಗಳದ್ದಾಗಿ... ಕೇಂದ್ರದ ಜಿಎಸ್‌ಟಿ ಜೊತೆಗೆ ರಾಜ್ಯಗಳ ಜಿಎಸ್‌ಟಿಯ... ಸೇರಿ ಅಂತರರಾಜ್ಯ ವಹಿವಾಟಿನ ಮೇಲೆ ಶೇ.1ರ... ತೆರಿಗೆ ವಿಧಿಸುವ ಪ್ರಸ್ತಾಪವನ್ನೂ ಮೋದಿ ಪ್ರಭುತ್ವ ಮಾಡಿ... ಇದಕ್ಕೆ ಕಾಂಗ್ರೆಸ್ ನೇತೃತ್ವದಲ್ಲಿ ಕೆಲ ರಾಜ್ಯ... ವಿರೋಧವಿತ್ತಾದರೂ ಸಂವಿಧಾನದ ತಿದ್ದುಪಡಿ ಮಸೂದೆ... ಅಡಿಯಲ್ಲೇ ಜಿಎಸ್‌ಟಿ ದರವನ್ನೂ ಅಳವಡಿಸಬೇಕೆಂಬು... ಕಾಂಗ್ರೆಸ್‌ನ ಮುಖ್ಯ ಒತ್ತಾಯವಾಗಿತ್ತು. ಜಿಎಸ್... ಜಾರಿಯಿಂದ ಉದ್ಭವಿಸುವ ಸಮಸ್ಯೆಗಳನ್ನು ಬಗೆಹರಿಸಲೆಂ... ನ್ಯಾಯಾಧಿಕರಣವನ್ನು ಸ್ಥಾಪಿಸಬೇಕೆಂಬುದೂ ಕಾಂಗ್... ಸೇರಿದಂತೆ ಅನೇಕ ಬಿಜೆಪಿಯೇತರ ರಾಜ್ಯ... ಬೇಡಿಕೆಯಾಗಿತ್ತು. ಉತ್ಪಾದನೆಯ ಮೇಲಿನ ತೆರಿಗೆಯ... ಅವಲಂಬಿಸಿದ್ದ ತಮಿಳುನಾಡು ಮತ್ತು ಗುಜರಾತ್‌ನ... ರಾಜ್ಯಗಳಿಗೆ ಜಿಎಸ್‌ಟಿಯಿಂದ ಭಾರೀ ನಷ್ಟವಾಗುತ್ತಿದ್ದ... ಮನಗಂಡೇ ಶೇ.1ರಷ್ಟು ಹೆಚ್ಚುವರಿ ತೆರಿಗೆಯ... ಸಂಗ್ರಹಿಸುವ ಇರಾದೆ ಸರ್ಕಾರಕ್ಕಿತ್ತು. ಆದರೆ ಈ ಹೆಚ್ಚು... ತೆರಿಗೆಯ ಹೊರೆಯನ್ನು ಕಾಂಗ್ರೆಸ್ ವಿರೋಧಿಸಿದ್ದರ ಫಲವಾ... ಮೋದಿ ಪ್ರಭುತ್ವ ಅನಿವಾರ್ಯವಾಗಿ ಅದ... ಕೈಬಿಡಬೇಕಾಯಿತು.

ಇದು ಜಿಎಸ್‌ಟಿಯಿಂದಾದ ಒಂದು ಮಟ್ಟ... ಹಾನಿಯಾದರೆ ಇದಲ್ಲಕ್ಕಿಂತಲೂ ಮಿಗಿಲಾದ 'ನರಕ... ಅನ್ಯಾಯಕ್ಕೊಳಗಾಗಿದ್ದು ಭಾರತದ ರಾಜ್ಯಗಳು. ಜಿಎಸ್‌ಟಿ... ಮುನ್ನ ತಮಗೆ ತೋಚಿದ ಹಾಗೆ ಪ್ರತಿ ಬಜೆಟ್ಟಿನಲ್ಲಿಯ... ತೆರಿಗೆ ವಿಧಿಸಬಹುದಾದ ರಾಜ್ಯಗಳ ಸಂವಿಧಾನಬ... ಅಧಿಕಾರಕ್ಕೇ ಕತ್ತರಿ ಬಿದ್ದಿತ್ತು!

ಅಂದರೆ ಇನ್ನು ಮುಂದೆ ರಾಜ್ಯಗಳು "ತಮ... ಸರಿಯೆನಿಸಿದ ಹಾಗೆ ಯಾವೊಂದು ಸರಕು ಸರಂಜಾಮಿ... ಮೇಲೆ ತೆರಿಗೆ ವಿಧಿಸುವಂತಿಲ್ಲ!

ಆಯುಧ ಹಿಡಿದವರ್‍ಯಾರು!

ಇದು ಭಾರತದ ಬಹುತೇಕ ರಾಜ್ಯಗಳ ಸಾರ್ವಭೌಮ... ಮತ್ತು ಸ್ವಯಂ ನಿರ್ಧಾರದ ಹಕ್ಕಿನ ಮೇಲಾದ ಅ... ದೊಡ್ಡ ಪ್ರಹಾರ. ಮುಂದೊಮ್ಮೆ ಭಾರತದ ಗಣತ... ವ್ಯವಸ್ಥೆಯನ್ನೇ ಪ್ರಶ್ನಿಸುವಂತ ಪರಿಸ್ಥಿತಿಗೆ ನೆಟ್ಟ ಬೀಜ ಕೂ... ಹಾಗಂತ ಜಿಎಸ್‌ಟಿಯೇ ಮಾರಕವೆಂದಾಗಲಿ ತಪ್ಪೆಂದಾ... ಅಲ್ಲ. ರಾಷ್ಟ್ರವೊಂದರ ಆರ್ಥಿಕ ವ್ಯವಸ್ಥೆಯಲ್ಲಿ ಏಕರೂ... ತೆರಿಗೆ ವ್ಯವಸ್ಥೆಯಿರುವುದು ಪ್ರಗತಿಗೆ ಪೂರಕವೆ. ಅ... ರೀತಿ ಜನಸಾಮಾನ್ಯರಿಗೂ ಇದು ಒಂದಲ್ಲ ಒಂದು ರೂಪ... ಅನುಕೂಲವೇ. ಆದರೆ ಬಾಣದ ಗುಣ ಅದನ್ನು ಹೊತ್ತ... ಬತ್ತಳಿಕೆಯ ಉದ್ದೇಶದ ಮೇಲೆ ತಾನ... ನಿರ್ಧಾರವಾಗುವುದು? ಬಂದೂಕು ಪೊಲೀಸನ ಕೈಯಲ್ಲಿ... ಹೇಗೆ ಅದರ ಉದ್ದೇಶ ಬೇರೆಯಾಗಿರುತ್ತೋ ಅದೇ ರಿ... ಕಟುಕನ ಕೈಲಿದ್ದರೂ ಆದರ ಗುಣ ಬದಲಾಗುತ್ತದೆ. ಸ... ಜಿಎಸ್‌ಟಿಯಲ್ಲಾಗಿರುವುದೂ ಇದೇ. ಕೇಂದ್ರದಲ್ಲಿ ಎಂಥ... ವ್ಯವಸ್ಥೆಯಿದೆ ಎಂಬುದರ ಆಧಾರದ ಮೇಲೆ ಅದರ ಬಾ... ಯಾರನ್ನು ಮುಟ್ಟುತ್ತದೆಯೆಂಬುದು ನಿರ್ಧಾರವಾಗುತ್ತ...

ಮೋದಿ ಪ್ರಭುತ್ವ ಜಿಎಸ್‌ಟಿಯ ಜಾರಿಗೆಂ... ನೇಮಿಸಿದ ಜಿಎಸ್‌ಟಿ ಕಮೀಶನ್‌ನಲ್ಲಿದ್ದವರಾದರ... ಯಾರ್‍ಯಾರು? ಆಯಾ ರಾಜ್ಯಗಳ ಆರ್ಥಿಕ ಅಧಿಕಾರಸ್ಥ... ಐಎಎಸ್ ಅಧಿಕಾರಿಗಳು ಮತ್ತು ಹಣಕಾಸು ಸಚಿವರ... ತಾನೆ? ಈ ಪೈಕಿ ಹೆಚ್ಚಿನ ಸಂಖ್ಯೆಯಲ್ಲಿದ್ದದ್ದು ಬಿಜೆ... ಅಧಿಕಾರದಲ್ಲಿದ್ದ ರಾಜ್ಯಗಳ ಆರ್ಥಿಕ ಸೂತ್ರಧಾರರುಗಳೆ... ಮೇಲುನೋಟಕ್ಕೆ ಜಿಎಸ್‌ಟಿ ಕೌನ್ಸಿಲ್ ಸಾಮಾಜಿಕ ನ್ಯಾಯ... ಮುಖವಾಡ ಹೊತ್ತಂತೆಯೇ ಕಾಣುತ್ತದೆ. ಆದರೆ ಬಹುತೇ... ಬಿಜೆಪಿ ಮೂಲದ ಸದಸ್ಯರೆಲ್ಲರಿಗೂ ಸರ್ವಾಧಿಕಾ... ಮೋದಿಯೇ. ಹೇಳಿಕೇಳಿ ಮೋದಿ ಕಾರ್ಪೊರೇಟ್ ದೈತ್ಯ... ಆಜ್ಞಾನುವರ್ತಿ ತಾನೆ? ಈಗ ಜಿಎಸ್‌ಟಿಯ ಸೂ... ಹಿಡಿದಿರುವುದೂ ಇದೇ ಅದಾನಿ, ಅಂಬಾನಿ, ಮಿಟ್ಟ... ಜೆಂದಾಲ್, ಬಿರ್ಲಾ ಥರದವರೇ.

ಮೊದಮೊದಲು ಜಿಎಸ್‌ಟಿ ಕೌನ್ಸಿಲ್ ರೈತಾಪಿ, ಕೂ... ನಿರ್ಗತಿಕರ ಮೇಲಿನ ತೆರಿಗೆ ಹೊರೆಯ ಬಗ್ಗೆ ಮಾತಾಡುತ್ತಿ... ಸರಕು ಮತ್ತು ಮಾರುಕಟ್ಟೆಯ ಸೋಂಕೇ ಇಲ್ಲದೆ ತ...



Textile Merchants closed shops in Protest against GST

ಕಾರ್ಪೊರೇಟ್ ಹಿತಾಸಕ್ತಿಗಾಗಿ ತನ್ನದೇ ಮಿಡ್ಲ್‌ಕ್ಲಾಸ್ ಬುಡಕ್ಕೆ ಕೊಳ್ಳಿಯಿಟ್ಟ ಮೋದಿ!

ತೆರಿಗೆ ಸುಧಾರಣೆಯಿರಲಿ, ಅದಕ್ಕೆ ಜಿಎಸ್‌ಟಿ, ಸಿಎಸ್‌ಟಿ ಇತ್ಯಾದಿ ಏನೇ ಹೆಸರಿರಲಿ. ಅಂತಿಮವಾಗಿ ಜನಕ್ಕಾದ ಲಾಭವೇನು ಮತ್ತು ಅದರಿಂದ ಜನಸಾಮಾನ್ಯರ ಬದುಕೆಷ್ಟು ನೆಮ್ಮದಿ ಕಂಡಿತೆಂಬುದೇ ತಾನೇ ಪ್ರಶ್ನೆ?

ಜಿಎಸ್‌ಟಿಯಿಂದಾಗಿ ಹುಡಿಪುಡಿ ಪದಾರ್ಥಗಳ ಬೆಲೆ ಒಂದೋ ಎರಡೋ ರೂಪಾಯಿ ಕಮ್ಮಿಯೆನಿಸಿದರೇನಂತೆ? ಅನಿಲ ಸಿಲೆಂಡರ್‌ನ ಬೆಲೆ ಏಕಾಏಕಿ 32 ರೂಪಾಯಿ ಏರಿಕೆಯಾಗುತ್ತದೆ.. ಪ್ರತಿ ಅಡುಗೆ ಅನಿಲದ ಸಿಲಿಂಡರ್ ಮೇಲಿದ್ದ ಸಬ್ಸಿಡಿಯನ್ನು ರೂ. 119ರಿಂದ 107ಕ್ಕೆ ಇಳಿಸಲಾಗಿದೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗೆ 69 ರೂಪಾಯಿ ಕಮ್ಮಿಯಾದರೂ ಜನಸಾಮಾನ್ಯರು ಬಳಸುವ ಸಿಲಿಂಡರ್ 32 ರೂಪಾಯಿ ದುಬಾರಿಯಾಗಲಿದೆ. ಕಾರು, ಎಲ್ಇಡಿ ಟೀವಿಗಳು ಅಗ್ಗವಾಗಬಹುದು. ಅದು ಪರೋಕ್ಷವಾಗಿ ಕಾರ್ಪೊರೇಟ್ ಹಿತಾಸಕ್ತಿಯೇ ತಾನೆ?

ಆದರೆ ಹೋಟೆಲು, ರೆಸ್ಟೋರೆಂಟ್‌ಗಳಲ್ಲಿ ಶೇ.18ರಷ್ಟು ಸೇವಾ ತೆರಿಗೆಯ ಹೊರೆ ಬೀಳುತ್ತದೆ. ಹೀಗಾಗಿ ಹಿಂದಿದ್ದ ಹೋಟೆಲ್ ತಿಂಡಿಗಳ ರೇಟು ಏಕಾಏಕಿ ಏರಲಿದೆ. ಇತ್ತ ತಮಿಳುನಾಡಿನಲ್ಲಿ ಜಿಎಸ್‌ಟಿಯಿಂದಾಗಿ ಇಡೀ ಚಿತ್ರೋದ್ಯಮವೇ ಮುಚ್ಚಬೇಕಾದ ಸ್ಥಿತಿಯಿದೆ. ಶೇ.28ರಷ್ಟು ಜಿಎಸ್‌ಟಿಯ ಮನರಂಜನಾ ತೆರಿಗೆಯಲ್ಲದೆ ತಮಿಳುನಾಡು ಸರ್ಕಾರ ಪ್ರತ್ಯೇಕವಾಗಿ ವಿಧಿಸುತ್ತಿದ್ದ ಶೇ.30ರಷ್ಟು ತೆರಿಗೆಯೂ ಸೇರಿ ಒಟ್ಟು 68 ಶೇ. ತೆರಿಗೆಯ ಹೊರಗೆ ತಮಿಳು ಚಿತ್ರರಂಗ ಕಂಗಾಲೆದ್ದು ಕೂತಿದೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ ಸೇರಿದಂತೆ ಜಮ್ಮು ಕಾಶ್ಮೀರದಲ್ಲೂ ವರ್ತಕ ಸಮೂಹ ಬೀದಿಗಿಳಿದು ಜಿಎಸ್‌ಟಿ ವಿರುದ್ಧ ಪ್ರತಿಭಟಿಸುತ್ತಿದೆ. ಈ ಪೈಕಿ ಬಹುಪಾಲು ವರ್ತಕ ಸಮೂಹ ಬಿಜೆಪಿ-ಸಂಘಪರಿವಾರದ ಆಧಾರ ಸ್ತಂಭದಂತಿದ್ದರೂ ಗುಜರಾತ್‌ನ ಸೂರತ್‌ನಂಥ ಜವಳಿ ರಾಜಧಾನಿಯೂ ಸೇರಿದಂತೆ ಕರ್ನಾಟಕದ ಹುಬ್ಬಳ್ಳಿಯ ಜವಳಿ ವರ್ತಕರು ಕೂಡ ಅನಿವಾರ್ಯವಾಗಿ ಬೀದಿಗಿಳಿಯಲೇಬೇಕಾಗಿದೆ.


ಹೀಗೆ ಜವಳಿ ವರ್ತಕರೋ, ಸಣ್ಣಪುಟ್ಟ ಅಂಗಡಿಗಳನ್ನಿಟ್ಟು ದುಡ್ಡು ಕಾಣುತ್ತಿದ್ದ ವರ್ತಕರೋ, ಚಿನ್ನ ಬೆಳ್ಳಿಯನ್ನೇ ಅವಲಂಬಿಸಿದವರೋ, ಹೋಟೇಲುಗಳನ್ನಿಟ್ಟು ಹಾಯಾಗಿದ್ದ ಸಮೂಹ ತಾನೇ ಯಾರು? ಮಿಡ್ಲ್‌ಕ್ಲಾಸ್, ಮೇಲ್ವರ್ಗದ, ಅನಾದಿಕಾಲದಿಂದಲೂ ಬಿಜೆಪಿ-ಸಂಘ ಪರಿವಾರದ ದೇಶಭಕ್ತಿಯ ಭ್ರಮೆಗೆ ಬಿದ್ದ ದಲಿತರು, ಮುಸ್ಲಿಮರನ್ನು ದ್ವೇಷಿಸಿಕೊಂಡೇ ಬಂದ ಮೀಸಲಾತಿ ವಿರೋಧಿಗಳಾದ ತನ್ನದೇ ಅಧಿಕಾರ ಸುಪ್ಪತ್ತಿಗೆಯ ಆಧಾರಸ್ತಂಭಗಳನ್ನೇ ಕಾರ್ಪೊರೇಟ್ ಹಿತಾಸಕ್ತಿಗೆ ಬಲಿಕೊಟ್ಟ ಬಿಜೆಪಿಯ ಮೋದಿ ಅಲೆಯ ವಿಕಟ ಪರಿಣಾಮಕ್ಕೆ ಇದಕ್ಕಿಂತ ಬೇಕೆ?

ತ್ತಿಪಾದಿಗಷ್ಟೇ ಬದುಕುತ್ತಿರುವ ಹಳ್ಳಿಗಾಡಿನ ರೈತರು, ಕಟ್ಟು, ಕೂಲಿಗಳು, ದಿನಕೂಲಿ ಕಾರ್ಮಿಕರು ಯಾಗಿ ಬಡತನದ ರೇಖೆಯ ಆಚೀಚೆಗಿರುವ ದೇಶದ ದೊಡ್ಡ ಸಮೂಹವನ್ನು ತೆರಿಗೆಯ ಹೊರೆಯಿಂದ ವು ಮಾಡುವುದೇ ಜಿಎಸ್‌ಟಿಯ ಗುರಿ ಎಂದರು. ಮೇ ಈ ವರ್ಗದ ಮೇಲೆ ಸಣ್ಣದೊಂದು ಕಡ್ಡಿಯಷ್ಟೂ ಾಗದ ಹಾಗೆ ನೋಡಿಯೂ ಕೊಂಡರು. ಏಕೆಂದರೆ ಮೂಹಗಳು ಆ ಕಾಲದಿಂದಲೂ ಒಂದಲ್ಲ ಒಂದು ಾಜಿಕ ಯೋಜನೆಗಳನ್ನು ಅವಲಂಬಿಸಿಯೇ ಕಿದ್ದರಲ್ಲ; ಅಸಲಿಗೆ ಬಿಸಿ ಮುಟ್ಟುವುದು ಮಧ್ಯಮ ಶ್ರೀಮಂತ ವರ್ಗದ ಜನಕ್ಕೆ ಹೊರೆಯೋ ಲಾಭವ್ರೋ ಂದೂ ಮುಖ್ಯವಾಗುವುದೇ ಇಲ್ಲವಾದ್ದರಿಂದ ವವಾಗಿ ಜಿಎಸ್‌ಟಿಯ ಫಲಾನುಭವಿಗಳಾಗಿ ಮವರ್ಗ ತಲೆಕೊಡಲೇಬೇಕಾಯಿತು.

ಮಿಡ್ಲ್‌ಕ್ಲಾಸ್ ಸರ್ವನಾಶ

ಉದಾಹರಣೆಗೆ ಸೋಪಿನ ಮೇಲೆ ಶೇ.18ರಷ್ಟು ತೆರಿಗೆ ಶಾಂಪೂ ಮೇಲೆ ಶೇ.28ರಷ್ಟು ತೆರಿಗೆ ಹಾಕಿದ್ದರ ರವೇ ಕಾರ್ಪೊರೇಟ್ ಹಿತಾಸಕ್ತಿ. ಗೋಡಂಬಿಯ







ಮೇಲೆ ಶೇ.18ರಷ್ಟು ವಿಧಿಸಿ ಬಾದಾಮಿಯ ಮೇಲೆ ಶೇ.28ರಷ್ಟು ಹಾಕಿದ್ದೂ ಕೂಡ ಕಾರ್ಪೊರೇಟ್ ಕಂಪೆನಿಗಳು ಬಾದಾಮಿಯ ಉತ್ಪನ್ನಗಳಾದ ಶಾಂಪೂ, ಸೌಂದರ್ಯವರ್ಧಕ ಲೋಶನ್ನುಗಳ ಮೂಲಕ ಲಾಭ ಮಾಡಹೊರಟಿರುವುದರಿಂದ. ಇದೆಲ್ಲಕ್ಕೂ ಮಿಗಿಲಾಗಿ ಮಹಿಳೆಯರ ಪಾಲಿನ ಅನಿವಾರ್ಯವಾದ ಸ್ಯಾನಿಟರಿ ನ್ಯಾಪ್‌ಕಿನ್ನುಗಳ ಮೇಲೆ ಶೇ.18ರಷ್ಟು ತೆರಿಗೆ ಹಾಕಿ ಕಾಂಡೋಮ್ಮುಗಳನ್ನು ತೆರಿಗೆ ಮುಕ್ತಗೊಳಿಸಿದ್ದರ ಕುತರ್ಕಕ್ಕೂ ಇದೇ ಕಾರಣ. ಹಿಂದಾದರೆ ಬ್ರಾಂಡ್‌ರಹಿತ ಸ್ಯಾನಿಟರಿ ನ್ಯಾಪ್‌ಕಿನ್ನುಗಳು ಎಂಟೋ ಹತ್ತೋ ರೂಪಾಯಿಗೆ ತೀರ ಅಗ್ಗವಾಗಿ ಸಿಗುತ್ತಿತ್ತು, ಗ್ರಾಮೀಣ ಮಹಿಳೆಯರಾದಿಯಾಗಿ ನಗರವಾಸಿ ದಿನಗೂಲಿ ಮಹಿಳೆಯರೂ ಅಗ್ಗವಾದ ಬ್ರಾಂಡ್‌ರಹಿತ ಸ್ಯಾನಿಟರಿ ನ್ಯಾಪಕಿನ್ನುಗಳನ್ನು ಬಳಸಬಹುದಿತ್ತು.

ಈಗ ಹಾಗಿಲ್ಲ, ಬ್ರಾಂಡ್‌ರಹಿತ ನ್ಯಾಪಕಿನ್ನುಗಳು ಕೂಡ ತೆರಿಗೆಯ ವ್ಯಾಪ್ತಿಗೆ ಬಂದಿರುವುದರಿಂದ ಇನ್ನೊಂದೈದೋ ಹತ್ತೋ ರೂಪಾಯಿ ಕೊಟ್ಟು ಬ್ರಾಂಡೆಡ್ ನ್ಯಾಪಕಿನ್ನುಗಳನ್ನೇ ಖರೀದಿಸಲು ಮಹಿಳೆಯರು ಹಿಂಜರಿಯುವುದಿಲ್ಲ. ಇದರರ್ಥ ವ್ಯವಸ್ಥಿತವಾಗಿ ಕೆಳಮಧ್ಯಮ ವರ್ಗದ ಮಹಿಳೆಯರನ್ನೂ ಕಾರ್ಪೊರೇಟ್ ಜಾಲದೊಳಕ್ಕೆ ನೂಕುವುದು. ಸಣ್ಣಪುಟ್ಟ ಮೊಬೈಲುಗಳು, ಲ್ಯಾಪ್‌ಟಾಪ್ ಇತ್ಯಾದಿಗಳನ್ನು ಖರೀದಿಸಬಲ್ಲ, ಪ್ರತಿಯೊಂದನ್ನೂ ಅಂಗಡಿಯಿಂದಲೇ ತರಬಲ್ಲ ಮಧ್ಯಮವರ್ಗದ ಜನಕ್ಕೆ ಅದೆಂಥಾ ದಿವಾಳಿ ಪರಿಸ್ಥಿತಿಯೆಂದರೆ ನಾವು ದುಡಿದಿದ್ದೆಲ್ಲವನ್ನೂ ನೀವೇ ಇಟ್ಟುಕೊಂಡು ತೆರಿಗೆಯನ್ನು ನಮಗೇ ಕೊಟ್ಟುಬಿಡಿ ಎಂಬಂಥ ಪರಿಸ್ಥಿತಿ ಜಿಎಸ್‌ಟಿಯಿಂದಾಗಿ ದೇಶದ ಮಧ್ಯಮ ವರ್ಗ ಇನ್ನೆಂದೂ ಚೇತರಿಸಿಕೊಳ್ಳಲಾಗದ ಶಾಶ್ವತವಾಗಿ ಕಾರ್ಪೊರೇಟ್ ದಾಸ್ಯಕ್ಕೆ ತಲೆಕೊಡಲೇಬೇಕಾದ ಅನಿವಾರ್ಯಕ್ಕೆ ಬದ್ಧವಾಗಿದ್ದಂತೂ ಸತ್ಯ.


ಚಿನ್ನದ ಮೇಲಿನ ಮೂರು ಪಟ್ಟನ್ನು ತಿನ್ನುವ ಬಿಸ್ಕತ್ತಿನ ಮೇಲೆ ವಿಧಿಸಿದ್ದಕ್ಕೆ ಜಿಎಸ್‌ಟಿ ಕೌನ್ಸಿಲ್ ಬಳಿ ಯಾವುದೇ ಉತ್ತರವಿಲ್ಲ. ಕಾಂಡೋಮ್ ಅನ್ನು ಉಚಿತಗೊಳಿಸಿ ಸಾಮಾನ್ಯ ಮಹಿಳೆಯರು ಬಳಸುವ ಸ್ಯಾನಿಟರಿ ನ್ಯಾಪ್‌ಕಿನ್ ಮೇಲೆ ದುಬಾರಿ 18 ಪರ್ಸೆಂಟ್ ತೆರಿಗೆ ಹೇರಿದ್ದಕ್ಕೂ ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಯಾವುದೇ ಸಮರ್ಥನೆಗಳಿಲ್ಲ. ಈ ರೀತಿ ತರ್ಕಕ್ಕೆ ನಿಲುಕದ ಸಮರ್ಥನೆಗಳಿಲ್ಲದ ಅಸಂಖ್ಯಾತ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುತ್ತವೆ. ಇದರರ್ಥ ಮೋದಿ ತನ್ನ ಕಾರ್ಪೊರೇಟ್ ಅನ್ನದಾತರ ಕೈಗೆ ಜಿಎಸ್‌ಟಿಯೆಂಬ ಆಯುಧವನ್ನಿತ್ತ ಫಲವಿದು. ಶಸ್ತ್ರ ಎಷ್ಟು ಪರಿಣಾಮಕಾರಿ ಎಂಬುದಕ್ಕಿಂತಲೂ ಅದು ಯಾರ ಕೈಯಲ್ಲಿದೆ ಎಂಬುದೇ ಮುಖ್ಯವಾಗುತ್ತದೆ. ಅದೇರೀತಿ ಜಿಎಸ್‌ಟಿ ಎಷ್ಟೇ ಸರಳ ಮತ್ತು ಸಾರ್ವತ್ರಿಕವೆನಿಸಿದರೂ ಅದನ್ನು ಬಳಸುವ ಸರ್ಕಾರ ಯಾರದೆಂಬುದೇ ಅದರ ಪರಿಣಾಮವನ್ನು ನಿರ್ಧರಿಸುತ್ತದೆ.

ದುರಂತವೆಂದರೆ ಯಾವ ಮಧ್ಯಮ ವರ್ಗ ಅಯೋಧ್ಯೆ, ಪಾಕಿಸ್ತಾನ, ಯುದ್ಧ, ಹಿಂದುತ್ವ, ಗುಜರಾತ್, ಗೋಧ್ರಾ.... ಎಂದೆಲ್ಲ ಮೋದಿ ಅಲೆಯಲ್ಲಿ ತೇಲುತ್ತಿತ್ತೋ ಅದೇ ಮಧ್ಯಮ ವರ್ಗವನ್ನು ಮೋದಿ ತನ್ನ ಕಾರ್ಪೊರೇಟ್ ಧಣಿಗಳಿಗಾಗಿ ಬಲಿ ಕೊಟ್ಟಿದ್ದಾನೆ, ಬಲಿ ಹಾಕಿದ್ದಾನೆ. ಅದೂ ಜಿಎಸ್‌ಟಿಯೆಂಬ ಮೋಹಕ ಬಲೆಯಲ್ಲಿ ಕೆಡವಿ!

ಮೀಡಿಯಾಗಳು ಸಂಭ್ರಮಿಸುತ್ತಿವೆ, ಮೋದಿಯನ್ನು ಹಾಡಿ ಹೊಗಳುತ್ತಿವೆ ನಿಜ. ಚಪ್ಪಾಳೆ ತಟ್ಟುವ ಮಧ್ಯಮ ವರ್ಗದ ಬುಡಕ್ಕೆ ಇಟ್ಟ ಕೊಳ್ಳಿಯ ಕಾವಿನ್ನೂ ತಟ್ಟಿಲ್ಲವಲ್ಲ, ಬಹುಶಃ ಸುಟ್ಟ ಬೆಂಕಿ ಯಾವುದೆಂಬುದೂ ಗೊತ್ತಾಗುತ್ತೋ ಇಲ್ಲವೋ ಗೊತ್ತಿಲ್ಲ.

■ ರಾ. ಸೋಮನಾಥ್

...ಾಂಗ್ರೆಸ್ಸಿನೋರು ಹಗಲಗಳ್ರು, ಬಿಜೆಪಿಗಳು ರಾತ್ರಿ ಕಳ್ರು ಅಷ್ಟೆ!



ಜನಗಳೆಲ್ಲಾ ಜಿಎಸ್‌ಟಿ ಎಂದಾಕೊಂಡು ...ಡುತ್ತಿರುವುದನ್ನು ನೋಡಿದ ಜುಮ್ಮಿಗೆ ಅದೇನೆಂದು ...ಕೊಳ್ಳಬೇಕೆಂಬ ಕುತೂಹಲವಾಗಿತ್ತು. ಆದ್ದರಿಂದ ...ಸ್ಸೆ ಬಂದ ಕೂಡಲೇ,

"...ಲೇ ವಾಟಿಸ್ಸೆ, ಜಿಯೆಸ್‌ಟಿ ಅಂದ್ರೇನ್ಲ?" ಎಂದಳು.

"ಜಿ.ಎಸ್.ಟಿ ಅಂದ್ರೆ ನನಿಗೆ ಬಂದಿರೊ ಮೆಸೇಜ್ ...ರ ಅದು ಎಡೂರಪ್ಪ ಮತ್ತು ಶೋಬಕ್ಕನ ನಡುವೆ ...ರೊ ಆತ್ಮೀಯ ಸಂಭಾಷಣೆ ಕಣಕ್ಕ."

"ಅದೇನು ಸರಿಯಾಗೇಳ್ಳ, ತಲರಟೆ ನನ್ನ ಮಗನೆ."

"...ಸರಿಯಾಗೇಳಿದೆ. ಈ ಮೆಸೇಜ್ ಕೂಡ ತಲರಟೆಗಳು ...ರದೆ ಕಣಕ್ಕ. ಜಿ ಅಂದ್ರೆ ಇಂಗ್ಲೀಸ್‌ನಲ್ಲಿ ಗುಡ್‌ನೈಟ್ ...ಎಸ್ ಅಂದ್ರೆ ಸ್ವೀಟ್ ಡ್ರೀಮ್. ಇನ್ನ ಟಿ ಅಂದ್ರೆ ...ಕೇರ್ ಅಂತಲಂತೆ ಕಣಕ್ಕ. ಇದರ ಮೀನಿಂಗ್ ...ದ್ರೇ ಶುಭರಾತ್ರಿಯಲ್ಲಿ ಸವಿಗನಸು ಕಾಣುವಾಗ ...ಿರಬೇಕು. ಅಂದ್ರೆ ಎಚ್ಚರಿಕೆಯಾಗಿರಬೇಕು. ಏನಾದ್ರು ...ರತು ಮಲಗಿದ್ರೆ ಯಾರಾದ್ರು ಮೈ ಕೆಡಿಸಿಬುಡ್ತರೆ ...ಸಂದೇಶ ಈ ಜಿ.ಎಸ್.ಟಿ ವಳಗದಂತೆ.

"ಅದ ಎಡೂರಪ್ಪ ಸೋಬನಿಗೇಳಿದ್ದಾ?"

"...ಅಂಗಂತ ಮೆಸೇಜ್ ಬಂದದೆ ಕಣಕ್ಕ."

"...ಯಾವ್ರೊ ನಿನ್ನಂತ ಸಲವಾಲ್ದವು ಕಂಡ್ಯ ಅವು. ನೀನಾರ ...ಉಗ್ರಿ."

"...ನೋಡೆ, ಹೆಚ್ಚಿಗೆ ತಲೆ ಕೆಡಿಸಿಗಳಕ್ಕೆ ಹೋಗಬ್ಯಾಡ. ...ನಿನ್ನತ್ರ ಮೊಬೈಲದೆ. ಅದ ಕಳಕತ್ತಿ, ಇಲ್ಲ ನೀರಿಗೆ ...ಬುಡ್ತಿ, ಆಗ ವಸಾ ಮೊಬೈಲ್ ತಗಳಕ್ಕೆ ಅಂತ ...ತ್ತಿ, ಆಗ ಜಿ.ಎಸ್.ಟಿ ಅಂದ್ರೇನು ಅನ್ನದು ನಿನಿಗೇ ...ಯುತ್ತದೆ."

"...ಅದ್ಯಂಗೊತ್ತಾದತ್ಲ?"


"...ಅದ್ಯಂಗೇ ಅಂದ್ರೆ, ಮೊಬೈಲ್ ರೇಟು ...ದಾಗಿರತದೆ. ಯಾಕೆ ಅಂತ ನೀನು ಕೇಳ್ತಿ, ಆಗ ...ಯೋನು ಜಿ.ಎಸ್.ಟಿ ಅಂತನೆ" ಎಂದು ಉಗ್ರಿ ...ದ.

"...ನಿನಿಗೂ ಸರಿಯಾಗಿ ಗೊತ್ತಿಲ್ಲ ಬುಡ್ಡ" ಎಂದಳು ... ಆಗ ವಾಟಿಸ್ಸೆ,

"...ನೋಡಕ್ಕಾ, ಅಷ್ಟಕ್ಕೂ ಜಿ.ಎಸ್.ಟಿ ಅನ್ನದು ವರ್ತಕರು ...ಚೆ ಮಾಡಬೇಕಾದ ಸಮಸ್ಯೆ. ಅದು ಪಂಚಾತಿ ...ರ್ ಪ್ಯಾಬ್ಲಮ್ಮಲ್ಲ, ನೋಡು ನಮ್ಮ ದೊಡಪ್ಪ ಯಂಗೆ ...ಜವ್ರುನೆ. ಯಾಕೆ ಅಂದ್ರೆ, ಅವ್ರುನಿಗೂ, ಅವನ ...ಗೂ, ಈ ಜಿ.ಎಸ್.ಟಿಗೂ ಯಾವ ಸಮಂಧನೂ ...

"...ಅದ್ಯಂಗೇಳ್ತಿಲಾ?"

"...ನೋಡಕ್ಕ, ದೊಡಪ್ಪ ಪತ್ತರೆ ಎದ್ದು ಹಲ್ಲುಜ್ಜತನೆ. ...ಟೂತ್‌ಪೇಸ್ಟ್, ಬ್ರಸು ಬಳಸದಿಲ್ಲ, ಸೋಪನೂ ...ಲ್ಲ, ಕಾಯಿ ಚಟ್ನಿಲಿ ರೊಟ್ಟಿ ತಿಂತನೆ. ಅಲ್ಲೂ



ಜಿ.ಎಸ್.ಟಿ ಇಲ್ಲ. ಮಧ್ಯಾಹ್ನ ಮುದ್ದೆ ಉಂಡು, ಮ್ಯಾಲಿಷ್ಟು ಅನ್ನ ಉಣ್ಣತನೆ. ರಾತ್ರಿಕೂ ಅದೆಯ. ಇಲ್ಲೆಲ್ಲಿ ಜಿ.ಎಸ್.ಟಿಗೆ ವಳಪಟ್ಟಾ?"

"ಬೀಡಿ ಸೇತ್ತನಲ್ಲೊ?"

"ಅವ್ರುನು ಸೇದೊ ಐದು ಬೀಡಿ ಮೇಲೆ ಇನ್ಯಾವ ಟ್ಯಾಕ್ಸ್ ಬಿದ್ದಿರತದೊ. ಇನ್ನ ನಮ್ಮ ಸೀರ ಚಿಗಪ್ಪನಂತೂ ಅವ್ರಿವ್ರುರತ್ರ ಬೀಡಿ ಕೇಳದ್ರಿಂದ ಅವ್ರುನಿಗೂ ಜಿ.ಎಸ್.ಟಿಗೂ ನೇರ ಸಮಂಧ ಇಲ್ಲ" ಎಂದ ವಾಟಿಸ್ಸೆ. ಸಿಟ್ಟಾದ ಸೀರ.

"ನಾನ್ಯಾವತ್ತು ನಿನ್ನತ್ರ ಬೀಡಿ ಕೇಳಿದ್ದುನ್ಲಾ?" ಎಂದ.

"ಮಾತಿಗೇಳಿದೆ ಚಿಗಪ್ಪಾ, ಮನಸು ಮಾಡಿದ್ರೆ ನಾವು ಆ ಜಿ.ಎಸ್.ಟಿ ಮುಕ್ತ ಊರು ಮಾಡಬವುದಿತ್ತು, ಆದ್ರೆ ಯಲ್ರೂ ನಮ್ಮ ದೊಡಪ್ಪನಂಗಿಲವಲ್ಲಾ, ಆದ್ರಿಂದ ಜಿ.ಎಸ್.ಟಿ. ನಮ್ಮೂರಿಗೂ ಆವರಿಸಿಗಂಡದೆ."

"ಕಡಿಗೂ ಅದೇನು ಅಂತ ಹೇಳ್ಳಿಲ್ಲ ಕಂಡ್ಯ ನೀನು."

"ನೋಡಕ್ಕ, ಇಷ್ಟೆ ಇದರ ಗುಟ್ಟು. ವರ್ತಕರು ಕಂಪ್ಯೂಟರ್ ತಗಂಡು, ಇಂಟರ್‌ನೆಟ್ ಬಳಸಿ, ಬಿಲೆ ಪಟ್ಟಿ ಮಾಡಿ ವ್ಯಪಾರ ಮಾಡಬೇಕು, ಟ್ಯಾಕ್ಸ್ ಕದಿಯಂಗಿಲ್ಲ, ಸರಿಯಾದ ಲೆಕ್ಕ ಕೊಡಬೇಕು. ಯಲ್ಲ ವ್ಯಾಪಾರಿಗಳು ಇನ್ನು ಮ್ಯಾಲೆ ಕಂಪ್ಯೂಟರು, ಇಂಟರ್‌ನೆಟ್ ಬುಟ್ಟು ವ್ಯಪಾರ ಮಾಡಂಗಿಲ್ಲ."

"ಅದೇನೊ ಗೊತ್ತಾಗದಿಲ್ಲ ಹೋಗು."

"ಎಂ.ಪಿಗಳು, ಎಮ್ಮೆಲ್ಲೆಗಳು ಇವ್ರುಂಗೇ ಗೊತ್ತಾಯ್ತಾ ಯಲ್ಲ, ಇನ್ನ ಪಂಚಾತಿ ಮೆಂಬ್ರುಗೆಲ್ಲಿ ಗೊತ್ತಾದತಕ್ಕಾ? ಕ್ರಮೇಣ ಯಲ್ಲ ಗೊತ್ತಾಯ್ತದೆ. ಕಾಯಣ ಬುಡು."

"ಜಿ.ಎಸ್.ಟಿಯ ಅರ್ಧರಾತ್ರಿಲಿ ತರೊ ಅಂತದ್ದೇನಿತ್ತು?" ಎಂದ ಉಗ್ರಿ.

"ಈ ಬಿಜೆಪಿಗಳು ಏನು ಮಾಡಿದ್ರೂ ನಾವು ಕಾಂಗ್ರೆಸ್ಸಿಗಿಂತ ಬ್ಯಾರೆ ತರ ಮಾಡಬೇಕು ಅನ್ನೊ ಹಟಬುಟ್ರೆ ಇನ್ನೇನುವಿಲ್ಲ ಕಣೊ. ಕಾಂಗ್ರೆಸ್ಸಿನೋರು ಹಗಲಗಳ್ರು. ಬಿಜೆಪಿಗಳು ರಾತ್ರಿ ಕಳ್ರು ಅಷ್ಟೆ. ನಿಶಾಚರಿ ಕ್ಯಲಸಗಳಲ್ಲಿ ನಿಸ್ಸೀಮರು. ಕಾಂಗ್ರೆಸ್ಸಿನವಂಗಲ್ಲ."

"ಅದೇನೂ ನಿಜ ಬುಡು. ಕಾಂಗ್ರೆಸ್ಸಿನವ್ರು ಏನು ಮಾಡಿದ್ರು ಜನಗಳ ಎದ್ರಿಗೆ ಮಾಡೋರು. ಆದ್ರೆ ಈ ನನಮಕ್ಳ ಕ್ಯಲಸ್ವಲ್ಲ ಮರೆಲೆ ನ್ಯಡಿಯದು. ಅದರಲ್ಲೂ ಮಾಡಬಾರ್ದ ಮಾಡಬೇಕಾದ್ರೆ ಇವ್ರುರಿಗೆ ರಾತ್ರಿವೊತ್ತೆ ಬೇಕು" ಎಂದು ಉಗ್ರಿ ಹೇಳುತ್ತಿರುವಾಗ ಬಾಯಿಬಿಟ್ಟ ಕಾಳಮಾವ,

"ನೀನೇಳದ್ರಲ್ಲಿ ರೈತರಿಗೇನು ಮಾಡಿಲವೇನ್ಲ?" ಎಂದ.

"ಇಲ್ಲ ದೊಡಪ್ಪ ಬಿಜೆಪಿ ವರ್ತಕರ ಪಾರ್ಟಿಯಾದ್ದರಿಂದ ಯಾವಾಗ್ಲು ಅದ್ನೆ ಯೋಚನೆ ಮಾಡ್ತರೆ. ಅವ್ರುರಿಗೂ ರೈತರಿಗೂ ಯಾವ ಸಮಂಧನೂ ಇಲ್ಲ ಅಂತ ಅದಾಗ್ಲೆ ಸಾಬೀತಾಗ್ಯದೆ. ರೈತರ ಸಾಲಮನ್ನಾ ಮಡದಿಲವಂತೆ ಅವ್ರುರು."

"ಯಲಕ್ಷನ್ನಿಗೆ ಬತ್ತರಲ್ಲ ಆಗ ಕೇಳನ ಬುಡು."

"ಆಗೇನಾರ ಮಾಡ್ತರೆ. ಇಲ್ಲ ಅಂದ್ರೆ ಮಕ ಎತ್ತಿಗಂಡು ತಿರಗಕ್ಕಾದತೆ" ಎಂದ ಉಗ್ರಿ.

"ಅವ್ರುನ್ಯಾರ್ಲ ಉಗ್ರಿ ಉಡುಪಿಗೆ ಬಂದ್ರೆ ರಗತ ಹರುಸ್ತಿನಿ ಅಂದವ್ರುನಲ್ಲ, ಆ ನನಮಗನಿಗೆ ರಗತ ಎಷ್ಟಿರಬೇಕು ನಡಿರ್ಲ ನೋಡನ" ಎಂದ ಸೀರ.

"ಆಹಾ, ಹ್ವಡದಾಟ ಅಂದ್ರೆ ಥ್ರಿಲ್ಲಾಗೊ ನಮ್ಮ ಸೀರ ಚಿಗಪ್ಪ ಈ ವಯಸಿನಲ್ಲೂ ಇಷ್ಟು ಪೌರುಷ ಮಡಿಕಂಡಿರದು ವಂಡ್ರುಪುಲ್ಲು. ಆಕ್ಚುವಲಿ ನಮ್ಮ ಸೀರ ಚಿಗಪ್ಪ ಮೋದಿ ಸರಕಾರ ಇರುವಾಗ ಮಿಲಿಟ್ರಿಲಿರಬೇಕಾಗಿತ್ತು. ಇಷ್ಟೊತ್ತಿಗೆ ಚೀನಾ ಗಡಿಯಿಂದ ನಮ್ಮೂರಿಗೆ ನಮ್ಮ ಚಿಗಪ್ಪನ ಪಾರ್ಥಿವ ಶರೀರ ಬಂದುಬುಡದು. ಏನು ಮಾಡ್ತಿ, ಚಿಗಪ್ಪನಿಗಾಗ್ಲೆ ಶೆವೆಂಟಿ ಕ್ರಾಸಾಗಿದೆ. ಆದ್ರು ಆ ಬ್ಲಡ್ಡಿಗೆ ವಯಿಸಾಗಿಲ್ಲ, ಅದ್ಕೆ ಅಂತ ಮಾತಾಡ್ತನೆ."

"ಇವತ್ತು ಬಗ್ಗದಿಲ್ಲ ಕಂಡ್ಯ ನಾನು. ಕರಿ ಅದ್ಯಾವನು ನೋಡಿಕತ್ತಿನಿ."

"ಅವ್ರುನು ಪ್ರಮೋದ್ ಮುತಾಲಿಕ್ ಅಂತ ಚಿಗಪ್ಪ. ಅವ್ರುನೊಂಥರಾ ತರಡಿಲ್ಲದ ನರಿ ಸಂತತಿಯೋನು. ಇವು ನಾನೇಳಿದ ಮಾತಲ್ಲ. ಕುವೆಂಪು ಮಗನೆ ಹೇಳಿದ್ದು. ಉಡುಪಿ ಮಠದತ್ರಕೆ ಸಾಬರ ಬಂದ್ರೆ ರಕ್ತ ಹರುಸ್ತಿನಿ ಅಂದವ್ರುನೆ."

"ಅದ್ಯಾಕಂಗಂದಾ? ಉಡುಪಿ ಏನವ್ರುರಪ್ಪನ ಮನಿಯೆ?"

"ಅವ್ರುರಪ್ಪನ ಮನೆ ಅದನ್ನದಕ್ಕಿಂತ ಅವ್ರುರ ಧರ್ಮಗುರುಗಳ ಮಠ ಅದು."


"ಅವ್ರುನ ಧರಮಗುರು ಯಾರೂ?"

"ಪೇಜಾವರ ಸ್ವಾಮಿ ಚಿಗಪ್ಪ. ಆ ಸ್ವಾಮಿ ಮನ್ನೆ ಆಯ್ತುಲ್ಲ ರಮಜಾನಬ್ಬ, ಆಗ ಸಾಬರನ್ನೆಲ್ಲ ಮಠಕ್ಕೆ ಕರದೂ ಊಟ ಹಾಕಿ ಕಳಿಸಿದರು. ಅದು ಗೊತ್ತಾಗಿ ಈ ಮುತಾಲಿಕ್ಕ ಅನ್ನೋನು ದನ ತಿನ್ನೋರ ಮಠದೊಳಿಕ್ಕೆ ಕರದು ಊಟ ಹಾಕಿದ್ದಿಯಲ್ಲಾ ಇನ್ನೊಂದು ಸತಿ ಅವ್ರುರನ್ನೇನಾರ ಕರದ್ರೆ ನಾನು ರಗತ ಹರುಸ್ತಿನಿ ಅಂದವ್ರುನೆ."

"ಅಂಥ ಮಾತಂದಿದ್ದನೇ?" ಎಂದು ಕಾಳಮಾವ ಅಚ್ಚರಿಗೊಂಡ.

"ಹೆದರೊ ಅಗತ್ಯ ಇಲ್ಲ ದೊಡಪ್ಪ ನಾನಾಗ್ಲೆ ಹೇಳಿದಂಗೆ ಅವ್ರುನು ರಗತ ನೋಡಿದ್ರೆ ಹೆದರತನೆ. ಈಗಾಗ್ಲೆ ಒಂದು ಸತಿ ಮಕಕ್ಕೆ ಮಸಿ ಬಳಿಸಿಗಂಡಿದ. ಮುಂದಲೊರ್ಸ ಅವ್ರುನೇನಾರ ಉಡುಪಿ ಮಠದತ್ರಕ್ಕೆ ಮುತಾಲಿಕ್ ಸೈನ್ಯ ತಂದ್ರೆ, ಕೇವಲ ಹತ್ತು ಜನ ಸಾಬ್ರು ಸಾಕು ಅವ್ರುನ್ನೆದರಸಕ್ಕೆ. ಆ ಸಾಬರ ಕೈಲಿ ಕಸಾಯಿ ಖಾನೆ ಮಚ್ಚದೆ. ಮುತಾಲಿಕ್ಕನಿಗೆ ತ್ವಡಿಯದು ಬ್ಯಾಡ, ಒಂದಕೊಂದು ಮಸ್ವರ ಸಾಕು. ಆ ಸೌಂಡಿಗೆ ಬೇದಿ ಮಾಡಿಕಂಡು ಇಡೀ ಉಡುಪಿ ತ್ವಳಿಯಂಗೆ ಮಾಡ್ತನೆ. ಅಂತ ಧೀರ ಅವ್ರುನು" ಎಂದು ವಾಟಿಸ್ಸೆ ಹೇಳುವಾಗ ಜುಮ್ಮಿ ಬಿದ್ದು ಬಿದ್ದು ನಕ್ಕಳು. ■

ಪೇಜಾವರ ಶ್ರೀಗಳ ಇಫ್ತಾರ್ ಕೂಟ
ಹೇಳಲೇಬೇಕಾದ ಅಪ್ರಿಯ ಸತ್ಯಗಳು



ಈ ವರ್ಷ ರಮ್ಜಾನ್ ಮಾಸದ ಕೊನೆಯ ದಿನದ ಉಪವಾಸವನ್ನು ಮುಸ್ಲಿಮರಲ್ಲಿ ಕೆಲವರು ಪೇಜಾವರ ಶ್ರೀಗಳು ಉಡುಪಿ ಕೃಷ್ಣಮಠದ ಆವರಣದಲ್ಲಿ ಏರ್ಪಡಿಸಿದ್ದ ಇಫ್ತಾರ್ ಕೂಟದಲ್ಲಿ ಮುಕ್ತಾಯಗೊಳಿಸಿದರು. ಜೂನ್ 24ರ ಶನಿವಾರ ಸಂಜೆ ನಡೆದ ಈ ಸಮಾರಂಭದ ಬಗ್ಗೆ ಈಗ ಪರ-ವಿರೋಧ ಚರ್ಚೆ ನಡೆಯುತ್ತಿದೆ. ಕೆಲವು ವರ್ಷಗಳ ಹಿಂದೆ ಶ್ರೀಗಳು ದಲಿತರ ಕೇರಿಯಲ್ಲಿ ನಡೆಸಿದ ಪಾದಯಾತ್ರೆ ಕೂಡ ಇಂತಹದ್ದೇ ವಿವಾದಕ್ಕೆ ಕಾರಣವಾಗಿತ್ತು. ಹಿಂದೂ ಧರ್ಮದ ಜಾತಿ ತಾರತಮ್ಯವನ್ನು ಉಗ್ರವಾಗಿ ವಿರೋಧಿಸುತ್ತಿದ್ದ ದಲಿತರು ಹಾಗೂ ಪ್ರಗತಿಶೀಲರು ಪೇಜಾವರ ಶ್ರೀಗಳ ಈ ನಡೆಯ ಹಿಂದಿನ ಉದ್ದೇಶವನ್ನು ಪ್ರಶ್ನಿಸಿದ್ದರು. ಅದೇ ವೇಳೆಗೆ ಪೇಜಾವರ ಶ್ರೀಗಳ ಈ ಪಾದಯಾತ್ರೆ ಹಲವು ಮಡಿವಂತ ಬ್ರಾಹ್ಮಣರಿಗೆ ಕಸಿವಿಸಿ ಉಂಟುಮಾಡಿದ್ದೂ ನಿಜ. ಶ್ರೀಗಳು ಈಗ ಕೃಷ್ಣಮಠದ ಆವರಣದಲ್ಲಿ ಇಫ್ತಾರ್ ಕೂಟ ಏರ್ಪಡಿಸಿದ್ದು ಹಾಗೂ ಅದರಲ್ಲಿ ಭಾಗವಹಿಸಿದ್ದ ಮುಸ್ಲಿಮರು ಸ್ಥಳದಲ್ಲಿ ನಮಾಜ್ ಮಾಡಿದ್ದು ಶ್ರೀಗಳ ಅಭಿಮಾನಿಗಳಲ್ಲಿ ಕೆಲವರಿಗೆ ಅಸಮಾಧಾನ ಉಂಟುಮಾಡಿದೆ. ಪ್ರಮೋದ್ ಮುತಾಲಿಕ್ ಎಂಬ ಬಜರಂಗ ದಳದ ಮಾಜಿ ಹಾಗು ಹಾಲಿ ಶ್ರೀರಾಮಸೇನೆಯ ರಾಜ್ಯ ಸಂಚಾಲಕ ಪೇಜಾವರ ಶ್ರೀಗಳ ಇಫ್ತಾರ್ ಕೂಟದ ವಿರುದ್ಧ ಸಾರ್ವಜನಿಕ ಪ್ರತಿಭಟನೆ ನಡೆಸುವುದಾಗಿ ಘೋಷಿಸಿದ್ದಾರೆ. ಪ್ರಮೋದ್ ಮುತಾಲಿಕ್‌ರಂತಹವರ ಪ್ರತಿಭಟನೆಯೇ ಪೇಜಾವರ ಶ್ರೀಗಳ ಈ ಕಾರ್ಯಕ್ರಮವನ್ನು ಸಮರ್ಥಿಸುತ್ತದೆ ಎಂದು ನಾವು ಭಾವಿಸಕೂಡದು. ಉಡುಪಿಯ ಕೃಷ್ಣಮಠದ ಆವರಣದಲ್ಲಿ ಮುಸ್ಲಿಮರ ಧಾರ್ಮಿಕ ಆಚರಣೆಯೊಂದನ್ನು ವಿಧ್ಯುಕ್ತವಾಗಿ ನಡೆಸಲು ಅವಕಾಶ ಕಲ್ಪಿಸಿದ ಪೇಜಾವರ ಶ್ರೀಗಳ ಘೋಷಿತ ಉದ್ದೇಶ ಏನೇ ಇರಲಿ, ಅವರ ನಿಲುವುಗಳ ಬಗೆಗಿನ ಕೆಲವು ನಿಷ್ಠುರ ಸತ್ಯಗಳನ್ನು ನಾವು ಎದುರಿಸಲೇಬೇಕು.

ಪೇಜಾವರ ಶ್ರೀಗಳು ಎಂಟು ನೂರು ವರ್ಷಗಳ ಪರಂಪರೆ ಇರುವ ಮಾಧ್ವಪೀಠವೊಂದರ ಯತಿ. ಆದರೆ ದೇಶದ ಪ್ರಚಲಿತ ರಾಜಕೀಯದಲ್ಲಿ ಅವರಷ್ಟು ಗಾಢವಾಗಿ ತಮ್ಮನ್ನು ತೊಡಗಿಸಿಕೊಂಡ ಯತಿ ಮಾಧ್ವ ಪರಂಪರೆಯಲ್ಲಿ ಹಿಂದೆ ಇರಲಿಲ್ಲ; ಈಗಲೂ ಇಲ್ಲ. ಒಂದು ಪತ್ರಿಕಾ ಸಂದರ್ಶನದಲ್ಲಿ ಪೇಜಾವರ ಶ್ರೀಗಳು ತಮ್ಮ ಮೇಲೆ ಆರ್‌ಎಸ್‌ಎಸ್ ನೇತಾರ ಗೋಲ್ವಾಲ್ಕರ್, ಗಾಂಧೀಜಿ, ಜಯಪ್ರಕಾಶ್ ನಾರಾಯಣ್, ಲೋಹಿಯಾ ಮುಂತಾದವರ ಪ್ರಭಾವವಿದೆ ಎಂದು ಹೇಳಿದ್ದಾರೆ. ಶ್ರೀಗಳು ತೆರೆದ ಮನಸ್ಸಿನವರಾಗಿದ್ದು ಸಮಕಾಲೀನ ವಿದ್ಯಮಾನಗಳಿಗೆ ಸದಾ ಸ್ಪಂದಿಸುವವರು. ಆದರೆ ರಾಜಕೀಯದಲ್ಲಿ ಮಾತ್ರ ಅವರ ಪ್ರಥಮ ನಿಷ್ಠೆ ಆರ್‌ಎಸ್‌ಎಸ್ ಪ್ರಣೀತ ಹಿಂದೂ ರಾಷ್ಟ್ರಕ್ಕೆ. ಆರ್‌ಎಸ್‌ಎಸ್‌ನ ಒಂದು ಪ್ರಮುಖ ಅಂಗಸಂಸ್ಥೆಯಾಗಿರುವ ವಿಶ್ವ ಹಿಂದೂ ಪರಿಷತ್‌ನಲ್ಲಿ ಪೇಜಾವರ ಶ್ರೀಗಳು ಹಲವು ವರ್ಷ ಉಪಾಧ್ಯಕ್ಷರಾಗಿದ್ದರು. ಈಗಲೂ ಅವರು ಆ ಸಂಘಟನೆಯ ಅಗ್ರಗಣ್ಯ ನಾಯಕರಲ್ಲಿ ಒಬ್ಬರು. 1985ರಲ್ಲಿ ಪೇಜಾವರ ಶ್ರೀಗಳ ನೇತೃತ್ವದಲ್ಲಿ ಉಡುಪಿಯಲ್ಲಿ ನಡೆದ ವಿಶ್ವ ಹಿಂದೂ ಪರಿಷತ್‌ನ ಧರ್ಮ ಸಂಸತ್‌ನಲ್ಲಿ ಉತ್ತರ ಪ್ರದೇಶದ ಅಯೋಧ್ಯೆಯ ಬಾಬರಿ ಮಸೀದಿಯ ಬೀಗವನ್ನು ತೆಗೆಸುವ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಆ ನಂತರ ನಡೆದದ್ದು ಇತಿಹಾಸ.


1992 ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಪೇಜಾವರ ಶ್ರೀಗಳು ಹಾಗೂ ಎಲ್.ಕೆ.ಆಡ್ವಾನಿ, ಉಮಾ ಭಾರತಿ ಮುಂತಾದ ಸಂಘಪರಿವಾರದ ಮುಖಂಡರ ಸಮ್ಮುಖದಲ್ಲೇ ಧ್ವಂಸಗೊಳಿಸಲಾಯಿತು. ಆ ಕಾರ್ಯಕ್ರಮಕ್ಕೆಂದೇ ದೇಶದ ಮೂಲೆಮೂಲೆಗಳಿಂದ ಸುಮಾರು ಎರಡು ಲಕ್ಷ 'ಕರಸೇವಕರನ್ನು' (ಬಿಬಿಸಿ ವರದಿ ಪ್ರಕಾರ) ಕರೆತರಲಾಗಿತ್ತು. ಬಾಬರಿ ಮಸೀದಿ ಧ್ವಂಸಕ್ಕೆ ಪೂರ್ವಭಾವಿಯಾಗಿ ನಡೆದ ಎಲ್.ಕೆ.ಅಡ್ವಾನಿಯವರ ರಥಯಾತ್ರೆ ಉಡುಪಿಯನ್ನೂ ಒಳಗೊಂಡು ಕರ್ನಾಟಕದ ಹಲವು ಪ್ರಮುಖ ನಗರಗಳನ್ನು ಹಾದುಹೋಗಿತ್ತು. ಬಾಬರಿ ಮಸೀದಿ ಧ್ವಂಸವನ್ನು 'ಸ್ಥಳದಲ್ಲಿದ್ದ ತಾನು ತಡೆಯಲು ಯತ್ನಿಸಿದೆ' ಎಂದು ಪೇಜಾವರ ಶ್ರೀಗಳು ಹಲವು ಬಾರಿ ಹೇಳಿದ್ದಾರೆ. ಹಾಗೆ ಹೇಳಿದ ಮಾತ್ರಕ್ಕೆ ಆ ಘಟನೆಯ ಉತ್ತರದಾಯಿತ್ವದಿಂದ ಶ್ರೀಗಳು ತಪ್ಪಿಸಿಕೊಳ್ಳಲಾರರು. ಬಾಬರಿ ಮಸೀದಿ ಧ್ವಂಸ, ಹಠಾತ್ತನೆ ಸಂಭವಿಸಿದ ದುರ್ಘಟನೆಯಲ್ಲ, ಅದಕ್ಕೋಸ್ಕರ ಹಲವು ವರ್ಷಗಳ ಸುದೀರ್ಘ ಹಾಗೂ ಸಂಘಟಿತ ಪ್ರಯತ್ನ ನಡೆದಿತ್ತು. ಘಟನೆ ನಡೆದ ದಿನ, ಅದಕ್ಕೆಂದೇ ಲಕ್ಷಾಂತರ ಜನರನ್ನು ಅಣಿನೆರೆಸಲಾಗಿತ್ತು. ಆದಾಗ್ಯೂ ತಾನು ಅದನ್ನು ತಡೆಯಲು ಯತ್ನಿಸಿದೆ ಎಂಬ ಪೇಜಾವರ ಶ್ರೀಗಳ ಮಾತು ವಿರೋಧಾಭಾಸವಲ್ಲವೆ? ರಥಯಾತ್ರೆಯ ಉದ್ದಕ್ಕೂ ನಡೆದ ಹಿಂಸೆ, ಬಾಬರಿ ಮಸೀದಿ ಧ್ವಂಸ, ಅದೇ ದಿನ ಸಂಜೆ ಮುಂಬಯಿಯಲ್ಲಿ ಶುರುವಾದ ಬಿ.ಜೆ.ಪಿ/ಶಿವಸೇನೆ ಪ್ರಾಯೋಜಿತ ಹಿಂಸಾಚಾರದ ನಂತರವಾದರೂ ಪೇಜಾವರ ಶ್ರೀಗಳಿಗೆ ರಾಮಜನ್ಮಭೂಮಿ ಚಳವಳಿಯಲ್ಲಿ ತಾನು ಭಾಗವಹಿಸಿದ್ದರ ಬಗ್ಗೆ ವಿಷಾದವಾಯಿತೆ? ಹಾಗೆ ಭಾವಿಸುವುದಕ್ಕೆ ಯಾವ ಕಾರಣವೂ ಇಲ್ಲ. ಯಾಕೆಂದರೆ ಆನಂತರವೂ ಅವರು ಸಂಘಪರಿವಾರ ಅದರಲ್ಲೂ ವಿಶೇಷವಾಗಿ ವಿಶ್ವ ಹಿಂದೂ ಪರಿಷತ್ತಿಗೆ ತಮ್ಮ ನಿಷ್ಠೆಯನ್ನು ಮುಂದುವರಿಸಿದ್ದರು. 2002ರ ಗುಜರಾತ್ ನರಮೇಧ ಕೂಡ ಪೇಜಾವರ ಶ್ರೀಗಳ ನಿಷ್ಠೆಯನ್ನು ಅಲ್ಲಾಡಿಸಲಿಲ್ಲ. 2008ರಲ್ಲಿ ಒರಿಸ್ಸದ ಕಂಧಮಾಲ್‌ನಲ್ಲಿ ಕ್ರೈಸ್ತ ಆದಿವಾಸಿಗಳ ಮೇಲೆ ನಡೆದ ಸಾಮೂಹಿಕ ಹಿಂಸಾಚಾರ ಮತ್ತು 2013ರಲ್ಲಿ ಉತ್ತರ ಪ್ರದೇಶದ ಮುಜಾಫರ್‌ನಗರದಲ್ಲಿ ಬಿಜೆಪಿ ನಾಯಕರೇ ಮುಂದೆ ನಿಂತು ನಡೆಸಿದ ಮುಸ್ಲಿಮರ ಕೊಲೆ, ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಸಾವಿರಾರು ಜನ ಮುಸ್ಲಿಮರನ್ನು ನಿರಾಶ್ರಿತರನ್ನಾಗಿಸಿದ್ದು - ಇವು ಸಹ ಶ್ರೀಗಳನ್ನು ವಿಚಲಿತಗೊಳಿಸಲಿಲ್ಲ. ಆ ಜೀವ ಹಿಂಸೆಯಿಂದ ಅವರಿಗೆ ದುಃಖವಾಗಿದ್ದರೂ ಅದನ್ನು ನಡೆಸಿದ ಸಂಘಪರಿವಾರದ ಜೊತೆ ತನ್ನ ಸಂಬಂಧವನ್ನು ಕಡಿದುಕೊಳ್ಳುವಷ್ಟು ಅವರು ವಿಚಲಿತರಾಗಲಿಲ್ಲ.

ಬಾಬರಿ ಮಸೀದಿ ಧ್ವಂಸ ಪ್ರಕರಣ ಕುರಿತು ಬಿಜೆಪಿ ನಾಯಕರುಗಳಾದ ಎಲ್.ಕೆ.ಅಡ್ವಾನಿ, ಮುರಳಿ ಮನೋಹರ್ ಜೋಷಿ ಮತ್ತು ಉಮಾ ಭಾರತಿಯವರ ಮೇಲೆ ದಾಖಲಾಗಿದ್ದ ಮೊಕದ್ದಮೆಯಲ್ಲಿ ಮತ್ತೆ ವಿಚಾರಣೆ ನಡೆಸಲು ಸುಪ್ರೀಮ್ ಕೋರ್ಟ್ ಆದೇಶಿಸಿದಾಗ ಪೇಜಾವರ ಶ್ರೀಗಳು 'ಅದು ತರವಲ್ಲ' ಎಂದು ಹೇಳಿದರು. ಶ್ರೀಗಳಿಗೆ ಅದು (1947ರ) ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಸರಕಾರ ಹೂಡಿದ ಮೊಕದ್ದಮೆಯ ಹಾಗೆ ಕಂಡಿತು. ಪೇಜಾವರ ಶ್ರೀಗಳು ಮಸೀದಿ ಧ್ವಂಸ ಕಾರ್ಯಾಚರಣೆಯನ್ನು ಸ್ವಾತಂತ್ರ್ಯ ಹೋರಾಟಕ್ಕೆ ಹೋಲಿಸಿದ್ದು ಮತ್ತು ರಾಜಸ್ತಾನದ ಹಾಲಿನ ಡೈರಿ ಮಾಲೀಕ ಪೆಹ್ಲು ಖಾನ್ ತನ್ನ ವೃತ್ತಿಗಾಗಿ ಜಾನುವಾರು ಸಾಗಿಸುತ್ತಿದ್ದಾಗ ಹೆದ್ದಾರಿಯಲ್ಲಿ ಅವರನ್ನು ಹೊಡೆದು ಕೊಂದ 'ಗೋ ರಕ್ಷಕರನ್ನು' ಹಿಂದೂತ್ವದ ಇನ್ನೋರ್ವ ಪ್ರತಿಪಾದಕಿ ಸಾಧ್ವಿ ಕಮಲ್ ಸ್ವಾತಂತ್ರ ಹೋರಾಟಗಾರ ಭಗತ್ ಸಿಂಗ್ ಜೊತೆ ಹೋಲಿಸಿದ್ದು -ಇವೆರಡರ ನಡುವೆ ವ್ಯತ್ಯಾಸವಿದೆಯೆ? ಪೇಜಾವರ ಶ್ರೀಗಳು ಹಾಗೂ ಸದ್ರಿ ಸಾಧ್ವಿ - ಇಬ್ಬರೂ ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಬದ್ಧರಾಗಿರುವವರು; ಮತ್ತು ಆ ಗುರಿ ಸಾಧನೆಗಾಗಿ ಯಾವ ಪ್ರಮಾಣದ ಜೀವಹಿಂಸೆಯನ್ನಾದರೂ 'ಅನಿವಾರ್ಯ' ಎಂದು ಭಾವಿಸುವವರು. ರಾಮಜನ್ಮಭೂಮಿ ಚಳವಳಿಯ ಉದ್ದ[ಕ್ಕೂ] ನಡೆದ ಹಿಂಸಾಚಾರ, ಪೇಜಾವರ ಶ್ರೀ[ಗಳ] ಸಂಕಲ್ಪವಿರಲಾರದು. ಆದರೆ ಅವರು ಈಗ[ಲೂ] ಪ್ರೀತ್ಯಪೂರ್ವಕವಾಗಿ ಬೆಂಬಲಿಸುವ ಸಂಘಪರಿವಾರ ಮುಂ[ದೆ] ನಿಂತು ಆ ಹಿಂಸೆ ನಡೆಸಿದ್ದಲ್ಲವೆ? ಹಾಗೆ ನೋಡಿ[ದರೆ] ಗುಜರಾತ್ 2002ರ ನರಮೇಧ ಕೂಡ ರಾಮ ಜನ್ಮಭೂ[ಮಿ] ಚಳವಳಿಯದ್ದೇ ಫಲಶ್ರುತಿ. ಗುಜರಾತ್ 2002ರ ಉಪ್ಪು... ನಡೆಸಿದವರಲ್ಲಿ ಹೆಚ್ಚಿನವರು ವಿಶ್ವ ಹಿಂದೂ ಪರಿಷ[ತ್] ಪದಾಧಿಕಾರಿಗಳು. ಆ ಕುರಿತು ಪೇಜಾವರ ಶ್ರೀ[ಗಳ] ಪ್ರತಿಕ್ರಿಯೆ ಏನು? ಅದು ಏನಾದರೂ ಇರಲಿ, ಈಗ[ಲೂ] ಅವರು ಮುಸ್ಲಿಮರು, ಕ್ರೈಸ್ತರು ಮತ್ತಿತರ 'ಅನ್ಯಮತೀಯ[ರ]' ಕುರಿತ ಸಂಘಪರಿವಾರ ಹೇಳುವ ಲವ್ ಜಿಹಾ[ದ್] ಭಯೋತ್ಪಾದನೆ, ಮತಾಂತರ ಇತ್ಯಾದಿ ಸುಳ್ಳುಗಳ[ನ್ನು] ಒಂದೋ ಬೆಂಬಲಿಸುತ್ತಾರೆ; ಅಥವಾ ಆ ಬಗ್ಗೆ ಮೌನವಾ[ಗಿ] ತಮ್ಮ ಸಮ್ಮತಿ ಸೂಚಿಸುತ್ತಾರೆ. ಉದಾಹರಣೆಗೆ ಸಂದ[ರ್ಭ] ಸಿಕ್ಕಿದಾಗಲೆಲ್ಲ ಪೇಜಾವರ ಶ್ರೀಗಳು 'ಮುಸ್ಲಿಮ[ರ] ತುಷ್ಟೀಕರಣ'ದ ಬಗ್ಗೆ ಹೇಳುತ್ತಾರೆ. ಆದರೆ, ಭಾರತದ[ಲ್ಲಿ] ದಲಿತರನ್ನು ಬಿಟ್ಟರೆ ಮುಸ್ಲಿಮರಷ್ಟು ಅವಕಾಶವಂಚಿತ[ರಾದ] ಇನ್ನೊಂದು ಸಮುದಾಯವಿಲ್ಲ. ಸೈನ್ಯ, ಪೊಲೀಸು ಇಲಾ[ಖೆ] ಸರಕಾರೀ ಕಚೇರಿಗಳು ಶಿಕ್ಷಣ ಸಂಸ್ಥೆಗಳು, ಬ್ಯಾಂಕು ಮ... ವಾಣಿಜ್ಯೋದ್ಯಮಗಳು - ಎಲ್ಲಿಯೂ ಮುಸ್ಲಿಮರಿಗೇ ಅ... ಸಂಖ್ಯೆಗೆ ಅನುಗುಣವಾದ ಪ್ರಾತಿನಿಧ್ಯವೂ ... ಅವಕಾಶಗಳೂ ಇಲ್ಲ. ದೇಶದ ಸಂಸತ್ತು ಮತ್ತು ರಾ[ಜ್ಯ] ವಿಧಾನಸಭೆಗಳಲ್ಲೂ ಅವರ ಪ್ರಾತಿನಿಧ್ಯ ಹಿಂದೆಂದ[ೂ] ಕಾಣದಷ್ಟು ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಮುಸ್ಲಿ[ಮ್] ಸಮುದಾಯದ ಸ್ಥಿತಿಗತಿಗಳ ಕುರಿತ ಸಾಚಾರ್ ಸಮಿತಿ[ಯ] ವರದಿ ಪ್ರಕಟವಾದ ನಂತರವಂತೂ, ಮುಸ್ಲಿಮರನ್ನು ನ... ವ್ಯವಸ್ಥೆಯೇ ಎರಡನೆಯ ದರ್ಜೆಯ ಪ್ರಜೆಗಳ[ನ್ನಾಗಿ] ಪರಿಗಣಿಸುತ್ತಿರುವುದರ ಬಗ್ಗೆ ಯಾವ ಸಂದೇಹವೂ ಉಳಿದಿ[ಲ್ಲ]. ಆದಾಗ್ಯೂ ಮುಸ್ಲಿಮ್ ತುಷ್ಟೀಕರಣದ ಬಗ್ಗೆ ಪದೇ ಪ[ದೇ] ಹೇಳುವ ಪೇಜಾವರ ಶ್ರೀಗಳು ಇನ್ನಾದರೂ ತಮ್ಮ ಮಾ... ನಿದರ್ಶನಗಳನ್ನು ನೀಡಬೇಕು.

ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಮತ್ತು ಉಡು[ಪಿ] ಜಿಲ್ಲೆಗಳು ಈಗ ಹಿಂದೂತ್ವದ ಪ್ರಯೋಗಶಾಲೆಗ[ಳು] ಆಗಿಬಿಟ್ಟಿವೆ. ಗುಜರಾತ್, ಮಹಾರಾಷ್ಟ್ರ ಮತ್ತು ಉ[ತ್ತರ] ಭಾರತದ ವಿವಿಧ ರಾಜ್ಯಗಳಲ್ಲಿ ಹಿಂದೂತ್ವದ ಅನುಯಾ[ಯಿ]ಗಳು ಮುಸ್ಲಿಮರು ಹಾಗೂ ಕ್ರೈಸ್ತರ ಮೇಲೆ ನಡೆ[ಸಿದ] ಹಿಂಸಾಕೃತ್ಯಗಳನ್ನೆಲ್ಲ ಈ ಜಿಲ್ಲೆಗಳಲ್ಲೂ ಆ ಸಮುದಾಯ[ಗಳ] ಮೇಲೆ ಪ್ರಯೋಗಿಸಲಾಗಿದೆ. ಹಿಂಸೆಯ ಪ್ರಮಾಣದ[ಲ್ಲಿ] ವ್ಯತ್ಯಾಸವಿರಬಹುದು. ಆದರೆ ಹಿಂಸೆಯ ಸ್ವರೂಪ ಮ[ತ್ತು] ಅದರ ಹಿಂದಿರುವ ಸಂಘಟನೆಗಳ ಮಟ್ಟಿಗೆ ವ್ಯತ್ಯಾಸವಿ[ಲ್ಲ]. ಕರಾವಳಿಯ ಎರಡು ಜಿಲ್ಲೆಗಳಿಗೆ ಈ ಬಗೆಯ ಕೋಮ[ು] ಹಿಂಸೆ ರಾಮ ಜನ್ಮಭೂಮಿ ಚಳವಳಿಯ ಬಳುವಳಿ[ಯೇ] ಹೊರತು, ಇಲ್ಲಿನ ಕಡಲು, ನದಿ, ಬಿಸಿಲು, ಮಳೆ, ತೆಂ[ಗು] ಕಂಗುಗಳ ಹಾಗೆ ಅದು ಪ್ರಕೃತಿ ಸಹಜವೂ ಅಲ್ಲ; ಪ್ರ... ನಿಯಾಮಕವೂ ಅಲ್ಲ. ಈಗಲೂ ರಾಮ ಜನ್ಮಭೂ[ಮಿ] ಚಳವಳಿಯ ಒಬ್ಬ ನೇತಾರರಾಗಿ ಮುಂದುವರಿದಿರುವ ಪೇಜಾ[ವರ] ಶ್ರೀಗಳು, ಆ ಚಳವಳಿ ಹುಟ್ಟು ಹಾಕಿದ ಹಿಂಸೆಗೂ ತಮ[ಗೂ] ಸಂಬಂಧವೇ ಇಲ್ಲವೆಂಬಂತೆ ಉಡುಪಿಯ ಮುಸ್ಲಿಮರಿಗೆ ಇಫ್ತಾ[ರ್] ಕೂಟ ಏರ್ಪಡಿಸುವುದರಲ್ಲಿ ಏನಾದರೂ ಅರ್ಥವಿದೆಯೆ?

■ ಜಿ.ರಾಜಶೇಖ[ರ]

ೀಷೆಯ ತತ್ವ ಮತ್ತು ಮನುವಿನ ತತ್ವ: ಡಾ. ಅಂಬೇಡ್ಕರ್ ಕಂಡುಕೊಂಡಂತೆ



ತಮ್ಮ 'ಹಿಂದೂ ಧರ್ಮದ ತತ್ವ' ಎಂಬ ಯಲ್ಲಿ (ಲಡಾಯಿ ಪ್ರಕಾಶನ, 2017) ಹಿಂದೂ ದ ತತ್ವದ ಗುಣಾವಗುಣಗಳನ್ನು ವಿಶ್ಲೇಷಣೆಗೆ ವ ಡಾ. ಬಿ.ಆರ್. ಅಂಬೇಡ್ಕರ್, ಮನುವಿನ ದೂ ಧರ್ಮದ ತತ್ವಕ್ಕೆ ಸಮಾನವಾದುದು ವುದಾದರೂ ಇದ್ದರೆ ಅದು ನೀಷೆಯ ತತ್ವ ು ವಾದಿಸಿದ್ದಾರೆ (ಅಧ್ಯಾಯ IV: 'ಅಸಮಾನತೆಗೆ ್ನೊಂದು ಹೆಸರೇ ಹಿಂದೂ ಧರ್ಮ'). ಈ ಕದಲ್ಲಿ ಅವರು ಹಿಂದೂ ಧರ್ಮದ ತತ್ವವನ್ನು ು ಆಳವಾದ, ತರ್ಕಬದ್ಧ ವಿಚಾರಣೆಗೆ ಪಡಿಸಿದ್ದಾರೆ. ತಮ್ಮ ಅಧ್ಯಯನಕ್ಕೆ ಅವರು ನುಸ್ಮೃತಿ'ಯನ್ನು ಬಳಸಿಕೊಂಡಿದ್ದಾರೆ. ಇದಕ್ಕೆ ಣಗಳನ್ನು ನೀಡುತ್ತಾ "ಹಿಂದೂ ಧರ್ಮದ ದೈವಿಕ ಿತದ ಯೋಜನೆಯನ್ನು ಲಿಖಿತ ಧಾನವೊಂದರಲ್ಲಿ ಪ್ರತಿಷ್ಠಾಪಿಸಲಾಗಿದ್ದು ಅದರ ರಗಳನ್ನು 'ಮನುಸ್ಮೃತಿ' ಎಂಬ ಪವಿತ್ರ ಗ್ರಂಥದಲ್ಲಿ ರ್ತಿ ಬಿಚ್ಚಿಡಲಾಗಿದೆ. ದೈವದತ್ತ ಮಾವಳಿಯಾಗಿರುವ 'ಮನುಸ್ಮೃತಿ'ಯಲ್ಲಿ ದೂಗಳ ಧಾರ್ಮಿಕ ಬದುಕು, ಸಾಮಾಜಿಕ ಕು ಮತ್ತು ವಿವಿಧ ಧಾರ್ಮಿಕ ಕ್ರಿಯಾವಿಧಿಗಳನ್ನು ಂತ್ರಿಸುವ ನಿಯಮಗಳ ಬಗ್ಗೆ ಸವಿಸ್ತಾರವಾಗಿ ಿಸಲಾಗಿರುವುದರಿಂದ ಅದನ್ನು ಹಿಂದೂಗಳ ಲ್ ಎಂದೂ ಅದು ಹಿಂದೂ ಧರ್ಮದ ನ್ನು ಒಳಗೊಂಡಿದೆ ಎಂದೂ ಪರಿಗಣಿಸುವುದು ವಶ್ಯ" ಎಂದು ತಿಳಿಸುತ್ತಾರೆ.

ಷೆಯ ತತ್ವ

ಡಾ. ಅಂಬೇಡ್ಕರ್ ನೀಷೆಯ ತತ್ವವನ್ನು ಪಿಸುತ್ತಾ "ನೀಷೆಯ ತತ್ವ ಜನರಲ್ಲಿ ಭಾರಿ ಜಿಗುಪ್ಸೆ ಡಿಸಿತ್ತು. ಅದೆಂದೂ ಜನರಲ್ಲಿ ಬೇರೂರಲಿಲ್ಲ. ಯೇ ಹೇಳುವಂತೆ ಕೆಲವೊಮ್ಮೆ ಅವನು ನವರ್ಗ ಮತ್ತು ಜಮೀನುದಾರವರ್ಗ ಪ್ರಭುತ್ವಗಳ ಜ್ಞಾನಿಯೆಂದು ಪೂಜಿಸಲ್ಪಟ್ಟರೆ ಕೆಲವೊಮ್ಮೆ ಗೇಲಿಗೆ ಗಿದ್ದ; ಕೆಲವೊಮ್ಮೆ ಅನುಕಂಪಕ್ಕೆ ಪಾತ್ರನಾದರೆ ವೊಮ್ಮೆ ಅಮಾನವೀಯ ವ್ಯಕ್ತಿಯೆಂದು ಬಹಿಷ್ಕಾರಕ್ಕೆ ಾಗಿದ್ದ. ನೀಷೆಯ ತತ್ವ ಅಧಿಕಾರದ ಹಂಬಲ, ಿ, ಆಧ್ಯಾತ್ಮಿಕ ಮೌಲ್ಯಗಳ ನಿರಾಕರಣೆ, ಮಾನವತೆ ಮತ್ತು ಶ್ರೀಸಾಮಾನ್ಯನ ತ್ಯಾಗ, ಜೀತ, ತ್ಯಹಾನಿಗಳೊಂದಿಗೆ ಗುರುತಿಸಿಕೊಂಡಿತ್ತು. ಇಂತಹ ಸ ಅಂಶಗಳನ್ನೊಳಗೊಂಡ ನೀಷೆಯ ತತ್ವ ಅವನ ಕಾಲೀನರದೇ ಮನದಾಳದಲ್ಲಿ ಸ್ವಲ್ಪ ಓಕರಿಕೆ ಮತ್ತು ಪ್ಸೆಯ ಭಾವನೆಗಳನ್ನು ಹುಟ್ಟುಹಾಕಿತ್ತು. ಅವನನ್ನು ರ್ಣವಾಗಿ ನಿರ್ಲಕ್ಷಿಸಲಾಗಿತ್ತು ಇಲ್ಲವೆ ದೂರ ಾಗಿತ್ತು. ಆಗ ಅವನು ತನ್ನನ್ನು 'ಮರಣೋತ್ತರ ಗಳೊಂದಿಗೆ ಗುರುತಿಸಿಕೊಳ್ಳುವ ಮೂಲಕ ಧಾನಪಟ್ಟುಕೊಂಡಿದ್ದ. ಶತಮಾನಗಳ ನಂತರ ಜನ ್ನ ಮೆಚ್ಚಲಿರುವರೆಂಬ ನಿರೀಕ್ಷೆ ಇಟ್ಟುಕೊಂಡಿದ್ದ. ಮೂ ಅವನ ವಿಧಿಯಲ್ಲಿ ನಿರಾಸೆಯೇ ಬರೆದಿತ್ತು. ಂತರದಲ್ಲಿ ಜನ ಅವನ ತತ್ವವನ್ನು ಮೆಚ್ಚುವ ು ಅವನ ಸಮಕಾಲೀನರಿಗಿಂತಲೂ ಹೆಚ್ಚು ಕೆ ಮತ್ತು ಜಿಗುಪ್ಸೆಯ ಭಾವನೆಗಳನ್ನು ದಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ು ತತ್ವ ನಾಜಿ ಸಿದ್ಧಾಂತವನ್ನು ಟ್ಟುಹಾಕಬಲ್ಲುದೆಂಬ ತಿಳಿವಳಿಕೆ. ಈ ರೀತಿಯಾದ ್ಗೆ ನೀಷೆಯ ಸ್ನೇಹಿತರಿಂದ ತೀವ್ರ ಪ್ರತಿಭಟನೆ ಾಗಿದೆ (ವಿವರಗಳಿಗೆ ಮತ್ತಿತರ ವಾಸ್ತವಾಂಶಗಳಿಗೆ ಎಂ.ಪಿ. ನಿಕೊಲಸ್ ವಿರಚಿತ From tzche down to Hitler, 1938). ಆದರೆ ು ತತ್ವವನ್ನು ಅತಿಮಾನವನ ಸೃಷ್ಟಿಯ ಹಾಗೆ ಪ್ರಭುತ್ವದ ಸೃಷ್ಟಿಗೂ ಸುಲಭದಲ್ಲಿ ಅನ್ವಯಿಸಬಹುದಾಗಿದೆ. ಇದನ್ನು ಅರ್ಥಮಾಡಿಕೊಳ್ಳಲು ಅಷ್ಟೇನೂ ಕಷ್ಟವಿಲ್ಲ. ನಾಜಿಗಳು ಇದನ್ನೇ ಮಾಡಿದರು. ಅದು ಹೇಗೇ ಇರಲಿ, ನಾಜಿಗಳೇ ತಮ್ಮನ್ನು ನೀಷೆಯ ಸಂತಾನ ಎಂದು ಕರೆದುಕೊಳ್ಳುತ್ತಾರೆ ಮಾತ್ರವಲ್ಲ ಅವನನ್ನು ತಮ್ಮ ಆಧ್ಯಾತ್ಮಿಕ ಪಿತನೆಂದೂ ಪರಿಗಣಿಸುತ್ತಾರೆ. ಹಿಟ್ಲರ್ ತನ್ನ ಗುರು ನೀಷೆಯ ಪ್ರತಿಮೆಯ ಪಕ್ಕದಲ್ಲಿ ನಿಂತು ಫೋಟೊ ತೆಗೆಸಿಕೊಳ್ಳುತ್ತಾನೆ; ಗುರುವಿನ ಹಸ್ತಪ್ರತಿಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ವಿಶೇಷ ರಕ್ಷಣೆ ಒದಗಿಸುತ್ತಾನೆ; ನಾಜಿ ಸಿದ್ಧಾಂತದ ವಿಧ್ಯುಕ್ತ ಆಚರಣೆಗಳ ವೇಳೆ ನೀಷೆಯ ಬರಹಗಳ ಆಯ್ದ ಭಾಗಗಳನ್ನು ಜರ್ಮನಿಯ 'ನವ್ಯ ಧರ್ಮ' ಎಂದು ಉಚ್ಚಕಂಠದಲ್ಲಿ ಘೋಷಿಸಲಾಗುತ್ತದೆ. ನಾಜಿಗಳು ನೀಷೆ ತಮ್ಮ ಆಧ್ಯಾತ್ಮಿಕ ಹಿರೀಕ ಎಂದು ಹೇಳಿಕೊಳ್ಳುವಾಗ ನೀಷೆಯ ಹತ್ತಿರದ ಸಂಬಂಧಿಗಳು ಅದನ್ನು ನಿರಾಕರಿಸುವುದಿಲ್ಲ. ನೀಷೆಯ ಸೋದರ ಸಂಬಂಧಿಯಾದ ರಿಚರ್ಡ್ ಆಕ್ಲರ್ ಹಿಟ್ಲರ್‌ನ ಕೃತ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದ. ಹಿಟ್ಲರ್‌ನ ಕೃತ್ಯಗಳಲ್ಲಿ ನೀಷೆಯ ಚಿಂತನೆಗಳನ್ನು ಕಾಣಬಹುದು ಎಂದಿದ್ದ. ನಾಜಿಗಳ ಅಧಿಕಾರಗ್ರಹಣದ ಮೂಲಪುರುಷನಾಗಿ ನೀಷೆ ಅಗ್ರಸ್ಥಾನದಲ್ಲಿ ನಿಲ್ಲುತ್ತಾನೆ ಎಂದು ಹೇಳಿದ್ದ. ಖುದ್ದು ನೀಷೆಯ ಸಹೋದರಿಯೂ ತನ್ನ ಸಾವಿಗೆ ಕೆಲವು ತಿಂಗಳುಗಳ ಮೊದಲು ಹಿಟ್ಲರ್ ಜತೆ ಮಾತನಾಡುತ್ತಾಳೆ. ಅವನು ತನ್ನ ಸಹೋದರನನ್ನು ಔದಾರ್ಯಪೂರ್ವಕವಾಗಿ ಗೌರವಿಸಿದುದಕ್ಕೆ ಧನ್ಯವಾದಗಳನ್ನು ಸಮರ್ಪಿಸುತ್ತಾಳೆ. ಅಷ್ಟೇ ಅಲ್ಲ, ಹಿಟ್ಲರ್ ತನ್ನ ಕಣ್ಣಿಗೆ ಜರತುಷ್ಟ್ರನ ಭವಿಷ್ಯವಾಣಿಯಲ್ಲಿರುವ ಅದೇ 'ಅತಿಮಾನವ'ನ ಮೂರ್ತರೂಪವಾಗಿ ಕಾಣಿಸುತ್ತಾನೆ ಎಂದು ಸಾರುತ್ತಾಳೆ" ಎಂದು ಟೀಕಿಸುತ್ತಾರೆ.


ಮನುವನ್ನು ಅನುಸರಿಸಿದ ನೀಷೆ

"ಇಷ್ಟೊಂದು ಓಕರಿಕೆ ಮತ್ತು ಜಿಗುಪ್ಸೆಗೆ ಕಾರಣವಾದ ಸಿದ್ಧಾಂತವೊಂದನ್ನು ಹುಟ್ಟುಹಾಕಿದ ನೀಷೆಯೂ ಮನುವೂ ಒಂದೇ ಎಂದು ಪ್ರತಿಪಾದಿಸುವುದರಿಂದ ಹಿಂದೂಗಳಿಗೆ ಖಂಡಿತವಾಗಿಯೂ ಕಟ್ಟೆಚ್ಚರ ಆಗಲಿದೆ, ಕೋಪವೂ ಬರಲಿದೆ" ಎಂದು ಹೇಳುವ ಅಂಬೇಡ್ಕರ್ ಪ್ರಕಾರ "ನೀಷೆಯನ್ನು ಮನುವಿನೊಂದಿಗೆ ಗುರುತಿಸಲಾಗಿರುವುದು ಒಂದು ವಾಸ್ತವ. ಅದರ ಕುರಿತು ಯಾವ ಅನುಮಾನಕ್ಕೂ ಆಸ್ಪದವಿಲ್ಲ. ಖುದ್ದು ನೀಷೆಯೇ ಬಹಿರಂಗಪಡಿಸಿರುವಂತೆ ಅವನ ಸಿದ್ಧಾಂತ ಮನುವಿನ ಯೋಜನೆಯನ್ನೇ ಅನುಸರಿಸಿದೆ. ಏಕೆಂದರೆ ತನ್ನ Anti Christ ನಲ್ಲಿ ನೀಷೆ ಹೀಗನ್ನುತ್ತಾನೆ: 'ಅದೇನಿದ್ದರೂ ಸುಳ್ಳುಗಳನ್ನು ಹೇಳುವ ಉದ್ದೇಶವೇನು ಎಂಬ ಪ್ರಶ್ನೆ ಇದೆ. ನಾನು ಕ್ರೈಸ್ತ ಧರ್ಮ ಬಳಸುವ ಮಾರ್ಗೋಪಾಯಗಳನ್ನು ವಿರೋಧಿಸುತ್ತೇನೆ. ಏಕೆಂದರೆ ವಾಸ್ತವವಾಗಿ ಆ ಧರ್ಮದಲ್ಲಿ 'ಪವಿತ್ರ' ಗುರಿಗಳೇ ಇಲ್ಲ. ಅದರಲ್ಲಿ ಬರಿದೆ ಕೆಟ್ಟ ಗುರಿಗಳಿವೆ. ಮನಸ್ಸುಗಳಿಗೆ ನಂಜುಣಿಸುವುದು, ಮಿಥ್ಯಾರೋಪ ಹೊರಿಸುವುದು, ಬದುಕಿನ ನಿರಾಕರಣೆ, ದೇಹದ ಅವಹೇಳನ, ಪಾಪದ ಪರಿಕಲ್ಪನೆಯ ಮೂಲಕ ಮನುಷ್ಯನ ಅವನತಿ ಮತ್ತು ಆತ್ಮಮಾಲಿನ್ಯ ಇವೇ ಮೊದಲಾದ ಗುರಿಗಳಿಂದಾಗಿ ಅದರ ಮಾರ್ಗೋಪಾಯಗಳು ಕೂಡಾ ಕೆಟ್ಟದಾಗಿವೆ. ನನ್ನಲ್ಲಿ ಇದಕ್ಕೆ ತೀರ ವಿರುದ್ಧವಾದ ಭಾವನೆಗಳು ಇವೆ. ನಾನು ಮನುಸ್ಮೃತಿಯನ್ನು ಓದಿರುವೆ. ಅದೊಂದು ಶ್ರೇಷ್ಠ ಕೃತಿ. ಅದರ ಬೌದ್ಧಿಕ ಮಟ್ಟಕ್ಕೆ ಸಾಟಿಯಿಲ್ಲ. ಬೈಬಲ್ ಜೊತೆ ಅದರ ಹೆಸರೆತ್ತುವುದೂ ಅದರ ಆಶಯಗಳಿಗೆ ಅನ್ಯಾಯ ಮಾಡಿದಂತೆ..ಏಕೆಂದು ಕ್ಷಣಮಾತ್ರದಲ್ಲಿ ನಿಮಗೆ ಹೊಳೆಯಲಿದೆ. ಅದರ ಹಿಂದೆ, ಅದರ ಒಳಗೆ ನಿಜವಾದ ತತ್ವ ಇದೆ. ಯಹೂದ್ಯರು ರ್‍ಯಾಬೈ ಪಂಥ ಮತ್ತು ಮೂಢನಂಬಿಕೆಗಳನ್ನು ಸೇರಿಸಿ ತಯಾರಿಸಿದಂಥಾ ಬರೀ ದುರ್ವಾಸನಾಯುಕ್ತ ಭಟ್ಟಿ ಅದಲ್ಲ. ಅತ್ಯಂತ ಸೂಕ್ಷ್ಮ ಅಭಿರುಚಿಯುಳ್ಳ ಮನೋವಿಜ್ಞಾನಿಯೂ ತಿರುತಿರುಗಿ ಯೋಚಿಸುವಂತೆ ಮಾಡುವ ವಸ್ತು ಅದರಲ್ಲಿದೆ. ಮಿಕ್ಕೆಲ್ಲದಕ್ಕಿಂತಲೂ ಹೆಚ್ಚು ಮುಖ್ಯವಾದ ಅಂಶವನ್ನು ತಪ್ಪದೆ ಹೇಳಲೇಬೇಕು. ಅದೇನೆಂದರೆ ಮೂಲಭೂತವಾಗಿ ಅದು ನಮೂನೆವಾರು ಬೈಬಲ್‌ಗಳಿಗಿಂತ ಭಿನ್ನವಾಗಿದೆ; ಅದರ ಮೂಲಕ ಕುಲೀನ ವರ್ಗಗಳು, ತತ್ವಜ್ಞಾನಿಗಳು ಮತ್ತು ಸೈನಿಕರು ಜನರನ್ನು ಕಾಪಿಡುತ್ತಾರೆ, ಮಾರ್ಗದರ್ಶನ ಮಾಡುತ್ತಾರೆ; ಅದು ಉನ್ನತ ಮೌಲ್ಯಗಳಿಂದ ಸಮೃದ್ಧವಾಗಿದೆ; ಅದು ಬದುಕಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಭಾವನೆಯಿಂದಲೂ ಉತ್ಕೃಷ್ಟತೆಯ ಭಾವನೆಯಿಂದಲೂ ಕೂಡಿದೆ; ಅದರಲ್ಲಿ ಬದುಕು ಮತ್ತು ತನ್ನ ಬಗ್ಗೆ ಒಂದು ಪರಮೋತ್ಸಾಹದ ಆರೋಗ್ಯಪೂರ್ಣ ಭಾವನೆ ತುಂಬಿದೆ. ಇಡೀ ಗ್ರಂಥ ಉಲ್ಲಾಸಭರಿತವಾಗಿದೆ. ಕ್ರೈಸ್ತ ಧರ್ಮವು ತನ್ನ ಕೊನೆಯಿಲ್ಲದ ಕೀಳುತನದಿಂದ ದಮನಿಸುವ ಸ್ತ್ರೀ, ವಿವಾಹ, ಸಂತಾನೋತ್ಪತ್ತಿ ವಿಷಯಗಳನ್ನು ಮನುವಿನ ಗ್ರಂಥದಲ್ಲಿ ಪ್ರಾಮಾಣಿಕತೆಯಿಂದ, ಗೌರವಾದರಗಳಿಂದ, ಪ್ರೀತಿ ಮತ್ತು ದೃಢವಿಶ್ವಾಸಗಳಿಂದ ಕಾಣಲಾಗಿದೆ."

ಹಿಂದೂ ಧರ್ಮದ ತತ್ವ

ಹಿಂದೂ ಧರ್ಮದ ತತ್ವವನ್ನು ವಿಮರ್ಶೆಗೊಡ್ಡುವ ಡಾ. ಅಂಬೇಡ್ಕರ್ "ಹಿಂದೂ ಧರ್ಮದಲ್ಲಿ ದೈವಾಡಳಿತಕ್ಕೆಂದಿ ರುವ ಧಾರ್ಮಿಕ ಆದರ್ಶದ ಕೇಂದ್ರಬಿಂದು ವ್ಯಕ್ತಿಯೂ ಅಲ್ಲ, ಸಮಾಜವೂ ಅಲ್ಲ; ಬ್ರಾಹ್ಮಣರು ಎಂಬ ಅತಿಮಾನವ ವರ್ಗ. ಹಿಂದೂ ಧರ್ಮ ಅತಿಮಾನವರ ನೀತಿಸೂತ್ರವಾಗಿದೆ. ಅದು ಅತಿಮಾನವರಿಗೆ ಯಾವುದು ಸರಿಯೋ ಕೇವಲ ಅದನ್ನೇ ನೈತಿಕವಾಗಿ ಸರಿ ಮತ್ತು ಒಳ್ಳೆಯದೆಂದು ಕರೆಯಲಾಗುತ್ತದೆ ಎಂದು ಬೋಧಿಸುತ್ತದೆ... ಮನುವಿನ ಹಿಂದೂ ಧರ್ಮದ ಆಸಕ್ತಿಯೆಲ್ಲವೂ ಒಂದು ವರ್ಗದ (ಬ್ರಾಹ್ಮಣರು) ಮೇಲೆ ಕೇಂದ್ರೀಕೃತವಾಗಿದೆ. ಅದರ ತತ್ವ ಕೇವಲ ಆ ವರ್ಗದ ಹಕ್ಕುಗಳನ್ನು ಬೆಂಬಲಿಸುವುದಕ್ಕೂ ಕಾಪಾಡುವುದಕ್ಕೂ ಸೀಮಿತವಾಗಿದೆ. ಈ ಅತಿಮಾನವ ವರ್ಗದ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೋಸ್ಕರ ಜನಸಾಮಾನ್ಯರ ಹಾಗೂ ಸಮಾಜದ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ, ದಮನಿಸಲಾಗುತ್ತಿದೆ, ಬಲಿಕೊಡ ಲಾಗುತ್ತಿದೆ" ಎಂದು ಹೇಳುತ್ತಾರೆ. ತಮ್ಮ ಹೇಳಿಕೆಗೆ ಸಮರ್ಥನೆಯಾಗಿ ಮನುಸ್ಮೃತಿಯಿಂದ ಕೆಲವೊಂದು ಉಲ್ಲೇಖಗಳನ್ನು ನೀಡುತ್ತಾ "ಮನುವಿನ ಈ ಉಲ್ಲೇಖಗಳು ಹಿಂದೂ ಧರ್ಮದ ತತ್ವದ ಜೀವಾಳ ಮತ್ತು ಒಳತಿರುಳು ಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ" ಎಂದು ಅಭಿಪ್ರಾಯಿಸುತ್ತಾರೆ:

* "ಬ್ರಾಹ್ಮಣನು ಪ್ರಜಾಪತಿಯ (ದೇವರ) ಬಾಯಿಯಿಂದ ಜನಿಸಿರುವುದರಿಂದ, ಚೊಚ್ಚಲ ಮಗು ಆಗಿರುವು ದರಿಂದ, ವೇದಗಳ ಒಡೆಯ ಆಗಿರುವುದರಿಂದ ನ್ಯಾಯ ವಾಗಿ ಅವನು ಇಡೀ ಸೃಷ್ಟಿಯ ಒಡೆಯ." (I. 93)
* "ಜಗತ್ತಿನಲ್ಲಿ ಏನೆಲ್ಲ ಇದೆಯೋ ಅದೆಲ್ಲವೂ ಬ್ರಾಹ್ಮಣ ನಿಗೆ ಸೇರಿದ್ದು; ಬ್ರಾಹ್ಮಣ ತನ್ನ ಜನ್ಮಶ್ರೇಷ್ಠತೆಯ ಕಾರಣಕ್ಕೆ ನಿಶ್ಚಯವಾಗಿ ಅದೆಲ್ಲದಕ್ಕೂ ಹಕ್ಕುದಾರನಾಗುತ್ತಾನೆ." (II. 100)
* "ಹೇಗೆ ಅಗ್ನಿಯನ್ನು (ಬಲಿ ಸಮರ್ಪಣೆಗಾಗಿ) ಉರಿಸಿ ಇಟ್ಟರೂ ಅಥವಾ ಉರಿಸದೆ ಇಟ್ಟರೂ ಅದು ಪರಮ ಪೂಜ್ಯ ಆಗಿರುತ್ತದೋ ಹಾಗೇ ಬ್ರಾಹ್ಮಣನೊಬ್ಬ ಜ್ಞಾನಿಯಾಗಿರಲಿ ಅಜ್ಞಾನಿಯಾಗಿರಲಿ ಅವನು ಪರಮ ಪೂಜ್ಯ." (IX. 317)
* "ಹೀಗೆ ಬ್ರಾಹ್ಮಣರು ಎಲ್ಲಾ ವಿಧದ ನೀಚ ವೃತ್ತಿಗಳಲ್ಲಿ ತೊಡಗಿದ್ದರೂ ಅವರನ್ನು ಎಲ್ಲಾ ವಿಧದಲ್ಲೂ ಗೌರವಿಸಬೇಕು; ಏಕೆಂದರೆ ಪ್ರತಿಯೊಬ್ಬ ಬ್ರಾಹ್ಮಣನೂ ಅತ್ಯಂತ ಪರಮ ಪೂಜ್ಯ." (IX.323)
* "ಆದರೆ ಶೂದ್ರನು ಬ್ರಾಹ್ಮಣರ ಸೇವೆಯನ್ನು ಮಾಡಲಿ; ಅದು ಸ್ವರ್ಗಪ್ರಾಪ್ತಿಗಾಗಿ ಇರಬಹುದು ಅಥವಾ ಪ್ರಸಕ್ತ ಜನ್ಮ ಯಾ ಮುಂದಿನ ಜನ್ಮವನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಇರಬಹುದು. ಏಕೆಂದರೆ ಯಾರು ಬ್ರಾಹ್ಮಣರ ಸೇವಕನೆಂದು ಕರೆಯಲ್ಪಡುತ್ತಾನೋ ಅವನು ತನ್ನೆಲ್ಲಾ ಗುರಿಗಳನ್ನು ಸಾಧಿಸುತ್ತಾನೆ." (X.122)
* "ಶೂದ್ರನ ಮಟ್ಟಿಗೆ ಬ್ರಾಹ್ಮಣರ ಸೇವೆಯೇ ಅತ್ಯುತ್ತಮ ವೃತ್ತಿ ಎಂದು ಸಾರಲಾಗಿದೆ. ಇದನ್ನು ಬಿಟ್ಟು ಬೇರೇನನ್ನು ಮಾಡಿದರೂ ಫಲಕಾರಿ ಆಗದು." X.123)
* "ಶೂದ್ರನಿಗೆ ಸಂಪತ್ತನ್ನು ಶೇಖರಿಸುವ ಸಾಮರ್ಥ್ಯವಿದ್ದರೂ ಅವನು ಅದನ್ನು ಮಾಡಕೂಡದು; ಏಕೆಂದರೆ ಶೂದ್ರನು ಸಂಪತ್ತನ್ನು ಕಲೆಹಾಕಿದಾಗ ಬ್ರಾಹ್ಮಣನಿಗೆ ಸಂಕಟವಾಗುತ್ತದೆ." (X.129)



ಹೀಗೆ ಜರ್ಮನ್ ತತ್ವಜ್ಞಾನಿ ನೀಷೆ ಮತ್ತು ಭಾರತದ ತತ್ವಜ್ಞಾನಿ ಮನುವಿನ ತತ್ವಗಳನ್ನು ತುಲನೆ ಮಾಡಿದನಂತರ "ಮನುವಿನದು ಒಂದು ಕೀಳುಮಟ್ಟದ ಕುಲಗೆಟ್ಟ ತತ್ವವಾಗಿದ್ದು ನೀಷೆಯದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಜಿಗುಪ್ಸೆಯನ್ನೂ ಹೇಸಿಕೆಯನ್ನೂ ಹುಟ್ಟಿಸುತ್ತದೆ" ಎಂಬ ತೀರ್ಮಾನಕ್ಕೆ ಅಂಬೇಡ್ಕರ್ ಬರುತ್ತಾರೆ. ಬಳಿಕ "ಇವೆರಡೂ ಅತಿಮಾನವ ತತ್ವಗಳು. ಅಸ್ತಿತ್ವದಲ್ಲಿರುವ ಮಾನವಕುಲಕ್ಕೆ ಹೋಲಿಸಿದರೆ ಅತಿಮಾನವರೆನಿಸುವ ಹೊಸದೊಂದು ಮಾನವಕುಲವನ್ನು ಸೃಷ್ಟಿಸುವಲ್ಲಿ ನೀಷೆಗೆ ನಿಜವಾದ ಆಸಕ್ತಿ ಇತ್ತು. ಆದರೆ ಮನುವಿನ ಆಸಕ್ತಿ ಅದಲ್ಲ. ಅವನ ಆಸಕ್ತಿ ಬೇರೆ. ಅವನು ತಾವೇ ಅತಿಮಾನವರು ಎಂದು ಹೇಳಿಕೊಂಡ ವರ್ಗವೊಂದರ ಸವಲತ್ತುಗಳನ್ನು ಕಾಪಾಡುವುದರಲ್ಲಿ ಆಸಕ್ತನಾಗಿದ್ದ. ನೀಷೆಯ ಅತಿಮಾನವರು ತಮ್ಮ ಅರ್ಹತೆ ಯಿಂದಾಗಿ ಅತಿಮಾನವರೆನಿಸಿದರೆ ಮನುವಿನ ಅತಿಮಾನವರು ತಮ್ಮ ಹುಟ್ಟಿನ ಕಾರಣಕ್ಕೆ ಅತಿಮಾನವರೆನಿಸುತ್ತಾರೆ. ನೀಷೆ ಓರ್ವ ನೈಜ ಅನಾಸಕ್ತ ತತ್ವಜ್ಞಾನಿ. ತದ್ವಿರುದ್ಧವಾಗಿ ಮನು ಓರ್ವ ಜೀತಗಾರ ತತ್ವಜ್ಞಾನಿ; ಅರ್ಥಾತ್ ಒಂದು ಗುಂಪಿನಲ್ಲಿ ಜನಿಸಿದ ವರ್ಗವೊಂದು ತನ್ನ ಹಿತಾಸಕ್ತಿಗಳಿಗೆ ಅನುಕೂಲಕರ ವಾದ ಮತ್ತು ಸದ್ಗುಣಗಳನ್ನು ಕಳೆದುಕೊಂಡರೂ ತನ್ನ ಅತಿಮಾನವರೆಂಬ ಹಣೆಪಟ್ಟಿಯನ್ನು ಕಳೆದುಕೊಳ್ಳ ದಂತಿರುವ ಸಿದ್ಧಾಂತವೊಂದನ್ನು ಪ್ರತಿಪಾದಿಸಲೆಂದು ಸಂಬಳಕ್ಕೆ ಇಟ್ಟುಕೊಳ್ಳಲಾದ ತತ್ವಜ್ಞಾನಿ" ಎಂದು ಕಟು ಶಬ್ದಗಳಲ್ಲಿ ಟೀಕಿಸುತ್ತಾರೆ.

■ ಸುರೇಶ್ ಭಟ್ ಬಾಕ್ರಬೈಲ್

ಟ್ರಂಪ್, ಮೋದಿ ಭೇಟಿ: ಒಂದು ಪರಾಮರ್ಶೆ



■ ಸುರೇಶ್ ಭಟ್ ಬಾಕ್ರಬೈಲ್

ಭರ್ಜರಿ ಪೂರ್ವಪ್ರಚಾರದ ನಂತರ ಜೂನ್ 25 ಮತ್ತು 26ರಂದು ಮೋದಿ ಕೈಗೊಂಡ ಐದನೆ ಅಮೆರಿಕ ಪ್ರವಾಸ ಈಗ ಕೆಲವು ದಿನಗಳ ಹಿಂದೆ ಮುಕ್ತಾಯಗೊಂಡಿದೆ. ಕಳೆದ ಹಲವಾರು ವಾರಗಳಿಂದ ಮೋದಿ, ಟ್ರಂಪ್ ಭೇಟಿಯ ಸುತ್ತ ದೇಶಾದ್ಯಂತ ಒಂದು ವಿಧದ ಸಮೂಹ ಸನ್ನಿಯನ್ನು ಹುಟ್ಟುಹಾಕಿದ್ದ ತುತ್ತೂರಿ ಮಾಧ್ಯಮಗಳು ಈಗ ಎಂದಿನಂತೆ ಅದನ್ನೊಂದು ತುಂಬಾ ಸಫಲವಾದ ಭೇಟಿ ಎಂಬುದಾಗಿ ಬಣ್ಣಿಸುತ್ತಾ ಹುತ್ತವನ್ನು ಬೆಟ್ಟವೆಂದು ಬಿಂಬಿಸುತ್ತಿವೆ. ಒಂದು ವಿಧದಲ್ಲಿ ನೋಡಿದರೆ ಇದೊಂದು ವಿಶೇಷ ಭೇಟಿಯೆ ಹೌದು. ಏಕೆಂದರೆ ಇವರಿಬ್ಬರ ಮನೋವಿಕಾರಗಳು ಈಗಾಗಲೆ ಸಾಕಷ್ಟು ಮಂದಿ ತಜ್ಞರ ವಿಶ್ಲೇಷಣೆಗೊಳಗಾಗಿವೆ! ಸಾಮಾಜಿಕ ಮಾಧ್ಯಮಗಳ ಕ್ಷೇತ್ರದಲ್ಲಿ ತಾವಿಬ್ಬರೂ ವಿಶ್ವ ಮಟ್ಟದ ನಾಯಕರೆಂದು ಟ್ರಂಪ್ ತನ್ನ ಹೇಳಿಕೆಯಲ್ಲಿ ಕೊಚ್ಚಿಕೊಂಡಿದ್ದಾನೆ. ನಿಜ, ಇಬ್ಬರಿಗೂ 3 ಕೋಟಿಗೂ ಮಿಕ್ಕಿ ಟ್ವಿಟರ್ ಅನುಯಾಯಿಗಳಿದ್ದಾರೆ. ಸಾಮಾಜಿಕ ಮಾಧ್ಯಮಗಳ ಸಮರ್ಥ ಬಳಕೆಯಲ್ಲಿ ಇವರಿಬ್ಬರನ್ನು ಮೀರಿಸುವವರು ಪ್ರಾಯಶಃ ಯಾರೂ ಇಲ್ಲ. ಆದರೆ ಇಬ್ಬರೂ ಸಾಂಪ್ರದಾಯಿಕ ಮಾಧ್ಯಮಗಳನ್ನು ಎದುರಿಸಲು ಅಸಮರ್ಥರೆನ್ನುವುದು ಮತ್ತೊಮ್ಮೆ ಸಾಬೀತಾಯಿತು. ಅದು ಹೇಗೆಂದರೆ ಅಮೆರಿಕದಲ್ಲಿ ಮಾತುಕತೆಗಳ ನಂತರದ ಪತ್ರಿಕಾಗೋಷ್ಠಿಯಲ್ಲಿ ಪ್ರತಿಯೊಬ್ಬ ಪತ್ರಕರ್ತನಿಗೆ ಎರಡು ಪ್ರಶ್ನೆಗಳಿಗೆ ಅವಕಾಶ ನೀಡುವ ಸಂಪ್ರದಾಯವಿದೆ. ಆದರೆ ಮೋದಿ, ಟ್ರಂಪ್ ಮಾತುಕತೆ ನಂತರ ಪ್ರಶ್ನೆಗಳಿಗೆ ಅವಕಾಶ ಇಲ್ಲ ಎಂದು ಮೊದಲೆ ಹೇಳಲಾಯಿತು! ಒಂದಂತೂ ನಿಚ್ಚಳ, ರಾಜಕೀಯ ಮುತ್ಸದ್ದಿತನ ಇಲ್ಲದ ಇವರನ್ನು ವಿಶ್ವ ಮಟ್ಟದ ರಾಜಕಾರಣಿಗಳೆಂದು ಕರೆಯಲು ಸಾಧ್ಯವೇ ಇಲ್ಲ. ಇಂಥವರ ಕೈಲಿ ದೇಶದ ಕೀಲಿಕೈಯನ್ನು ನೀಡುವುದೆಂದರೆ ಮಂಗನ ಕೈಲಿ ಮಾಣಿಕ್ಯ ಕೊಟ್ಟಂತೆ ಎಂಬ ಅನುಭವದ ಮಾತುಗಳು ಈಗೀಗ ಕೇಳಿಬರತೊಡಗಿವೆ!

ಸಾಮ್ಯತೆಗಳು

ದಲಿತ, ಅಲ್ಪಸಂಖ್ಯಾತರನ್ನು ಎರಡನೆ ದರ್ಜೆಯ ಪ್ರಜೆಗಳನ್ನಾಗಿಸಲು ಕಟಿಬದ್ಧವಾದ ಆರೆಸ್ಸೆಸ್‌ನ ಕಟ್ಟಾ ಅನುಯಾಯಿ ಆಗಿರುವ ನರೇಂದ್ರ ಮೋದಿ ಪ್ರಧಾನಿಯಾದ ನಂತರದಲ್ಲಿ ತನ್ನ ಮಾತೃ ಸಂಘಟನೆಯ ಅಜೆಂಡಾವನ್ನು ಚಾಚೂತಪ್ಪದೆ ಜಾರಿಗೊಳಿಸುತ್ತಿದ್ದಾನೆ. ಅದರ ಭಾಗವಾಗಿ ಭಾರತದ ಗತ ವೈಭವವನ್ನು ಮರಳಿ ಸ್ಥಾಪಿಸುವ ಗುರಿಯನ್ನು ಇಟ್ಟುಕೊಂಡಿರುವ ಮೋದಿಯ "ನವ ಭಾರತ" ಕಲ್ಪನೆಗೂ ಟ್ರಂಪ್‌ನ "ಅಮೆರಿಕವನ್ನು ಮತ್ತೆ ಉನ್ನತಿಗೆ ಏರಿಸುವ" ಕಲ್ಪನೆಗೂ ಬಹಳಷ್ಟು ಸಾಮ್ಯತೆಗಳಿವೆ. ಟ್ರಂಪ್ ಭೇಟಿಯ ವೇಳೆ ಇದನ್ನು ಪ್ರಸ್ತಾಪಿಸಿದ ಮೋದಿ ತಮ್ಮೀರ್ವರ ಕಲ್ಪನೆಗಳು ಒಮ್ಮುಖವಾಗಿರುವುದು ತಮ್ಮ ನಡುವಿನ ಸಹಕಾರಕ್ಕೆ ಹೊಸ ಆಯಾಮಗಳನ್ನು ಸೇರಿಸುವುದೆಂಬುದು ತನ್ನ ದೃಢ ನಂಬಿಕೆಯಾಗಿದೆ ಎಂದು ಹೇಳಿದ್ದಾನೆ. ಮೋದಿ ಭಕ್ತರ ವರ್ಗವೊಂದು ಟ್ರಂಪ್ ಭಕ್ತರೂ ಆಗಿರುವುದು ಇದೇ ಸಾಮ್ಯತೆಗಳ ಕಾರಣಕ್ಕೆ. ಚುನಾವಣೆಗೆ ಮೊದಲು ಟ್ರಂಪ್ ವಿಜಯಕ್ಕಾಗಿ ಹೋಮಹವನ ಮಾಡಿದ ಇವರು ಚುನಾವಣೆ ನಂತರ ಸಂಭ್ರಮಾಚರಣೆ ಮಾಡಿದ್ದಾರೆ. ಮೊನ್ನೆಮೊನ್ನೆ ಹರಿಯಾಣಾದ ಮರೋರಾ ಎಂಬ ಹಳ್ಳಿಯ ಹೆಸರನ್ನು "ಟ್ರಂಪ್ ಗ್ರಾಮ" ಎಂದು ಬದಲಾಯಿಸುವ ವಿಫಲ ಯತ್ನವೊಂದನ್ನೂ ಮಾಡಿದ್ದಾರೆ! ವಾಸ್ತವದಲ್ಲಿ ಇಂತಹ "ಗತ ವೈಭವದ ಮರುಸ್ಥಾಪನೆ"ಯ ಮಾತುಗಳು ಬಂಡವಾಳವಾದದ ಪ್ರಸಕ್ತ ಬಿಕ್ಕಟ್ಟಿನಿಂದಾಗಿ ತತ್ತರಿಸಿರುವ ಅತೃಪ್ತ ವರ್ಗಗಳನ್ನು ಸೆಳೆಯುವ ಮೂಲಕ ಅಧಿಕಾರಕ್ಕೆ ಬಂದು ಸರ್ವಾಧಿಕಾರ ಹೇರುವ ಸಂಚಿನ ಭಾಗವಲ್ಲದೆ ಇನ್ನೇನೂ ಅಲ್ಲ. ಕಳೆದ ಶತಮಾನದಲ್ಲಿ ಇಟಲಿ, ಜರ್ಮನಿಗಳಲ್ಲಿ ಆದದ್ದೂ ಇದೇ.

ಅಮೆರಿಕದ ಬಹುಪಾಲು ಜನತೆ ಮತ್ತು ಮಾಧ್ಯಮಗಳು ಟ್ರಂಪ್ ಅಧ್ಯಕ್ಷನಾದಂದಿನಿಂದಲೂ ಆತನಿಗೆ ಭಾರಿ ಪ್ರತಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅಮೆರಿಕದ ಪತ್ರಕರ್ತರು ತಮ್ಮ ಅಧ್ಯಕ್ಷನ ಮೇಲೆ ಮಾಡುತ್ತಿರುವಷ್ಟು ವೈವಿಧ್ಯಮಯ ಟೀಕಾಪ್ರಹಾರಗಳನ್ನು ಭಾರತ ಸೇರಿದಂತೆ ಇನ್ನಾವ ದೇಶದ ಪತ್ರಕರ್ತರೂ ತಮ್ಮ ನಾಯಕರ ಮೇಲೆ ಮಾಡುತ್ತಿರುವಂತಿಲ್ಲ! ಇತ್ತೀಚೆಗೆ ಸಿಎನ್‌ಎನ್ ವಾಹಿನಿಯ ಅನಾ ನವಾರೊ ಮಾಡಿರುವ ಟೀಕೆಗಳು ನಿಜಕ್ಕೂ ಸ್ವಾರಸ್ಯಕರವಾಗಿವೆ: "ಈ ಪೋಕೀಲಾಲನಿಗೆ ಸ್ತ್ರೀಯರು ಮತ್ತು ರಕ್ತ ಕಂಡರೆ ಎಷ್ಟೊಂದು ಆಕರ್ಷಣೆ... ಈ ಅಸಹ್ಯ ಡೌಲುಗಾರ ಅಮೆರಿಕದ ಅಧ್ಯಕ್ಷರ ಸ್ಥಾನಮಾನವನ್ನು ಎಷ್ಟು ಕೆಳಮಟ್ಟಕ್ಕೆ ಇಳಿಸುತ್ತಿದ್ದಾನೆ... ಇವನಿಂದಾಗಿ ಮುಜುಗರ, ನಾಚಿಕೆ, ಅಸಹ್ಯ ಎಲ್ಲವೂ ಆಗುತ್ತಿದೆ... ಲೋ ತಲೆಕೆಟ್ಟ, ತಿಕ್ಕಲ, 70 ವರ್ಷ ವಯಸ್ಸಿನ ಮುದಿಗೂಸೆ, ಇದನ್ನೆಲ್ಲ ನಿಲ್ಲಿಸು...."!

ಉಭಯ ನಾಯಕರ ಭೇಟಿ


ಈಗ ಈ ಉಭಯ ನಾಯಕರ ಭೇಟಿಯ ವಿಚಾರಕ್ಕೆ ಮರಳೋಣ. ಭೇಟಿಯ ಉದ್ದೇಶ ಉಭಯ ದೇಶಗಳ ನಡುವಿನ ವಾಣಿಜ್ಯ ಸಂಬಂಧಗಳು, ಯುದ್ಧತಾಂತ್ರಿಕ ಸಹಕಾರ, ಭಯೋತ್ಪಾದನೆ, ಅಫಘಾನಿಸ್ತಾನ ಮುಂತಾದ ವಿಷಯಗಳ ಕುರಿತು ಮಾತುಕತೆ ನಡೆಸುವುದಾಗಿತ್ತೆಂದು ಹೇಳಲಾಗಿದೆ. ಮಾತುಕತೆಗಳ ಒಂದು ಉದ್ದೇಶ ಚೀನಾದ ಗಮನ ಸೆಳೆಯುವುದಾಗಿತ್ತೆಂದು ಹೇಳಿರುವ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ, ಉತ್ತರ ಕೊರಿಯ ತನ್ನ ಪರಮಾಣು ಮತ್ತು ಕ್ಷಿಪ್ತ ಕ್ಷಿಪಣಿಗಳ ಉತ್ಪಾದನೆಯನ್ನು ನಿಲ್ಲಿಸುವಂತೆ ಚೀನಾ ಒತ್ತಡ ಹಾಕದಿರುವ ಬಗ್ಗೆ ಟ್ರಂಪ್‌ಗೆ ನಿರಾಸೆಯಾಗಿರುವುದೇ ಇದಕ್ಕೆ ಕಾರಣ ಎಂದು ವರದಿ ಮಾಡಿದೆ. ಇತ್ತೀಚಿನ ಭಾರತ, ಚೀನಾ ಗಡಿ ಸಂಘರ್ಷ ಕಾಕತಾಳೀಯವೆಂಬಂತೆ ಮೋದಿಯ ಅಮೆರಿಕ ಭೇಟಿಯ ಸಂದರ್ಭದಲ್ಲೆ ಪ್ರಾರಂಭವಾಗಿರುವುದು, ಭಾರತದ ಸಡ್ಡುಹೊಡೆಯುವ ನಿಲುವು ಟ್ರಂಪ್ ಮೇಲೆ ಪ್ರಭಾವ ಬೀರುವ ಸಲುವಾಗಿರಬಹುದು ಎಂಬ ವರ್ತಮಾನವೂ ಕೇಳಿಬರುತ್ತಿದೆ. ಗಮನಾರ್ಹವಾಗಿ ಮೋದಿ, ಟ್ರಂಪ್ ಮಾತುಕತೆಗಳ ನಂತರ ಇಬ್ಬರೂ ಪ್ರತ್ಯೇಕ, ಪ್ರತ್ಯೇಕ ಹೇಳಿಕೆಗಳನ್ನು ನೀಡಿದ್ದು ಅವು ಬೋರ್ ಹಿಡಿಸುವಷ್ಟು ನೀತಿಪಾಠಗಳಿಂದ ತುಂಬಿತುಳುಕುತ್ತಿವೆ. ಒಳಹೊಕ್ಕು ನೋಡಿದರೆ ಅವುಗಳಲ್ಲಿ ಯಾವುದೇ ತಿರುಳಿಲ್ಲವೆಂದು ತಿಳಿಯುತ್ತದೆ. ಎಚ್1 ಬಿ ವೀಸಾ, ಅಮೆರಿಕದಲ್ಲಿ ಭಾರತೀಯರ ಹತ್ಯೆಗಳು, ಪ್ಯಾರಿಸ್ ಒಪ್ಪಂದಗಳಂತಹ "ತೊಡಕಿನ ವಿಷಯಗಳನ್ನು" ಬಹುಶಃ ಬೇಕಂತಲೇ ಹೊರಗಿಡಲಾಗಿದೆ. ಪ್ರತ್ಯೇಕ ಹೇಳಿಕೆಗಳನ್ನು ನೀಡುವುದರ ಹಿಂದೆ, ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಗಳಿಗೆ ಅವಕಾಶ ನೀಡದಿರುವುದರ ಹಿಂದೆ ಬಹುಶಃ ಇದೇ ಕಾರಣ ಇರಬೇಕು. ಉಭಯ ನಾಯಕರ ಹೇಳಿಕೆಗಳಲ್ಲಿರುವ ಕೆಲವೊಂದು ಮುಖ್ಯ ವಿಷಯಗಳತ್ತ ಗಮನ ಹರಿಸೋಣ.

ವಾಣಿಜ್ಯ ಸಂಬಂಧಗಳು

ಅಮೆರಿಕ, ಭಾರತ ನಡುವಿನ ವ್ಯಾಪಾರ ವಹಿವಾಟುಗಳಲ್ಲಿ ಅಮೆರಿಕ ಸುಮಾರು 31 ಬಿಲಿಯ ಡಾಲರುಗಳ ಕೊರತೆ ಎದುರಿಸುತ್ತಿದೆ ಎನ್ನಲಾಗಿದೆ. ತಾನು ಅಧಿಕಾರಕ್ಕೆ ಬಂದರೆ ಅಮೆರಿಕದ ಸರಕುಗಳನ್ನು ಹೆಚ್ಚೆಚ್ಚು ರಫ್ತು ಮಾಡುವೆ, ಅಧಿಕ ಉದ್ಯೋಗಗಳನ್ನು ಸೃಷ್ಟಿಸುವೆ ಎಂಬುದು ಟ್ರಂಪ್‌ನ ಚುನಾವಣಾ ಭರವಸೆಗಳಲ್ಲೊಂದು. ಇತ್ತೀಚೆಗೆ ಅಮೆರಿಕದ ಸಂಸದರು ಟ್ರಂಪ್‌ಗೆ ಪತ್ರ ಬರೆದು ಭಾರತ ಸರ್ಕಾರ ಅಮೆರಿಕದಿಂದ ಆಮದು ಮತ್ತು ವಾಣಿಜ್ಯ ವಹಿವಾಟುಗಳಿಗೆ ಹೊಸ ಅಡೆತಡೆಗಳನ್ನು ಹಾಕಿದೆ ಎಂದು ದೂರಿದ ಹಿನ್ನೆಲೆಯಲ್ಲಿ ಪ್ರಸಕ್ತ ಮಾತುಕತೆಗಳು ನಡೆದಿವೆ. ಅಮೆರಿಕದ ಉತ್ಪನ್ನಗಳಿಗೆ ಭಾರತ ತನ್ನ ಬಾಗಿಲನ್ನು ಇನ್ನಷ್ಟು ತೆರೆಯಬೇಕು, ನಷ್ಟದಲ್ಲಿರುವ ಉದ್ದಿಮೆಗಳಿಗೆ ಭಾರತದಲ್ಲಿ ಮಾರುಕಟ್ಟೆ ಒದಗಿಸಿ ಆ ಮೂಲಕ ತನ್ನಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕೆಂಬುದು ಅಮೆರಿಕದ ಬಯಕೆಯಾಗಿದೆ. ಜೊತೆಗೆ ತನ್ನಲ್ಲಿನ ನೈಸರ್ಗಿಕ ಅನಿಲವನ್ನು ಭಾರತಕ್ಕೆ ರಫ್ತು ಮಾಡಲು ಅದು ತುದಿಗಾಲಲ್ಲಿ ನಿಂತಿದೆ.

ಸ್ಪೈಸ್ ಜೆಟ್ ಸಂಸ್ಥೆ ಈಗಾಗಲೆ ಅಮೆರಿಕದ ಬೋಯಿಂಗ್ ಕಂಪೆನಿಯಿಂದ 100 ಹೊಚ್ಚ ಹೊಸಾ ವಿಮಾನಗಳಿಗೆ ಆರ್ಡರ್ ಕೊಟ್ಟಿದೆ. ಮೋದಿ, ಟ್ರಂಪ್ ಮಾತುಕತೆಗಳ ವೇಳೆ ಅಮೆರಿಕದಿಂದ 366 ಮಿಲಿಯ ಡಾಲರ್ ಬೆಲೆಬಾಳುವ ಸಿ17 ವಿಮಾನ ಮತ್ತು 2 ಬಿಲಿಯ ಡಾಲರ್ ಬೆಲೆಯ ಮಿಲಿಟರಿ ಡ್ರೋನ್ ಗಳನ್ನು ಖರೀದಿಸಲು ನಿರ್ಧರಿಸಲಾಗಿದೆ. ಇದರಿಂದ ಅಮೆರಿಕದ ಮಿಲಿಟರಿ ಉದ್ದಿಮೆಗಳಿಗೆ ಭಾರಿ ಪ್ರಯೋಜನ ವಾಗಲಿದೆ. ಇನ್ನೊಂದು ಮುಖ್ಯ ಬೆಳವಣಿಗೆಯಲ್ಲಿ, ಆಂಧ್ರದಲ್ಲಿ 6 ಅಣು ವಿದ್ಯುತ್ ಸ್ಥಾವರಗಳ ವಿನ್ಯಾಸ ಮತ್ತು ಸಲಹೆಯ ಗುತ್ತಿಗೆಯನ್ನು ದಿವಾಳಿ ಎದ್ದಿರುವ ಅಮೆರಿಕದ ವೆಸ್ಟಿಂಗ್ ಹೌಸ್ ಕಂಪೆನಿಗೆ ನೀಡಲಾಗಿದ್ದು ಇದರ ಒಟ್ಟು ವೆಚ್ಚ 20 ಬಿಲಿಯ ಡಾಲರುಗಳು ಎನ್ನಲಾಗಿದೆ.

ಭಾರತದಲ್ಲಿ ನಿರುದ್ಯೋಗದ ಸಮಸ್ಯೆ ಬೃಹದಾಕಾರ ತಾಳಿರುವಾಗ, ನೋಟುರದ್ದತಿಯ ಫಲವಾಗಿ ಅನೌಪಚಾರಿಕ ವಲಯ ನೆಲಕಚ್ಚಿ ಲಕ್ಷಾಂತರ ಕಾರ್ಮಿಕರು ನೌಕರಿ ಕಳೆದುಕೊಂಡಿರುವಾಗ ನಿರ್ದಿಷ್ಟವಾಗಿ ಭಾರತದ ನಿರುದ್ಯೋಗಿಗಳ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಯಾವುದೇ ಬೇಡಿಕೆ ಇಟ್ಟಿರುವ ಹಾಗಿಲ್ಲ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಪಾಲುದಾರಿಕೆಯನ್ನು ಇನ್ನಷ್ಟು ದೃಢಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದಷ್ಟೆ



ಹೇಳಲಾಗಿದೆ. ಸಾವಿರಾರು ಭಾರತೀಯ ಐಟಿ ಉದ್ಯೋಗಾಕಾಂಕ್ಷಿಗಳ ಆತಂಕಕ್ಕೆ ಕಾರಣವಾದ ಎಚ್1 ಬಿ ವೀಸಾ ವಿಷಯವನ್ನು ಸದ್ದಿಲ್ಲದೆ ಕೈಬಿಡಲಾಗಿದೆ. ಪರಿಣಾಮವಾಗಿ ಅವರೆಲ್ಲರ ಭವಿಷ್ಯ ತಕ್ಕಡಿಯಲ್ಲಿ ತೂಗುತ್ತಿದೆ. ಎರಡನೆಯದಾಗಿ ಅಮೆರಿಕದಲ್ಲಿ ಭಾರತೀಯರ ಮೇಲಿನ ಜನಾಂಗೀಯ ಹತ್ಯೆಗಳು ಹೆಚ್ಚುತ್ತಿರುವ ಆತಂಕಕಾರಿ ಬೆಳವಣಿಗೆಯ ವಿಚಾರವನ್ನು ಎತ್ತದಿರುವುದರ ಹಿಂದೆ ಪ್ರಾಯಶಃ ಅದು ತಿರುಗುಬಾಣವಾಗಿ ಪರಿಣಮಿಸಬಹುದು ಎಂಬ ಎಣಿಕೆ ಇರಬಹುದು. ಅಂದಹಾಗೆ "ಭಾರತದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಗೆಂದಿರುವ ನಮ್ಮ ಎಲ್ಲಾ ಪ್ರಮುಖ ಯೋಜನೆ, ಕಾರ್ಯಕ್ರಮಗಳಲ್ಲಿ ನಾವು ಅಮೆರಿಕವನ್ನು ನಮ್ಮ ಪ್ರಮುಖ ಪಾಲುದಾರ ಎಂದು ಪರಿಗಣಿಸುತ್ತೇವೆ" ಎಂದ ಮೋದಿಯ ಮಾತಿನ ಅರ್ಥವೇನೆಂದು ಯಾರಿಗೂ ಗೊತ್ತಿಲ್ಲ!

ಬಳಿಕ ಆಪಲ್, ಗೂಗಲ್ ಸೇರಿದಂತೆ ಅಮೆರಿಕದ 20 ಕಾರ್ಪೊರೇಟು ಕುಳಗಳನ್ನು ಭೇಟಿ ಮಾಡಿದ ಮೋದಿ ತನ್ನ ಸರ್ಕಾರ ಭಾರತವನ್ನು ವಾಣಿಜ್ಯಸ್ನೇಹಿಯಾಗಿಸಲು ಸಾವಿರಾರು ಸುಧಾರಣೆಗಳನ್ನು ತಂದಿದೆ ಎಂದ. ಆದರೆ ದೇಶದಲ್ಲಿ ಕಾನೂನು ಸುವ್ಯವಸ್ಥೆ ತೀರಾ ಹದಗೆಟ್ಟಿರುವ ಸಂದರ್ಭದಲ್ಲಿ ವಾಣಿಜ್ಯಸ್ನೇಹದ ಮಾತುಗಳು ಹಾಸ್ಯಾಸ್ಪದವಾಗಿವೆ. "ಸಂಸ್ಕೃತಿ ರಕ್ಷಕರು", "ಗೋರಕ್ಷಕರು" ಎಂದು ಹೇಳಿಕೊಳ್ಳುವ ಗುಂಪುಗಳು ಬೀದಿಬೀದಿಗಳಲ್ಲಿ ಮುಸ್ಲಿಮರು ಮತ್ತು ದಲಿತರ ಮೇಲೆ ಹಲ್ಲೆ ಕೊಲೆ ನಡೆಸುತ್ತಿರುವ ಸಂದರ್ಭದಲ್ಲಿ ಯಾರೇ ಆಗಲಿ ಹೂಡಿಕೆಗೆ ಹಿಂಜರಿಯುವ ಪ್ರಕ್ಷುಬ್ಧ ಪರಿಸ್ಥಿತಿ ಭಾರತದಲ್ಲಿದೆ.. ಈ ವಿಷಯ ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿಯೂ ವ್ಯಾಪಕ ಖಂಡನೆಗೆ ಗುರಿಯಾಗಿದೆ.

ಎನ್‌ಎಸ್‌ಜಿ ಇತ್ಯಾದಿ ಗುಂಪುಗಳ ಸದಸ್ಯತ್ವ

ಇನ್ನು ಎನ್‌ಎಸ್‌ಜಿ, ಆಸ್ಟ್ರೇಲಿಯಾ ಗುಂಪು, ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ಮುಂತಾದ ಸಂಸ್ಥೆಗಳಲ್ಲಿ ಭಾರತದ ಸದಸ್ಯತ್ವಕ್ಕೆ ಅಮೆರಿಕ ತನ್ನ ಬೆಂಬಲ ಸೂಚಿಸುತ್ತದೆ ಎಂದು ಟ್ರಂಪ್ ಹೇಳಿಕೆ ತಿಳಿಸುತ್ತದೆ. ಆದರೆ ಈ ವಿಚಾರದಲ್ಲಿ ಹೊಸದೇನೂ ಇಲ್ಲ. ಅಮೆರಿಕದ ಈ ಬೆಂಬಲ ಸೂಚನೆಯನ್ನು ಹಲವು ವರ್ಷಗಳಿಂದಲೂ ಪುನರುಚ್ಚರಿಸಲಾಗುತ್ತಿದೆ!

ಭಯೋತ್ಪಾದನೆ ವಿರುದ್ಧ ಜಂಟಿ ಹೋರಾಟ

ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡುವ ಚರ್ವಿತಚರ್ವಣ ಹೇಳಿಕೆ ಎಂದಿನಂತೆ ಈ ಬಾರಿಯೂ ಹೊರಬಿದ್ದಿದೆ. "ನಾವು ತೀವ್ರಗಾಮಿ ಇಸ್ಲಾಮ್‌ವಾದಿಗಳ ಭಯೋತ್ಪಾದನೆಯನ್ನು ನಿರ್ನಾಮ ಮಾಡುವೆವು" ಎಂದು ಇಬ್ಬರೂ ಹೇಳಿದ್ದಾರೆ. "ತನ್ನ ನೆಲವನ್ನು ಉಗ್ರರು ಭಾರತದ ಮೇಲೆ ದಾಳಿ ನಡೆಸಲು ಬಳಕೆ ಮಾಡದಂತೆ ಪಾಕಿಸ್ತಾನ ನೋಡಿಕೊಳ್ಳಬೇಕು" ಎಂದು ಟ್ರಂಪ್ ಒತ್ತಾಯಿಸಿದ್ದಾನೆ. ಕಾಶ್ಮೀರದ ಉಗ್ರ ಸಯ್ಯದ್ ಸಲಾಹುದ್ದೀನ್‌ಗೆ "ವಿಶೇಷವಾಗಿ ಹೆಸರಿಸಲಾದ ಜಾಗತಿಕ ಉಗ್ರ" ಎಂಬ ಹಣೆಪಟ್ಟಿ ನೀಡಲಾಗಿದೆ. 20[…] ಮುಂಬಯಿ ದಾಳಿಗಳು ಮತ್ತು ಕಳೆದ ವರ್ಷ[…] ಪಠಾಣ್‌ಕೋಟ್ ದಾಳಿಗಳ ಆಯೋಜಕ[…] ಶೀಘ್ರಾತಿಶೀಘ್ರದಲ್ಲಿ ನ್ಯಾಯಾಲಯದ ಕಟಕಟೆ[…] ನಿಲ್ಲಿಸಬೇಕು ಎಂದು ಪಾಕಿಸ್ತಾನಕ್ಕೆ ತಿಳಿಸಲಾಗಿದೆ.

ಆದರೆ ಪಾಕಿಸ್ತಾನ ಉಗ್ರಗಾಮಿ ಸಂಘಟನೆಗಳಿಗೆ ಆ[…] ನೀಡುತ್ತಿರುವುದನ್ನು ಟ್ರಂಪ್ ಆಡಳಿತ ಹೇಗೆ ತಡೆಯು[…] ಎಂಬುದನ್ನು ಸ್ಪಷ್ಟಪಡಿಸಲಾಗಿಲ್ಲ. ವಾಸ್ತವವಾಗಿ ಭಯೋತ್[…] ವಿರುದ್ಧದ ಇಂತಹ ಹೇಳಿಕೆಗಳೆಲ್ಲ ಬರೀ ಸಾಂಕೇ[…] ಇದರಿಂದ ಪಾಕಿಸ್ತಾನದ ಮೇಲೆ ಯಾವ ಪರಿಣಾಮ[…] ಆಗದು. ಇಂತಹ ಎಚ್ಚರಿಕೆಗಳನ್ನು ಈ ಹಿಂದೆಯ[…] ನೀಡಲಾಗಿದೆ. ಇದರ ಹೊರತಾಗಿಯೂ ಪಾಕಿಸ್ತಾನಕ್ಕೆ ಯು[…] ಸಾಮಗ್ರಿಗಳ ಸರಬರಾಜು ಮುಂದುವರಿಯುತ್ತಲೇ[…] ಪಾಕಿಸ್ತಾನದ ನೆಲದಿಂದ ಕಾರ್ಯಾಚರಿಸುತ್ತಿರುವ ಉ[…] ದಾಳಿಗಳು ಮುಂದುವರಿಯುತ್ತಲೆ ಇವೆ. ರಾಜಕೀ[…] ವಿಶ್ಲೇಷಕರು ಮತ್ತು ಹಿರಿಯ ಸೇನಾಧಿಕಾರಿ[…] ಅಭಿಪ್ರಾಯದಲ್ಲಿ ಸಲಾಹುದ್ದೀನ್‌ಗೆ ಹಣೆಪಟ್ಟಿ ನೀಡಿ[…] ಹೊರತಾಗಿಯೂ ತಳಮಟ್ಟದಲ್ಲಿ ಆತನ ಕಾರ್ಯಾಚರಣ[…] ಎಂದಿನಂತೆ ಮುಂದುವರಿಯಲಿವೆ. ಎಲ್ಲಿಯ[…] ಅಮೆರಿಕದಿಂದ ಆರ್ಥಿಕ ಮತ್ತು ಶಸ್ತ್ರಾಸ್ತ್ರ ನೆ[…] ಮುಂದುವರಿಯುತ್ತದೊ ಅಲ್ಲಿಯತನಕ ಯಾವ[…] ಗಮನಾರ್ಹ ಬದಲಾವಣೆಗಳನ್ನು ನಿರೀಕ್ಷಿಸಲಾಗ[…] ಇದೆಲ್ಲದರ ಮಧ್ಯೆ ಒಂದು ಮುಖ್ಯ ವಿಷಯವನ್ನು ನ[…] ಮರೆಯಬಾರದು: ಅಮೆರಿಕ ಅಲ್ ಕೈದಾದ[…] ಉಗ್ರಗಾಮಿ ಸಂಘಟನೆಗಳನ್ನು ಹುಟ್ಟುಹಾಕಿರುವುದೇ[…] ಜಾಗತಿಕ ರಾಜಕಾರಣದ ಭಾಗವಾಗಿ. ವಿಶ್ವದಾದ್ಯಂತ ಉ[…] ಚಟುವಟಿಕೆಗಳು ಹೆಚ್ಚಿದಷ್ಟೂ ಅಮೆರಿಕದ ಮಿಲಿಟರಿ ಕ[…] ಉದ್ಯಮಕ್ಕೆ ಲಾಭ.

ಭಕ್ತರ ಪ್ರೀತ್ಯರ್ಥ

ಕೈಕುಲುಕಲೆಂಬಂತೆ ಹೋದ ಮೋದಿ ಸೋ[…] ಭಯ ಇರುವ ಆ ಟ್ರಂಪ್‌ನನ್ನು ಬರಸೆಳೆದು ಅಪ್ಪಿಕೊ[…] ಘಟನೆ ಒಂದಲ್ಲ, ಎರಡು ಬಾರಿ ನಡೆದಿದೆ ಎ[…] ಫೈನಾನ್ಶಿಯಲ್ ಟೈಮ್ಸ್ ವರದಿ ಹೇಳುತ್ತದೆ! ಆಲಿಂಗ[…] ಚಿತ್ರಗಳಲ್ಲಿ ಟ್ರಂಪ್ ತಬ್ಬಿಬ್ಬಾಗಿರುವುದನ್ನು ಮತ್ತು ಆ[…] ಅರೆ ಅಪ್ಪುಗೆಗಳನ್ನು ಗಮನಿಸದೆ ಇರಲಾಗುವುದ[…] ಮೋದಿಯ ಈ ಪ್ರಹಸನ ಕೇವಲ ತನ್ನ ವೈಯಕ್ತಿಕ ಇಮೇ[…] ವೃದ್ಧಿಗಾಗಿ ಮತ್ತು ಭಕ್ತಗಣಗಳ ಸಲುವಾಗಿ ಎಂಬುದ[…] ಸಂಶಯವೆ ಇಲ್ಲ.

ವರ್ಜೀನಿಯದಲ್ಲಿ ತನ್ನ ಎನ್ನಾರೈ ಭಕ್ತರನ್ನು ಉದ್ದೇ[…] ಭಾಷಣ ಮಾಡಿದ ಮೋದಿ "ಭಾರತ ಸಂಯ[…] ಕಾಪಾಡಿಕೊಳ್ಳುತ್ತದೆ. ಆದರೆ ಅಗತ್ಯಬಿದ್ದಾಗ ತನ್ನ ಶಕ್ತಿಯ[…] ತೋರಿಸಬಲ್ಲುದು" ಎಂದು ತನ್ನ ಯಥಾಪ್ರಕಾ[…] ಹಾವಭಾವಗಳೊಂದಿಗೆ ಘೋಷಿಸಿದ್ದಾನೆ. ಪಾಕಿಸ್ತಾನದ[…] ಉಗ್ರರ ನೆಲೆಗಳ ಮೇಲೆ ನಡೆಸಿದ "ಸರ್ಜಿಕಲ್ ದಾಳಿಗ[…] ಭಾರತದ ಶಕ್ತಿಯನ್ನು ಸಾಬೀತುಪಡಿಸಿವೆ ಎಂದು ಹೇಳುತ್ತಾ "56 ಇಂಚು" ಎದೆಗಾರಿಕೆಯ ಪ್ರದರ್[…] ಮಾಡಿದ್ದಾನೆ. ಆದರೆ ಸರ್ಜಿಕಲ್ ದಾಳಿಯ ಅರ್ಥ[…] ತಿರುಚಲಾಗಿದೆ. ನಿಜವಾಗಿ ಸರ್ಜಿಕಲ್ ದಾಳಿ ಅ[…] ನಿರ್ದಿಷ್ಟ ಶತ್ರು ಪ್ರದೇಶದ ಮೇಲೆ ವಾಯುಸೇನ[…] ವಿಮಾನಗಳ ಮೂಲಕ ಕಮಾಂಡೋಗಳನ್ನು ಇಳಿಸಿ ಅಥ[…] ಬಾಂಬ್‌ಗಳನ್ನು ಸ್ಫೋಟಿಸುವ ಮೂಲಕ ನಡೆಸ[…] ಕಾರ್ಯಾಚರಣೆ. ಆದರೆ ಭಾರತೀಯ ಸೇನೆ ಅಂತಹುದೇನ[…] ಮಾಡಿಲ್ಲ ಎಂದು ಬಿಬಿಸಿ ನಡೆಸಿರುವ ತನಿಖೆಯಿ[…] ತಿಳಿದುಬಂದಿದೆ. ಅದು ವೈಮಾನಿಕ ದಾಳಿಯೂ ಆಗಿರಲ[…] ವಿಮಾನದಲ್ಲಿ ಸೈನಿಕರನ್ನು ಇಳಿಸಿಯೂ ಇರಲಿಲ್ಲ. ಭಾರ[…] ಸೈನಿಕರು ಗಡಿ ನಿಯಂತ್ರಣ ರೇಖೆ ದಾಟಿ ಕೆಲವೊ[…] ಒಂದು ಕಿ.ಮೀ.ನಷ್ಟು ಒಳಕ್ಕೆ ನುಸುಳಿ ಸಮೀಪದ ಪಾಕಿ[…] ಪಾಳೆಯಗಳ ಮೇಲೆ ದಾಳಿ ಮಾಡಿದ್ದರು ಅಷ್ಟೆ! ಇಂ[…] ಕಾರ್ಯಾಚರಣೆಗಳು ಈ ಹಿಂದೆ ಅದೆಷ್ಟೊ ಬ[…] ನಡೆದಿವೆಯಾದರೂ ಅದನ್ನು ಸಾರ್ವಜನಿಕವಾ[…] ಪ್ರಚುರಪಡಿಸಿರಲಿಲ್ಲ. ಸಮಾಜದಲ್ಲಿ ಯುದ್[…] ಭಾವೋನ್ಮಾದವನ್ನು ಸೃಷ್ಟಿಸಿರಲಿಲ್ಲ. ಅಂದಿಗೂ ಇಂದಿ[…] ಇರುವ ವ್ಯತ್ಯಾಸ ಇದೇ! ಮೋದಿ ಸರ್ಕಾರ ಇಂ[…] ಕೀಳು ಪ್ರಚಾರತಂತ್ರಗಳ ಮೂಲಕ ಜನರ ಭಾವನಾ[…] ತಪ್ಪಲೆ ಕುದಿಯುತ್ತಲೆ ಇರುವಂತೆ ನೋಡಿಕೊಳ್ಳುತ್ತಿದ[…]

ಮೋದಿಯ ಇಮೇಜನ್ನು ಹೆಚ್ಚಿಸಲು ಸಾಂಪ್ರದಾಯ[…] ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಫೇಸ್‌ಬು[…] ಟ್ವಿಟರ್, ವಾಟ್ಸಾಪ್ ಇತ್ಯಾದಿಗಳಲ್ಲಿ ನಾನಾ ವಿಧ[…] ತಂತ್ರಗಾರಿಕೆಗಳನ್ನು ಬಳಸಲಾಗುತ್ತಿರುವುದನ್ನು ಎಲ್ಲ[…] ಬಲ್ಲರು. ಇತ್ತೀಚಿನ ಅಮೆರಿಕ ಭೇಟಿಯ ಸಂದರ್ಭದಲ್ಲಿ[…] ಇಂತಹದೊಂದು ತಂತ್ರಗಾರಿಕೆ ನಡೆದಿದೆ. ಮೋದಿ[…]

▶▶ 13

ಜುನೈದನ ಕಗ್ಗೊಲೆ ನಮ್ಮನ್ನೇಕೆ ಕಾಡಬೇಕು?

EPW ಸಂ ಪಾ ದ ಕೀ ಯ

ಕೃಪೆ: *Economic and Political Weekly*
June 24, 2017. Vol. 52. No. 25-26

■ ಅನು: ಶಿವಸುಂದರ್


ಇಂದಿನ ಸಂದರ್ಭದಲ್ಲಿ ದ್ವೇಷ ರಾಜಕಾರಣದ ವಿರುದ್ಧ ನಡೆಯುವ ಪ್ರತಿಯೊಂದು ಪ್ರತಿಭಟನೆಗಳನ್ನೂ ಸ್ವಾಗತಿಸಬೇಕು


ಈ ವರ್ಷದ ಮೊದಲಾರ್ಧದಲ್ಲಿ 20ಕ್ಕೂ ಹೆಚ್ಚು ...ಮಾಯಕರನ್ನು ಗುಂಪುಗೂಡಿ ಹೊಡೆದು-ಬಡಿದು ...ಂದುಹಾಕಿರುವ ಘಟನೆಗಳು ನಡೆದುಹೋಗಿವೆ. ಆದರೆ ...ಿದ ಜೂನ್ 22ರಂದು ದೆಹಲಿ-ಮಥುರಾ ನಡುವೆ ...ದುಹೋಗುತ್ತಿದ್ದ ರೈಲಿನಲ್ಲಿ 15 ವರ್ಷದ ಜುನೈದ್ ...ನ್ ಎಂಬ ಬಾಲಕನನ್ನು ಹಾಡುಹಗಲೇ ಗುಂಪೊಂದು ...ಡೆದು ಹೊಡೆದು ಕೊಂದು ಹಾಕಿದ ಘಟನೆ ಮಾತ್ರ ...ೀ ದೇಶದ ಅಂತಃಕರಣವನ್ನು ಕಲಕಿಬಿಟ್ಟಿದೆ. ಅದಕ್ಕೆ ...ರಣ ಅವನಿನ್ನೂ ಹದಿಹರೆಯದ ಯುವಕನಾಗಿದ್ದ ಮತ್ತು ...ಬ್ಬಕ್ಕಾಗಿ ಇಡೀ ದಿನ ಖರೀದಿಯನ್ನು ನಡೆಸಿ ಖುಷಿಯಿಂದ ...ನೆಗೆ ಮರಳುತ್ತಿದ್ದ ಅಮಾಯಕನಾಗಿದ್ದ ಎಂಬುದಷ್ಟೇ ...ಲ್ಲ.

ಯಾರಿಗೂ ಉಪದ್ರವ ಕೊಡದ ಅಮಾಯಕ ...ುವಕನೊಬ್ಬನನ್ನು ಆತ ಮುಸ್ಲಿಮನಾಗಿದ್ದ ಹಾಗೂ ಮುಸ್ಲಿಂ ...ದು ಸುಲಭವಾಗಿ ಗುರುತಿಸುವಂತಿದ್ದನೆಂಬ ಏಕೈಕ ...ರಣಕ್ಕೆ ಕೊಲ್ಲಲ್ಪಟ್ಟನೆಂಬುದು ಎಲ್ಲರ ಅಂತಃಸಾಕ್ಷಿಯನ್ನು ...ಕಿದೆ. ಜುನೈದನ ಕೊಲೆಯ ಸಾರಭೂತ ಪರಿಣಾಮಗಳು ...ೇ ಆಗಿದೆ- ಈ ಭಾರತವೆಂಬ ದೇಶದಲ್ಲಿ ಮುಸ್ಲಿಂ ...ದು ಗುರುತಿಸಬಹುದಾದ ಯಾರ ಮೇಲೆ ಆದರೂ ...ಳಿ ನಡೆಸಬಹುದಾಗಿದೆ ಮತ್ತು ಆ ದಾಳಿಗಳು ಪವಿತ್ರ ...ೀವಿನ ಮೇಲಿರುವ ಪ್ರೀತಿಗೆ ದ್ಯೋತಕವಾಗುತ್ತವೆ. ಇವು ... ಜುನೈದನ ಕೊಲೆಯು ಸಾರುತ್ತಿರುವ ಕಳವಳಕಾರಿ ...ದೇಶಗಳಾಗಿವೆ. ಹಸುವಿನ ಹೆಸರಲ್ಲಿ ಈ ರೀತಿ ...ಂಪುದಾಳಿಗಳು ಪ್ರಾರಂಭವಾದಾಗಲೇ, ಈ ವಿದ್ಯಮಾನವು ...ಸುವಿನ ಹೆಸರಲ್ಲಿ ಅಥವಾ ದನದ ಮಾಂಸವನ್ನು ತಿನ್ನುವ ...ಸರಲ್ಲಿ ಯಾವುದೇ ಸಾಕ್ಷ್ಯ ಪುರಾವೆಗಳಿಲ್ಲದೆ ಯಾರನ್ನು ...ಕಾದರೂ ಗುರಿಯಾಗಿಸಿ, ಕೆಣಕಿ, ಕೆರಳಿಸಿ ಕೊನೆಗೆ ...ಂದೂ ಬಿಡುವಂಥ ತಾರ್ಕಿಕ ಅಂತ್ಯಕಾಣುತ್ತದೆಂಬುದನ್ನು ...ಾರು ಬೇಕಾದರೂ ಊಹಿಸಬಹುದಿತ್ತು.

ಜುನೈದನ ಕಗ್ಗೊಲೆಯಲ್ಲಿ ಹಲವು ಪಾಠಗಳಿವೆ. ತನ್ನ ...ೋದರರೊಂದಿಗೆ ಆತನೂ ಕೂಡ ಅಂದು ಯಾವುದೇ ...ರತೀಯ ಮಾಡುವಂತೆ ಹಬ್ಬಕ್ಕಾಗಿ ವಸ್ತುಗಳನ್ನು ಖರೀದಿಸಿ, ...ೀಕಲ್ ಟ್ರೈನ್ ಹತ್ತಿ ತನ್ನ ಪಾಡಿಗೆ ತಾನು ಮನೆಗೆ ...ರಳುತ್ತಿದ್ದ. ಆದರೆ ಅಷ್ಟು ಮಾಡಲು ಕೂಡ ಅವನಿಗೆ ...ಮತಿಯನ್ನು ನಿರಾಕರಿಸಲಾಯಿತು. ತುಂಬಿದ್ದ ಟ್ರೈನು ...ಡಿಯಲ್ಲಿ ಸೀಟಿಗಾಗಿ ನಡೆದ ಸಣ್ಣ ವಾಗ್ವಾದವೊಂದು ...ಡಲೇ ಒಂದು ದ್ವೇಷಪೂರಿತ ಅಪರಾಧವಾಗಿ ...ರಲಾಯಿತು. ಗುಂಪಾದ ಜನ ಜುನೈದ್ ಮತ್ತು ಆತನ ...ೋದರರನ್ನು ದನ ತಿನ್ನುವವರೆಂದು ಹೀಯಾಳಿಸಿದರು, ...ಸ್ತಾನಿಗಳೆಂದು ಜರೆದರು, ಅವರು ತಲೆಯ ಮೇಲೆ ...ಕೊಂಡಿದ್ದ ಟೋಪಿಗಳನ್ನು ಕಿತ್ತೆಸೆದರು, ಒಬ್ಬನ ಗಡ್ಡವನ್ನು ...ಿದು ಎಳೆದಾಡಿದರು. ಕೊನೆಗೆ ಆ ಗುಂಪು ಅವರ ...ಲೆ ದಾಳಿ ಮಾಡುತ್ತಾ ಹೊಡೆದು-ಬಡಿಯಲು ...ರಂಭಿಸಿದರು ಮತ್ತು ಅಂತಿಮವಾಗಿ ಚೂರಿಯಿಂದ ...ದು ಕೊಂದೂ ಬಿಟ್ಟರು.

ಈ ಹಿಂದೆ ಇದೇ ರೀತಿಯ ಗುಂಪುದಾಳಿಗಳನ್ನು ನಡೆಸಿದ್ದ ತಥಾಕಥಿತ ಗೋ ರಕ್ಷಕರಂತೆ, ಈ ಅಪರಾಧದಲ್ಲಿ ಭಾಗವಹಿಸಿದವರು ಯಾವುದೇ ಗುಂಪಿಗೆ ಸೇರಿದ ಸಮಾನ ಮನಸ್ಕರೋ, ಯೋಜಿತ ಉದ್ದೇಶದ ಭಾಗಸ್ಥರೋ ಆಗಿರಲಿಲ್ಲ; ಅವರೆಲ್ಲರೂ ಅಲ್ಲಿಯವರೆಗೆ ಪರಸ್ಪರ ಸಂಬಂಧವಿಲ್ಲದ ಬಿಡಿಬಿಡಿ ವ್ಯಕ್ತಿಗಳಾಗಿದ್ದರು. ಮುಸ್ಲಿಮರ ಬಗ್ಗೆ ಅವರುಗಳು ಪ್ರತ್ಯೇಕ ಪ್ರತ್ಯೇಕವಾಗಿ ಬೆಳೆಸಿಕೊಂಡಿದ್ದ ದ್ವೇಷವೇ ಅವರನ್ನೆಲ್ಲಾ ದಿಢೀರನೇ ಒಂದು ಮಾಡಿತು. ಅದೇರೀತಿ ಆ ಬೋಗಿ ತುಂಬಾ ತುಂಬಿಕೊಂಡಿದ್ದ ಜನರಲ್ಲಿ ಯಾರೊಬ್ಬರೂ ದಾಳಿಕೋರರನ್ನು ತಡೆಯಲು ಅಥವಾ ದಾಳಿಗೊಳಗಾಗುತ್ತಿದ್ದವರನ್ನು ರಕ್ಷಿಸಲು ಮುಂದಾಗಲಿಲ್ಲವೆಂಬುದೂ ಸಹ ಕಣ್ಣಿಗೆ ರಾಚುವಂತೆ ಎದ್ದುಕಾಣುತ್ತದೆ. ಇದಕ್ಕಿಂತ ಹೀನಾಯವಾದ ಸಂಗತಿಯೆಂದರೆ ಜುನೈದ್ ಮತ್ತು ಅವನ





ಸಹೋದರರರನ್ನು ಟ್ರೈನಿನಿಂದ ಪ್ಲಾಟ್‌ಫಾರ್ಮಿನ ಮೇಲೆ ದೂಡಿದ ನಂತರ ಜುನೈದ್ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದರೂ, 200 ಕ್ಕೂ ಹೆಚ್ಚು ಜನರಿದ್ದ ಆ ಬೋಗಿಯಲ್ಲಿ ಯಾರೊಬ್ಬರಿಗೂ ಸಹಾಯಕ್ಕೆ ಮುಂದೆ ಬರಬೇಕೆಂದೆನಿಸಲಿಲ್ಲ. ಆಂಬುಲೆನ್ಸ್‌ಗಾಗಲೀ, ಪೊಲೀಸರಿಗಾಗಲೀ ಕರೆ ಮಾಡಿ ತಿಳಿಸಬೇಕೆಂದೆನಿಸಲಿಲ್ಲ.

ಮತ್ತಷ್ಟು ಜುನೈದ್‌ಗಳು ಬಲಿಯಾಗಬಾರದೆಂದಿದ್ದರೆ ಜನತೆಯಲ್ಲಿ ಬೆಳೆದಿರುವ ಈ ಮೌನಸಮ್ಮತಿ, ಅಪರಾಧದೊಡನೆ ಮೌನ ಸಹಭಾಗಿತ್ವ ಮತ್ತು ಆಳವಾಗಿ ಬಲಿಯುತ್ತಿರುವ ದ್ವೇಷವನ್ನು ಆದಷ್ಟು ಬೇಗ ಹೊಡೆದುರುಳಿಸಬೇಕಿದೆ.

ಜೂನ್ 28ರಂದು 'ನಾಟ್ ಇನ್ ಮೈ ನೇಮ್' (ನನ್ನ ಹೆಸರಲ್ಲಿ ನಾನಿದನ್ನು ಮಾಡಗೊಡುವುದಿಲ್ಲ) ಎಂಬ ಶೀರ್ಷಿಕೆಯಲ್ಲಿ ದೇಶದ ಅಂದಾಜು 12 ಕ್ಕೂ ಹೆಚ್ಚು ಪ್ರದೇಶಗಳಲ್ಲಿ ನಡೆದ ಪ್ರತಿಭಟನೆಗಳು ಈ ಮೌನವನ್ನು ಮುರಿದು ಹಾಕುವ ಉದ್ದೇಶವನ್ನು ಹೊಂದಿತ್ತು. ಊಹಿಸಿದಂತೆ ಇದನ್ನು ನಗರ ಕೇಂದ್ರಿತ, ಉಚ್ಚ ವರ್ಗದ ಮತ್ತು ಪರಿಣಾಮವನ್ನೇನು ಮಾಡದ ಪ್ರತಿಭಟನೆಗಳೆಂದು ಕಡೆಗಣಿಸಲಾಗುತ್ತಿದೆ. ಆದರೆ ಇದರಲ್ಲಿ ಮುಖ್ಯವಾದ ವಿಷಯ ಈ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದವರು ಯಾರು ಎಂಬುದಾಗಲೀ; ಅದರಲ್ಲಿ ಎಷ್ಟು ಜನರಿದ್ದರೆಂಬುದಾಗಲೀ ಅಲ್ಲ. ಬದಲಿಗೆ ಒಂದು ಪ್ರಜಾತಂತ್ರದಲ್ಲಿ ನಾಗರಿಕರು ಯಾವುದೇ ರಾಜಕೀಯ ಪಕ್ಷಗಳ ಬೆಂಬಲವಿಲ್ಲದೆ ಪ್ರತಿಭಟನೆ ಸೂಚಿಸುವಂಥ ಅವಕಾಶಗಳನ್ನು ಸ್ವಪ್ರೇರಣೆಯಿಂದ ನಡೆಸಿದ ಪ್ರತಿಭಟನೆಗಳ ಮೂಲಕ ಮರಳಿ ಗಳಿಸಿಕೊಂಡಿದ್ದಾರೆ ಎಂಬುದೇ ಇಲ್ಲಿ ಗಮನಾರ್ಹವಾದ ಸಂಗತಿಯಾಗಿದೆ. ಈ ಜನರು ಕೇವಲ ಮುಸ್ಲಿಮರನ್ನು ಕೊಂದಾಗ ಮಾತ್ರ ಏಕೆ ಪ್ರತಿಭಟಿಸುತ್ತಾರೆ, ರೈತರನ್ನು ಕೊಂದಾಗ ಇವರೆಲ್ಲಾ ಎಲ್ಲಿದ್ದರು ಅಥವಾ ಕಾಶ್ಮೀರದಲ್ಲಿ ಪೊಲೀಸನೊಬ್ಬನನ್ನು ಇದೇರೀತಿ ಗುಂಪೊಂದು ಕೊಂದುಹಾಕಿದಾಗ ಇವರೆಲ್ಲಾ ಏಕೆ ಪ್ರತಿಭಟಿಸುವುದಿಲ್ಲ ಅಥವಾ ದಲಿತರನ್ನು ಕೊಂದಾಗ ಇವರೇಕೆ ಬರುವುದಿಲ್ಲವೆಂಬ ಪ್ರಶ್ನೆಗಳನ್ನೂ ಕೇಳಲಾಗುತ್ತಿದೆ. ಇಂದಿನ ಸಂದರ್ಭದಲ್ಲಿ ಇಂಥಾ ಎಲ್ಲಾ ಪ್ರಶ್ನೆಗಳೂ ಸರಿಯಾದದ್ದೇ ಆದರೂ, ಇದುವರೆಗೆ ಯಾವ ವಿಷಯಗಳಿಗೂ ತಲೆ ಕೆಡಿಸಿಕೊಳ್ಳದ ವರ್ಗವೊಂದು ಹೊರಬಂದು ಹೋರಾಟಗಳಿಗೆ ಧ್ವನಿಗೂಡಿಸುತ್ತಿದ್ದಾರೆ ಎಂಬುದೂ ಸಹ ಮುಖ್ಯವಾಗಬೇಕು.

ಇದು ಪ್ರತಿರೋಧಗಳ ಪ್ರಾಮುಖ್ಯತೆಯನ್ನೂ, ಭಿನ್ನಾಭಿಪ್ರಾಯಗಳ ಅವಶ್ಯಕತೆಯನ್ನೂ, ಸೌಹಾರ್ದತೆಯ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕಾದ ತುರ್ತನ್ನೂ ಸಾರಿ ಹೇಳುತ್ತಿದೆ.

ನಗರ ಭಾರತದಲ್ಲಿ ಬಾವುಟ-ಭಿತ್ತಿಪತ್ರ ಹಿಡಿದ ಇಂಥಾ ಕೆಲವರು, ಹಿಂದೂ ರಾಷ್ಟ್ರದ ಗುರಿಯನ್ನು ಸಾಧಿಸಲು ದೈತ್ಯ ಬದ್ಧತೆಯಿಂದ ಮುನ್ನುಗ್ಗುತ್ತಿರುವ ಭಾರತೀಯ ಜನತಾ ಪಕ್ಷದ ಮತ್ತು ಸಂಘಪರಿವಾರದ ಮುನ್ನಡೆಯ ಮೇಲೆ ಕಿಂಚಿತ್ತೂ ಪರಿಣಾಮ ಬೀರದಿರುವ ಸಾಧ್ಯತೆಯೇ ಹೆಚ್ಚು. ಆ ನಡೆ ನಿಲ್ಲಬೇಕೆಂದರೆ ಅದಕ್ಕೆ ರಾಜಕೀಯ ಪ್ರತಿರೋಧ ಎದುರಾಗಬೇಕು. ಆದರೆ ಛಿದ್ರಗೊಂಡು ಹತಾಶ ಸ್ಥಿತಿಯಲ್ಲಿರುವ ರಾಜಕೀಯ ಪ್ರತಿರೋಧಿಗಳನ್ನು ನೋಡಿದಾಗ ಅಂಥ ಒಂದು ಪ್ರಬಲ ರಾಜಕೀಯ ಪ್ರತಿರೋಧ ರೂಪುಗೊಳ್ಳುವ ಸಾಧ್ಯತೆ ಸದ್ಯಕ್ಕಂತೂ ಕಾಣುತ್ತಿಲ್ಲ. ಇಂಥಾ ಸಂದರ್ಭದಲ್ಲಿ ದಲಿತ, ರೈತ ಮತ್ತು ಇತರ ಹಕ್ಕುಗಳು ಹರಣಗೊಂಡ ಸಮುದಾಯಗಳ ಹೋರಾಟಗಳು ಅತ್ಯಂತ ಮಹತ್ವದ್ದಾಗಿದ್ದು ಅವುಗಳು ಇನ್ನೂ ಪರಿಣಾಮಕಾರಿಯಾಗ ಬೇಕೆಂದರೆ ಇಂಥಾ ಪ್ರತಿರೋಧಗಳೆಲ್ಲಾ ಇನ್ನೂ ಹತ್ತಿರವಾಗುವ ಅಗತ್ಯವಿದೆ.

ಅದೇನೇ ಇದ್ದರೂ ಪ್ರತಿರೋಧ ಮತ್ತು ಭಿನ್ನಮತಗಳ ಪ್ರಸ್ತುತತೆಯು ಅದರ ಯಶಸ್ವೀ ರಾಜಕೀಯ ಪರಿಣಾಮಗಳನ್ನೇ ಅವಲಂಬಿಸಿಕೊಂಡಿರಬೇಕಿಲ್ಲ. ಪ್ರಜಾತಂತ್ರವಿರಲಿ ಅಥವಾ ಸರ್ವಾಧಿಕಾರವಿರಲಿ ತಮ್ಮ ಧ್ವನಿಯನ್ನು ಸರ್ಕಾರಗಳಿಗೆ ಕೇಳಿಸಲೇಬೇಕೆಂಬ ತಿಳಿವಳಿಕೆಗೆ ಬದ್ಧರಾಗಿ ಜನರು ದಮನಗಳಿಗೂ ಅಂಜದೆ ತಮ್ಮ ಧ್ವನಿಯನ್ನು ಎತ್ತುತ್ತಾರೆ.

ಭಾರತದ ಇಂದಿನ ಸಂದರ್ಭದಲ್ಲಿ ತಾವು ಒಪ್ಪದ ಹಿಂದೂ ಭಾರತದ ಪರಿಕಲ್ಪನೆಯನ್ನು ತಮ್ಮ ಮೇಲೆ ಬಲವಂತವಾಗಿ ಹೇರುವುದರ ವಿರುದ್ಧ ಧ್ವನಿ ಎತ್ತಲು ನಾಗರಿಕರಿಗೆ ಸಾಕಷ್ಟು ಕಾರಣಗಳಿವೆ. ಈ ದೀರ್ಘಕಾಲೀನ ಯೋಜನೆಯನ್ನು ಎಷ್ಟು ವ್ಯವಸ್ಥಿತವಾಗಿ ಜಾರಿ ಮಾಡಲಾಗುತ್ತಿದೆಯೆಂದರೆ ಸಂಘಪರಿವಾರದ ಸದಸ್ಯರಲ್ಲದ ಸಾಮಾನ್ಯ ಹಿಂದೂಗಳೂ ಸಹ ಇತರ ಸಮುದಾಯಗಳ ಅದರಲ್ಲೂ ಮುಸ್ಲಿಮರ ಮೇಲಿನ ದ್ವೇಷಕ್ಕೆ ಸಮ್ಮತಿ ಸೂಚಿಸುವಂತೆ ಮಾಡಲಾಗಿಬಿಡುತ್ತಿದೆ. ಜುನೈದನ ಕೊಲೆಯಲ್ಲಿರುವ ಕಂಗೆಡಿಸುವಂಥ ಅಂಶವು ಇದೇ ಆಗಿದೆ. ಶತ್ರುಗಳೆಂದು ಬಿತ್ತರಿಸಲಾಗಿರುವ ಸಮುದಾಯದ ವಿರುದ್ಧ ಪರಸ್ಪರ ಸಂಬಂಧವೇ ಇಲ್ಲದ ಬಿಡಿವ್ಯಕ್ತಿಗಳು ಸಹ ಒಂದಾಗಿ ದಾಳಿ ನಡೆಸಲು ಯಾವುದೇ ಕ್ಷುಲ್ಲಕ ಕಾರಣಗಳೂ ನೆಪವಾಗಬಹುದು.

ಪ್ರತಿನಿತ್ಯ ಉತ್ತೇಜಿಸಲಾಗುತ್ತಿರುವ ಈ ದ್ವೇಷದ ರಾಜಕೀಯವು ಭಾರತವನ್ನು ಸ್ಫೋಟಕ ಸ್ಥಿತಿಗೆ ದೂಡುತ್ತಿದ್ದು ಕಾನೂನನ್ನು ಪಾಲಿಸುವ ಜನಸಾಮಾನ್ಯರು ತಮ್ಮ ಹಾಗೂ ತಮ್ಮ ಮಕ್ಕಳ ಜೀವದ ಬಗ್ಗೆ ಸದಾ ಆತಂಕ ಪಡುವಂತಾಗಿದೆ. ಈ ಹಿಂದೆ ಸಿಖ್ಖರನ್ನು ಇದೇ ರೀತಿ ಗುರಿಮಾಡಿಕೊಳ್ಳಲಾಗಿತ್ತು. ದಲಿತರನ್ನಂತೂ ಸದಾ ಬಲಿಪಶುಗಳನ್ನಾಗಿಸಲಾಗಿದೆ. ಈಶಾನ್ಯ ಭಾರತೀಯರಂತೂ ತಮ್ಮ ಭಾರತೀಯತೆಯನ್ನು ಸಾಬೀತುಪಡಿಸುತ್ತಾ ದಣಿದು ಹೋಗಿದ್ದಾರೆ. ಕಾಶ್ಮೀರದ ಹೊರಗಿರುವ ಕಾಶ್ಮೀರಿಗಳಂತೂ ತಾವು ಭಯೋತ್ಪಾದಕರಲ್ಲವೆಂದು ಕಡ್ಡಾಯವಾಗಿ ಸಾಬೀತುಪಡಿಸಬೇಕಿದೆ. ಇದೀಗ ಮುಸ್ಲಿಮರನ್ನು ದನದ ಮಾಂಸ ತಿನ್ನುವವರೆಂದು ಗುರಿಮಾಡಿಕೊಳ್ಳಲಾಗಿದೆ.

ಇವೆಲ್ಲವನ್ನು ಪ್ರತಿಭಟಿಸಲೇಬೇಕು. ಜೊತೆಗೆ ಈ ನಿಟ್ಟಿನಲ್ಲಿ ನಡೆಯುವ ಎಲ್ಲಾ ಬಗೆಯ ಪ್ರತಿಭಟನೆಗಳನ್ನೂ ಸ್ವಾಗತಿಸಲೇ ಬೇಕು. ಸಾರ್ವಜನಿಕರ ಭಾವಶೂನ್ಯತೆ ಮತ್ತು ಅಮಾನವೀಯತೆಯನ್ನು ಆಧರಿಸಿಕೊಂಡೇ ನಿರಂಕುಶತೆಯು ಬೆಳೆಯುತ್ತದೆ. ಹಿಂದೂ ರಾಷ್ಟ್ರವನ್ನು ಒಪ್ಪದವರು ಅದನ್ನು ತಡೆಗಟ್ಟಲು ಏನನ್ನೂ ಮಾಡದಿದ್ದರೆ ಹಿಂದೂ ರಾಷ್ಟ್ರ ಅನಿವಾರ್ಯ ಸತ್ಯವಾಗಿಬಿಡುತ್ತದೆ. ■


---

2 ◀◀

...ಧಾರಣ ವ್ಯಕ್ತಿತ್ವವನ್ನು ಗುರುತಿಸಿರುವ ಅಮೆರಿಕ ಆತನಿಗೆ ...ಥಾ ಭವ್ಯ ಸ್ವಾಗತ ನೀಡಿ ಗೌರವಿಸಿದೆ ಎಂಬ ಹೆಮ್ಮೆಯ ...ನೆಯೊಂದನ್ನು ಹಬ್ಬಿಸುವುದಕ್ಕೋಸ್ಕರ "ವೈಟ್‌ಹೌಸ್‌ಗೆ ...ೇಗುತ್ತಿರುವ ಪ್ರಧಾನಿ ಮೋದಿ" ಹೆಸರಿನ ವಿಡಿಯೊ ...ವನ್ನು ಮೋದಿಭಜಕರು ಹರಿಬಿಟ್ಟಿದ್ದಾರೆ. ನೂರಾರು ...ಹನಗಳಿಂದ ಕೂಡಿದ ಈ ಭವ್ಯ ಮೆರವಣಿಗೆಯ ...ೃಶ್ಯವನ್ನು ಲಕ್ಷಾಂತರ ಜನ ವೀಕ್ಷಿಸಿ ಪುಳಕಿತರೂ ...ಗಬಹುದು. ಆದರೆ ಅಸಲಿಗೆ ಇದೊಂದು ನಕಲಿ ...ಡಿಯೊ. 2010ರಲ್ಲಿ ಅಂದಿನ ಅಧ್ಯಕ್ಷ ಒಬಾಮಾ ...ಾಷಿಂಗ್ಟನ್, ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಯಾರೊ ಒಬ್ಬಾತ ತನ್ನ ಹೋಟೆಲ್ ಕೊಠಡಿಯಿಂದ ಚಿತ್ರಿಸಿದ ವಿಡಿಯೊವನ್ನೆ ಮೋದಿ ಸ್ವಾಗತ ವಿಡಿಯೊ ಎಂದು ಬಿಂಬಿಸಿ ಜನರನ್ನು ಬೇಸ್ತು ಬೀಳಿಸಲಾಗಿದೆ!

ಅಮೆರಿಕ ಇರಲಿ ಅಥವಾ ಟಿಂಬಕ್ಟೂ ಇರಲಿ ಎಲ್ಲಾ ಕಡೆಗಳಿಗೂ ಮೋದಿ ತಾನೇ ಖುದ್ದು ಭೇಟಿ ನೀಡುವುದರ ಹಿಂದಿನ ಒಂದು ಮುಖ್ಯ ಉದ್ದೇಶ ತನ್ನ ಇಮೇಜನ್ನು ವೃದ್ಧಿಸುವುದೆ ಆಗಿದೆ. ಭಟ್ಟಂಗಿ ಮಾಧ್ಯಮಗಳ ಸಹಾಯದಿಂದ ಆ ಕಾರ್ಯಕ್ರಮ ಯಶಸ್ವಿಯಾಗಿ ಮುಂದುವರಿಯುತ್ತಲೂ ಇದೆ! ಮೋದಿ, ಟ್ರಂಪ್ ಭೇಟಿಯಿಂದ ಅಸಲಿಗೆ ಭಾರತಕ್ಕೆ ಏನು ಲಾಭವಾಗಿದೆ ಎನ್ನುವುದನ್ನು ಮುಂದಿನ ದಿನಗಳಿ ಹೇಳಲಿವೆ. ■

ಯುದ್ಧ



ನಾ ಮುನ್ನುಗ್ಗುತ್ತಿದ್ದೆ ನನ್ನೊಂದಿಗೆ ಇದ್ದವರೆಲ್ಲ ನನ್ನವರೆ ಎಂದು.


ಎದುರಾಳಿ ಯಾರಾದರೇನು ಎನ್ನುತ್ತಿದ್ದ ನನ್ನೊಂದಿಗೆ ಇದ್ದವರೆಲ್ಲ
ಒಮ್ಮೆಲೆ ಸುಮ್ಮನಾದರು ಹೀಗೇಕೆ ಎಂದು ತಿರುಗಿ ನೋಡಿದರೆ
ಎದುರಾಳಿ ಹಿಂತ್ಯೆಪಿ ಎಂದು ತಿಳಿದವರು ಯಾರೂ ಅಲ್ಲಿ ಇರಲಿಲ್ಲ.

ಕೊನೆಗೂ ಗೊತ್ತಾಯಿತು ನಾವಿನ್ನು ಅರಿತಿಲ್ಲ ನಮ್ಮವರು ಯಾರೆಂದು,
ಮುಂದೆ ಇರುವವರನ್ನು ಎದುರಿಸುವ ಮೊದಲು ಜೊತೆಗಿರುವವರನ್ನು
ತಿಳಿದುಕೊಳ್ಳಬೇಕೆಂದು.

ಅಷ್ಟು ಈಗಲಾದರು ಅರಿವಾಯಿತಲ್ಲ, ಯುದ್ಧ ಸಾರುವ ಮುನ್ನ ಸೈನ್ಯ
ನಮ್ಮನ್ನು ಬೆಂಬಲಿಸುತ್ತದೆ ಎಂಬ ಭ್ರಮೆಯಲ್ಲಿರಬಾರದು ಎಂಬುದು.


ನನಗೀಗ ಅನಿಸುತ್ತಿದೆ ಯುದ್ಧದ ಅನುಭವ ಹೇಳಿದವನಲ್ಲ ಯುದ್ಧ
ಮಾಡಿದ್ದಕ್ಕಿಂತಲು ಕದನ ವಿರಾಮ ಘೋಷಿಸಿದ್ದೇ ಹೆಚ್ಚೆಂದು.

■ ಕೆ.ಪಿ. ಶ್ರೀಪಾಲ್, ವರೀಲರು, ಶಿವಮೊಗ್ಗ



ಕಲ್ಲಡ್ಕನ ಮಿತ್ರ ಕೊಲೆಗಾರ ಭರತ್ ಕುಂಡೇಲ

ದ.ಕ ಜಿಲ್ಲೆಯ ಬಂಟವಾಳದ ಅಶ್ರಫ್ ಕಲಾಯಿಯ ಕೊಲೆ ಆರೋಪಿ ಭರತ್ ಕುಂಡೇಲು ಎಂಬವನು ಕಲ್ಲಡ್ಕ ಪ್ರಭಾಕರ ಭಟ್ಟನೊಂದಿಗೆ ವೇದಿಕೆ ಹಚ್ಚಿಕೊಂಡಿದ್ದ ಫೋಟೋ ಬಹಿರಂಗವಾಗಿ ಅಶ್ರಫ್ ಕೊಲೆಯಲ್ಲಿ ಭಟ್ಟನ ಕೈವಾಡವಿದೆಯೆಂದು ಆರೋಪವೆದ್ದಿದೆ. ವಿವಿಧ ಕ್ರಿಮಿನಲ್ ಕೆಲಸಗಳಲ್ಲಿ ತೊಡಗಿಕೊಂಡಿದ್ದ ಭರತ್ ಕುಂಡೇಲು ಮೇಲೆ ಬೇರೆ ಬೇರೆ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಇದೆಲ್ಲಾ ಗೊತ್ತಿದ್ದೂ ಕೆಲವೇ ದಿನಗಳ ಹಿಂದೆ ನಡೆದ ಸಂಘಿ ಸಭೆಯಲ್ಲಿ ಭರತನಿಗೆ ಕಲ್ಲಡ್ಕ ಭಟ್ಟ ತನ್ನ ವೇದಿಕೆಯ ಮೇಲೆ ಸ್ಥಾನ ಕಲ್ಪಿಸಿದ್ದು ಆ ಕೊಲೆ ಆರೋಪಿ ಕಲ್ಲಡ್ಕನ



ನಿಕಟವರ್ತಿ ಎಂಬುದಕ್ಕೆ ಸಾಕ್ಷಿ. ಆದರೂ ಪಬ್ಲಿಕ್ ಟಾಯ್ಲೆಟ್ ಟಿವಿಯ ಬಾಯಿಬಡುಕಿ ಬಿಜೆಪಿ ಏಜಂಟಳು "ಕೊಲೆ ಆರೋಪಿ ಭರತ್ ಕುಂಡೇಲು ಕಲ್ಲಡ್ಕನ ವೇದಿಕೆಯ ಮೇಲೆ ಇದ್ದರೂ ಕಲ್ಲಡ್ಕನಿಗೆ ಅಪರಿಚಿತನಾಗಿರಬಹುದು" ಎಂದು ವಿತಂಡವಾದ ಮಂಡಿಸುವುದು ಹಾಸ್ಯಾಸ್ಪದವಾಗಿದೆ.

ಮಂತ್ರಿಗಳು ಜನಪ್ರತಿನಿಧಿಗಳಾದ ಕಾರಣ ಅವರು ಸಭೆ ನಡೆಸುವಾಗ ಯಾರು ಬೇಕಾದರೂ ಬಂದು ಸಭೆಯಲ್ಲಿ ಕೂಡಬಹುದು. ಮಂತ್ರಿಗಳೊಂದಿಗೆ ಅನೇಕ ಅಪರಿಚಿತರು ನಿಂತು ಫೋಟೋ ತೆಗೆಸಿಕೊಳ್ಳುತ್ತಾರೆ. ಆದರೆ ಆರೆಸ್ಸೆಸ್ಸಿನಂತಹ ಗುಪ್ತಗಾಮಿನಿ ಕಟ್ಟರವಾದಿ ಸಂಘಟನೆಗಳೊಂದಿಗೆ ಯಾರೂ ಅಪರಿಚಿತರು ಸಂಬಂಧ ಇಟ್ಟುಕೊಳ್ಳಲಾಗುವುದಿಲ್ಲ ಅಥವಾ ಅಪರಿಚಿತರು ಬಂದು ವೇದಿಕೆಯ ಮೇಲೆ ಕುಳಿತುಕೊಳ್ಳಲು ಸಂಘಿ ನೇತಾರರೇ ಬಿಡುವುದಿಲ್ಲ.

ಇದನ್ನು ನಾನು ಒಂದು ಆರೆಸ್ಸೆಸ್ ಸಭೆಯಲ್ಲಿ ಸ್ವತಃ ಕಂಡಿದ್ದೇನೆ. ಆ ದಿನ ಅಪರಿಚಿತನಾಗಿದ್ದ ನನ್ನನ್ನು ಸಭೆಯ ಕೊನೆಯ ಸಾಲಿನ ಮುರುಕು ಕುರ್ಚಿಯಲ್ಲಿ ಕುಳ್ಳಿರಿಸಿದ್ದರು ಹಾಗೂ ನನ್ನ ಮೇಲೆ ಇಬ್ಬರು ಕಣ್ಣಿಟ್ಟಿದ್ದರು. ವೇದಿಕೆಯ ಹತ್ತಿರವೂ ನನ್ನನ್ನು ಸುಳಿಯಲು ಬಿಟ್ಟಿರಲಿಲ್ಲ. ಒಬ್ಬ ವ್ಯಕ್ತಿ ಆರೆಸ್ಸೆಸ್ ನೇತಾರರಿಗೆ ನಿಕಟ ಆಗುವ ಮೊದಲು ಆವನ ಕೌಟುಂಬಿಕ ಹಿನ್ನೆಲೆ ಪರೀಕ್ಷಿಸಿ, ಅವನು ಅನೇಕ ಪರೀಕ್ಷೆಗಳನ್ನು ದಾಟಿ, ಸಂಘಟನೆಗೆ ಅವನ ನಿಷ್ಠೆ ಸಾಬೀತಾದ ಮೇಲೆ ಮಾತ್ರ ಅವನನ್ನು ಆರೆಸ್ಸೆಸ್ಸಿನ ನೇತಾರರು ಹತ್ತಿರ ಬಿಟ್ಟುಕೊಳ್ಳುವುದು.

ಹಾಗಿರುವಾಗ ಭರತ್ ಕುಂಡೇಲು ಎಂಬ ಕೊಲೆ ಆರೋಪಿ ಕಲ್ಲಡ್ಕ ಭಟ್ಟನ ವೇದಿಕೆಯ ಮೇಲೆಯೇ ಕುಳಿತು ಪತ್ರಿಕಾಗೋಷ್ಠಿಯಲ್ಲಿ ಪಾಲ್ಗೊಂಡಿದ್ದು ಅವನು ಅಧಿಕೃತವಾಗಿ ಕಳ್ಳ ಭಟ್ಟನ ಸ್ನೇಹಿತ ಎಂಬುದು ಸಾಬೀತಾಗಿದ್ದರಿಂದ ಸಚಿವ ರಮಾನಾಥ್ ರೈಯವರು ಭಟ್ಟನ ಸಹಿತ ಎಲ್ಲರ ಮೇಲೆ ತನಿಖೆ ನಡೆಸಬೇಕು ಎಂದು ಪೊಲೀಸರಿಗೆ ಆದೇಶ ಕೊಟ್ಟಿರುವುದು ಭಟ್ಟನ ಒಳಗೆ ಮೆಣಸಿನಕಾಯಿ ತೂರಿಸಿದಂತಾಗಿ ಉರಿ ಎದ್ದಿದೆ. ಇದಕ್ಕೆ ಸೇಡು ತೀರಿಸಲು ಕಲ್ಲಡ್ಕ ಭಟ್ಟನು ಸ್ಥಳೀಯ ಮಾಜಿ ಕಾಂಗ್ರೆಸ್ಸಿಗ ಹರಿಕೃಷ್ಣ ಬಂಟವಾಳ ಎಂಬ ಪೆದ್ದಣ್ಣನಿಗೆ ಭಾರಿ ಹಣ ಕೊಟ್ಟು ಅವನಿಂದ ರಮಾನಾಥ್ ರೈ ವಿರುದ್ಧ ಹೇಳಿಕೆ ಕೊಡಿಸಿ "ರೈಯವರು 80 ವರ್ಷದ ಹಿರಿಯ ಕಾಂಗ್ರೆಸ್ಸಿಗ ಜನಾರ್ದನ ಪೂಜಾರಿಯವರಿಗೆ ಅತ್ಯಂತ ಕೀಳು ಭಾಷೆಯಲ್ಲಿ ಬೈದಿದ್ದಾರೆ" ಎಂದು ಸುಳ್ಳು ಹೇಳಿಸಿ ಬಿಲ್ಲವರನ್ನು ರಮಾನಾಥ್ ರೈ ವಿರುದ್ಧ ಎತ್ತಿಕಟ್ಟಲು ಭಟ್ಟ ಪ್ರಯತ್ನಿಸಿದ್ದಾನೆ. ಆದರೆ ಕಳ್ಳಡ್ಕ ಭಟ್ಟ ಮತ್ತು ಹರಿಕೃಷ್ಣ ಬಂಟ್ವಾಳನ ಗಾಢ ಸ್ನೇಹ ಗೊತ್ತಿರುವ ಕರಾವಳಿಯ ಬಿಲ್ಲವರು ಮಾತ್ರ ಕಲ್ಲಡ್ಕ ತೋಡಿರುವ ಖೆಡ್ಡಾಕ್ಕೆ ಬೀಳಲಿಲ್ಲ.

- ಅನಿಲ್ ಕುಮಾರ್ ಪೂಜಾರಿ, ಮಂಗಳೂರು

ಕೇಸರಿ ಟ್ರೋಲ್‌ಗಳ ಕಾರ್ಯವೈಖರಿ

ಕೇಸರಿ ಟ್ರೋಲ್‌ಗಳು ತಮ್ಮ ಧಣಿಗಳಾದ ಸಂಘ ಪರಿವಾರದ ಆದೇಶದಂತೆ ತಮಗಾಗದವರನ್ನು ಹೇಗೆ ಕೊಳಕು ಭಾಷೆಯಲ್ಲಿ ನಿಂದಿಸುತ್ತಾರೆ ಎಂದು ಅರಿಯ ಬೇಕಾದರೆ ಪೇಜಾವರ ಶ್ರೀಗಳನ್ನು ಕೇಳಿ ನೋಡಿ. ಮೊನ್ನೆ ಮೊನ್ನೆಯವರೆಗೆ ಪೇಜಾವರ ಶ್ರೀಗಳು ಸಂಘೀ ಟ್ರೋಲ್‌ಗಳ 'ಕಣ್ಮಣಿ' ಆಗಿದ್ದರು. ಆದರೆ ಅವರು ಕೆಲದಿನಗಳ ಹಿಂದೆ ಮುಸ್ಲಿಮರಿಗಾಗಿ ಉಡುಪಿ ಮಠದ ಆವರಣದಲ್ಲಿ ಒಂದು ಸೌಹಾರ್ದ ಇಫ್ತಾರ್ ಕೂಟ ಆಯೋಜಿಸಿದ ತಕ್ಷಣ ಕೇಸರಿ ಟ್ರೋಲ್‌ಗಳು ಪೇಜಾವರ ಶ್ರೀಗಳ ಮೇಲೆ ಮುಗಿಬಿದ್ದು ಅವರು 85 ವರ್ಷದ ಹಿರಿಯ ಹಿಂದೂ ಸ್ವಾಮೀಜಿ ಎಂಬುದನ್ನೂ ಲೆಕ್ಕಿಸದೇ ಅತ್ಯಂತ ಕೊಳಕು ಭಾಷೆಯಲ್ಲಿ 'ಏಕವಚನದಲ್ಲಿ' ಸ್ವಾಮೀಜಿಗಳನ್ನು ನಿಂದಿಸುತ್ತಾ ಟ್ರೋಲ್ ಮಾಡುತ್ತಿದ್ದಾರೆ ಪಾಪ. ಇದರಿಂದ ಕೇಸರಿ ಟ್ರೋಲ್‌ಗಳ ನಿಜರೂಪ ಮತ್ತು ಅವರ ಹಿಂದಿರುವ ನೀಚ ಸಂಘಿ ನೇತಾರರ ಕರಾಳ ಬುದ್ಧಿ ಜನರಿಗೆ ಅರ್ಥವಾಗಬಹುದು.




'ವಾರ್ತಾ ಭಾರತಿ' ಎಂಬ ಕನ್ನಡ ದಿನಪತ್ರಿಕೆಯ ಫೇಸ್ಬುಕ್ ಪೇಜನ್ನು ಕೇಸರಿ ಪಡೆಗಳು ಟ್ರೋಲ್ ಮಾಡಿ ಆ ಪತ್ರಿಕೆಯ ಫೇಸ್ಬುಕ್ ಪೇಜನ್ನು ಅಮಾನತ್ತಿನಲ್ಲಿ ಇಡಲು ಒತ್ತಡ ಹೇರಿ ಕತ್ತು ಹಿಸುಕಲು ಪ್ರಯತ್ನಿಸಿದ್ದನ್ನು ಎನ್‌ಡಿಟಿವಿಯ ಹಿರಿಯ ಸಂಪಾದಕ ರವೀಶ್ ಕುಮಾರ್ ದಿಲ್ಲಿಯಲ್ಲಿ ಬಹಿರಂಗಪಡಿಸಿದ್ದಾರೆ (ಯೂಟ್ಯೂಬಿನಲ್ಲಿ ರವೀಶ್ ಕುಮಾರರ ಭಾಷಣದ ವಿಡಿಯೋ ಲಭ್ಯವಿದೆ). ಕರ್ನಾಟಕದಲ್ಲಿ ಪ್ರಜಾವಾಣಿ ಮತ್ತು ವಾರ್ತಾ ಭಾರತಿ ಈ ಎರಡೇ ದಿನಪತ್ರಿಕೆಗಳು ಈವರೆಗೆ ಬಿಜೆಪಿಯ ಮುಖವಾಣಿ ಆಗಲು ನಿರಾಕರಿಸಿರುವುದು. ಬಿಜೆಪಿ ಹಾಗೂ ಸಂಘ ಪರಿವಾರದ ಮುಖವಾಣಿ ಆಗಲು ನಿರಾಕರಿಸಿದ ಪತ್ರಿಕೆಗಳ ಕತ್ತು ಹಿಸುಕಲು ಬಿಜೆಪಿ ಐಟಿ ಸೆಲ್‌ನವರು ತಮ್ಮ ಕೇಸರಿ ಟ್ರೋಲ್ ಪಡೆಯನ್ನು ದೊಡ್ಡಮಟ್ಟದಲ್ಲಿ ಅಣಿಗೊಳಿಸಿರುವ ಸುದ್ದಿಯಿದೆ. ಆದರೆ ಇಂತಹ ದುರುದ್ದೇಶದ ಟ್ರೋಲ್ ಮಾಡುವುದರಿಂದಾಗಿ ನಿಷ್ಠುರ ಹಾಗೂ ಸ್ವತಂತ್ರ ತತ್ವ ನಿಷ್ಠೆಯುಳ್ಳ ನಿಷ್ಪಕ್ಷ ಪತ್ರಿಕೆಗಳ ಬಗ್ಗೆ ಜನರ ಆಸಕ್ತಿ ಕೆರಳಿ ಓದುಗರ ಸಂಖ್ಯೆ ತನ್ನಿಂದ ತಾನೇ ಹೆಚ್ಚಾಗುತ್ತಿದೆ ಎಂಬುದು ಬೇರೆ ವಿಷಯ. ಈಗ ಮಂಗಳೂರಿನಲ್ಲಿ ವಾರ್ತಾ ಭಾರತಿ ಉದಯವಾಣಿಗೆ ನೇರ ಸ್ಪರ್ಧೆ ಕೊಟ್ಟು ಪ್ರಥಮ ಸ್ಥಾನದಲ್ಲಿದೆ (ಡಿಎವಿಪಿ ದಾಖಲೆಗಳ ಪ್ರಕಾರ).

ಮುಂದಿನ ವಿಧಾನಸಭಾ ಚುನಾವಣೆಗೆ ಸಿದ್ಧತೆ ನಡೆಸುತ್ತಿರುವ ರಾಜ್ಯ ಬಿಜೆಪಿ ಸಾಮಾಜಿಕ ತಾಣಗಳಲ್ಲಿ ತಮ್ಮ ಅಭ್ಯರ್ಥಿಗಳ ಪರ ಪ್ರಚಾರ ಮಾಡಲು ಮತ್ತು ವಿರೋಧಿಗಳನ್ನು ಹಣಿಯಲು ಈಗಾಗಲೇ ಇಪ್ಪತ್ತು ಸಾವಿರ ಬಿಜೆಪಿ ಕಾರ್ಯಕರ್ತರಿಗೆ ತರಬೇತಿ ನೀಡಿದೆ. ಪ್ರಚಾರ ಕಾರ್ಯಕ್ಕಾಗಿ 5,000 ವಾಟ್ಸಾಪ್ ಗ್ರೂಪ್‌ಗಳನ್ನು ಮಾಡಿ ಅದರಲ್ಲಿ ಬಿಜೆಪಿ ಅಭ್ಯರ್ಥಿಗಳ ಪ್ರಚಾರ ಹೇಗೆ ಮಾಡುವುದು ಎಂಬುದರ ಬಗ್ಗೆ ಕಾರ್ಯಕರ್ತರಿಗೆ ಆರು ತಿಂಗಳ ತರಬೇತಿ ನೀಡಲಾಗಿದೆ. 2007 ರಲ್ಲಿ ಆರಂಭವಾದ ಬಿಜೆಪಿ... ಸೆಲ್ 2018 ರ ಕರ್ನಾಟಕ ವಿಧಾನಸಭಾ ಚುನಾವ... ವಾಟ್ಸಾಪ್ ಗ್ರೂಪ್ ಮೂಲಕ ಚುನಾವಣಾ ಪ್ರ... ಒತ್ತು ನೀಡಲಿದೆ ಎಂದು ಬಿಜೆಪಿ ಸೋಷಿಯಲ್ ಮೀ... ಸೆಲ್ ಮುಖ್ಯಸ್ಥ ಬಾಲಾಜಿ ಶ್ರೀನಿವಾಸ್ ಹೇಳಿರುವ... ಎನ್‌ಡಿಟಿವಿ ವರದಿ ಮಾಡಿದೆ. ಈ ಇಪ್ಪತ್ತು ... ಕೇಸರಿ ಹುಡುಗರೆಲ್ಲಾ ತಲೆತಿರುಕ ಗಾಂಜಾದಾಸರೆಂಬ ... ಮಾತ್ರ ಬಿಜೆಪಿ ಐಟಿ ಸೆಲ್ಲಿನವರು ಬಿಟ್ಟುಕೊಟ್ಟಿಲ್ಲ. ಯ... ಬಿಜೆಪಿ ಮತ್ತು ಸಂಘ ಪರಿವಾರ ಟಾರ್ಗೆಟ್ ಮಾಡು... ಆದೇಶ ಕೊಡುತ್ತದೋ ಅವರನ್ನೇ ಟ್ರೋಲ್ ಮಾಡು... ಈ ಇಪ್ಪತ್ತು ಸಾವಿರ ಕೇಸರಿ ಟ್ರೋಲ್‌ಗಳ ... ಹಾಗಿರುವಾಗ ಮುಂಬರುವ ದಿನಗಳಲ್ಲಿ ಕರ್ನಾ... ಆನ್‌ಲೈನ್ ಪತ್ರಿಕೆಗಳಲ್ಲಿ ಹಾಗೂ ಆ ಪತ್ರಿಕೆಗಳ ಫೇ... ಪೇಜುಗಳಲ್ಲಿ ಎಂತೆಂತಹ ತಲೆಕೆಟ್ಟವರು ಕಾಮೆ... ಹಾಕಬಹುದು ಹಾಗೂ ಎಷ್ಟು ಕೊಳಕು ... ಉಪಯೋಗಿಸಬಹುದು ಎಂದು ಊಹಿಸಲು ಕಷ್ಟವಾ... ಈ ಎಲ್ಲ ಕೇಸರಿ ಟ್ರೋಲ್‌ಗಳಿಗೆ ನಿಯಮಿತ ಸಂಬಳವ... ಅವರು ಹಾಕಿದ ಪ್ರತಿ ಕಾಮೆಂಟುಗಳನ್ನು ಆಧರಿಸಿ ... ಇನ್ಸೆಂಟಿವ್ ರೂಪದಲ್ಲಿ ಹೆಚ್ಚಿನ ಸಂಭಾವನೆಯೂ ಉ... ಇವರೆಲ್ಲಾ 'ವರ್ಕ್ ಫ್ರಮ್ ಹೋಂ' ಆಧಾರದಲ್ಲಿ ... ದಿನ ಸಾಮಾಜಿಕ ಜಾಲತಾಣಗಳನ್ನು ಜಾಲಾಡಿ ಟ್ರೋ... ಮಾಡಿ ಅಥವಾ ಕಾಮೆಂಟ್ ಹಾಕುವ ಕೆಲಸ ... ತಮ್ಮ ಕುಟುಂಬದ ಉದರ ನಿರ್ವಹಣೆ ಮಾಡುತ್ತಿರು... ಇಲ್ಲಿಯೇ ಮುಲ್ಕಿ ಎಂಬಲ್ಲಿರುವ ನನ್ನ ಪರಿಚಯಸ್ಥ... ಸಾಧಾರಣ ಪದವೀಧರನಾಗಿದ್ದರೂ ತಾನು ಸಾಫ್ಟ್... ಇಂಜಿಯರ್ ಎಂದು ಸುಳ್ಳು ಹೇಳುತ್ತಾನೆ. ಆದರೆ ... ದ್ಯೋಗಿಯಾಗಿರುವ ಅವನು ಸ್ಥಳೀಯ ಆನ್‌ಲೈನ್ ... ಗಳಲ್ಲಿ ಕಾಮೆಂಟ್ ಹಾಕಿ ಅಥವಾ ಸಂಪಾದಕರಿಗೆ ... ಬರೆದು ಬಿಜೆಪಿ ಸೆಲ್ಲಿನಿಂದ ತಿಂಗಳಿಗೆ ಕನಿಷ್ಠ ಹತ್ತು ... ಗಳಿಸುತ್ತಾನೆ ಎಂದು ಅವನೇ ನನ್ನ ಹತ್ತಿರ ಹೇಳಿ...

- ಆರ್. ಬಿ. ಶೆಣೈ, ಮಂಗಳ...

ಪೇಜಾವರ ಎಂಬೋ ಕಾವಿ ನಾಜೂಕಯ್ಯ


ಭಾರೀ ಸುದ್ದಿಯಾಗುತ್ತಿರುವ ಉಡುಪಿ ಇ... ಕೂಟದ ಕುರಿತಾಗಿ ಕೆಲವಾರು ಚರ್ಚೆ ಹಾಗು ಲೇಖನ... ಗಮನಿಸಿದ್ದೇನೆ. ಈ ಸೌಹಾರ್ದಕೂಟ... ವಿರೋಧಿಸುತ್ತಿರುವ ಬೆಂಕಿನವಾಬ ಮುತಾಲಿಕ... ದ್ವೇಷಿಸುವ ಭರದಲ್ಲಿ ಕೆಲವರಂತೂ ಪೇಜಾವರ... ರಾಜಾರಾಮ್ ಮೋಹನ್ ರಾಯರ ಲೆವೆಲ್ಲಿಗೆ ಕೊಂಡ...



'ಪ್ರಮಾದ ಮೂತ್ರಲಿಕ್'ಗೆ ಲಂಗುಲಗಾಮು ಹಾಕುವವರ್‍ಯಾರು?

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪೇಜಾವರ ಶ್ರೀಗಳಿಗೆ ದೂರವಾಣಿ ಕರೆ ಮಾಡಿ, ಉಡುಪಿ ಮಠದಲ್ಲಿ ಮುಸ್ಲಿಮರಿಗಾಗಿ ಇಫ್ತಾರ್ ಕೂಟ ಆಯೋಜಿಸಿದ್ದಕ್ಕೆ ಮೆಚ್ಚುಗೆ ಸೂಚಿಸಿ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಉಡುಪಿ ಮಠದ ಮೂಲಗಳೇ ತಿಳಿಸಿವೆ. ಸಿದ್ದು ಫೋನ್ ಕರೆ ಮಾಡಿದ್ದರೋ ಇಲ್ಲವೋ ಅದು ಖಾತ್ರಿಯಾಗಿಲ್ಲ, ಆದರೂ ಯಾವುದೇ ಮಠದವರು ಒಳ್ಳೆಯ ಕೆಲಸ ಮಾಡಿದರೆ ಸಿದ್ದರಾಮಯ್ಯನವರು ಯಾವಾಗಲೂ ಬೆಂಬಲ ಕೊಡುತ್ತಾರೆ ಎಂಬುದು ಸತ್ಯವಾಯಿತು. ಕೇವಲ ಸಿದ್ದುರವರು ರಾಷ್ಟ್ರಪತಿಯ ಹಿಂಬಾಲವಾಗಿ ಬಂದು ಪೇಜಾವರರ ಕಾಲಿಗೆ ಬೀಳಲಿಲ್ಲ ವೆಂದು ಅವರನ್ನು 'ಅಹಂಕಾರಿ' ಎಂದು ಕರೆದವರು ಈಗ ಪೆಚ್ಚಾಗಿರಬಹುದು. ರಾಜಕೀಯ ನೇತಾರರು ಮಠಾಧೀಶರ ಕಾಲಿಗೆ ಬೀಳುವುದಕ್ಕಿಂತ ಹೆಚ್ಚು ಮುಖ್ಯವಾದದ್ದು ಮಠಾಧೀಶರು ಮಾಡುವ ಉತ್ತಮ ಕಾರ್ಯಗಳಿಗೆ ನೈತಿಕ ಬೆಂಬಲ ಕೊಡುವುದು. ಮುಖ್ಯಮಂತ್ರಿ ಮಠಾಧೀಶರ ಕಾಲಿಗೆ ಬಿದ್ದರೆ ಸಮಾಜಕ್ಕೆ ಏನೂ ಒಳ್ಳೆಯದಾಗುವುದಿಲ್ಲ ಅಥವಾ ಮುಖ್ಯಮಂತ್ರಿಗಳಿಗೂ ವೈಯಕ್ತಿಕವಾಗಿ ಏನೂ ಒಳ್ಳೆಯದಾಗುವುದಿಲ್ಲ, ಕೇವಲ ಮಠಾಧೀಶರ 'ಇಗೋ' ಮಾತ್ರ ಉಬ್ಬುತ್ತದೆ ಅಷ್ಟೇ. ಜತೆಗೆ ಮಠಕ್ಕೆ ಪುಕ್ಕಟೆ ಪ್ರಚಾರ ಸಿಗುತ್ತದೆ. ಆದರೆ ಮಠಾಧೀಶರಿಗೆ ಸಮಾಜಕ್ಕಾಗಿ ಒಳ್ಳೆಯ ಕೆಲಸ ಮಾಡಲು ಪ್ರೇರೇಪಿಸಿದರೆ ಅದರಿಂದ ಸಮಾಜಕ್ಕೆ ಮತ್ತು ಸಾಮಾನ್ಯ ಜನರಿಗೆ ನಿಜಕ್ಕೂ ಒಳ್ಳೆಯದಾಗುತ್ತದೆ. ಮುಖ್ಯಮಂತ್ರಿಯ ಕೆಲಸದಲ್ಲಿ ಯಾವಾಗಲೂ ತಪ್ಪು ಹುಡುಕುವ ಕೇಸರಿ ಪಡೆಗಳು ಇದನ್ನು ಅರ್ಥ ಮಾಡಿಕೊಂಡರೆ ಒಳಿತು.

ದೇವರ ಸೇವೆಗಿಂತ ಮಾನವ ಸೇವೆಯೇ ಹೆಚ್ಚು ಮುಖ್ಯ ಎಂದು ಸ್ವಾಮಿ ವಿವೇಕಾನಂದರೇ ಹೇಳಿರುವರು. ದೇವರ ಮೂರ್ತಿ ಸ್ವಚ್ಛ ಮಾಡುವ ಅರ್ಚಕ-ಮಠಾಧೀಶನಿಗಿಂತ



ಬೀದಿ ಸ್ವಚ್ಛ ಮಾಡುವ ದಲಿತನ ಕೆಲಸವೇ ಹೆಚ್ಚು ಪವಿತ್ರವಾದದ್ದು ಎಂದು ಸಹ ವಿವೇಕಾನಂದರು ಹೇಳಿರುವರು. ವಿವೇಕಾನಂದರನ್ನು ಹೈಜಾಕ್ ಮಾಡಿದ ಸಂಘಿಗಳು ಇದನ್ನು ಎಂದಾದರೂ ಅರ್ಥ ಮಾಡಿಕೊಂಡಿದ್ದಾರೆಯೇ?

ಪೇಜಾವರರ ಇಫ್ತಾರಿನಿಂದಾಗಿ ಹಿಂದೂ ಸಮಾಜಕ್ಕೆ ಅವಮಾನ ಎಂದು ಮುತಾಲಿಕ್ ಹೇಳಿದ್ದು ಸರಿಯಲ್ಲ. ನಿಜವಾಗಿ ಈ 'ಪ್ರಮಾದ ಮೂತ್ರಲಿಕ್'ನಿಂದಾಗಿ ಮಾನವತೆಗೇ ಘೋರ ಅವಮಾನವಾಗಿದೆ. ಧಾರವಾಡದ ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದಿರುವವನಂತೆ ಮಾತನಾಡುವ ಈ ಮೂತ್ರಾಲಿಕ್ ಉಡುಪಿ ಮಂಗಳೂರಿಗೆ ಆಗಾಗ ಬಂದು ಇಲ್ಲಿಯ ರಾಮಸೇನೆ ಗೂಂಡಾಗಳು ವಸೂಲು ಮಾಡಿದ ಹಫ್ತಾದಲ್ಲಿ ತನ್ನ ಪಾಲು ತೆಗೆದುಕೊಂಡು ಹೋಗುವಾಗ ಏನಾದರೊಂದು ಅನಾಹುತಕಾರಿ ಹೇಳಿಕೆ ಕೊಟ್ಟು ಹೋಗುತ್ತಾನೆ. ಇನ್ನೊಮ್ಮೆ ಉಡುಪಿ ದೇವಸ್ಥಾನದೊಳಗೆ ಗೋಮಾಂಸ ತಿನ್ನುವವರನ್ನು ಬರಲು ಬಿಟ್ಟರೆ ಉಡುಪಿಯಲ್ಲಿ ರಕ್ತಪಾತ ಮಾಡುವುದಾಗಿಯೂ ಈತ ಹೇಳಿದ್ದಾನೆ. ಇವನು ಭಾರತದಲ್ಲೂ ಸೊಮಾಲಿಯಾದಂತೆ 'ಸಿವಿಲ್ ವಾರ್' ಅರ್ಥಾತ್ 'ಆಂತರಿಕ ಗೃಹ ಯುದ್ಧ' ಮಾಡಿಸಿ ಅನ್ಯಧರ್ಮೀಯರನ್ನು ದೇಶ ಬಿಟ್ಟು ಓಡಿಸುವ ಯೋಜನೆ ಹೊಂದಿರುವುದಾಗಿಯೂ, ಅದಕ್ಕಾಗಿ ಎಲ್ಲಾ ಹಿಂದೂಗಳು ತಮ್ಮ ಮನೆಯಲ್ಲಿ ಎಲ್ಲಾ ತರಹದ ಆಯುಧಗಳನ್ನು ಇಟ್ಟುಕೊಳ್ಳಬೇಕು ಹಾಗೂ ಹಿಂದೂ ಹುಡುಗಿಯರಿಗೂ ಸಶಸ್ತ್ರ ಹೊಡೆದಾಟದಲ್ಲಿ ತರಬೇತಿ ಕೊಡಬೇಕು ಎಂದು ಕಳೆದ ವಾರವೇ ಕಾರ್ಕಳದಲ್ಲಿ ಸ್ವತಃ ಮೂತ್ರಾಲಿಕನೇ ಬಹಿರಂಗ ಹೇಳಿಕೆ ಕೊಟ್ಟಿದ್ದಾನೆ. ಆದರೂ ಉಡುಪಿ ಪೊಲೀಸರು ಸುಮ್ಮನಿದ್ದಾರೆ.

ಗೃಹ ಯುದ್ಧದ ಬಗ್ಗೆ ಮಾತನಾಡುವುದು ಕಾನೂನಿನ ದೃಷ್ಟಿಯಲ್ಲಿ ಅತಿದೊಡ್ಡ ದೇಶದ್ರೋಹ ಎಂದು ಕರ್ನಾಟಕ ಪೊಲೀಸರಿಗೂ ಗೊತ್ತಿಲ್ಲದಿರುವುದು ಖೇದಕರ. ಹರ್ಯಾಣದಲ್ಲಿ ಬಿಜೆಪಿ ಸರಕಾರವೇ ಇದ್ದರೂ ಇತ್ತೀಚೆಗೆ ಅಲ್ಲಿಯ ಒಬ್ಬ ಬಿಜೆಪಿ ಶಾಸಕ ಹೀಗೆ ಕೋಮು ಪ್ರಚೋದಕ ಹೇಳಿಕೆ ಕೊಟ್ಟಿದ್ದಕ್ಕಾಗಿ ಅಲ್ಲಿಯ ಹೈಕೋರ್ಟಿನಲ್ಲಿ ಒಬ್ಬರು ಖಾಸಗಿ ಕೇಸ್ ದಾಖಲಿಸಿದ್ದರಿಂದ ಆ ಬಿಜೆಪಿ ಶಾಸಕನನ್ನು ತಕ್ಷಣ ಬಂಧಿಸಿ ಆತನ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಸ್ವತಃ ಹರಿಯಾಣ ಹೈಕೋರ್ಟ್ ಪೊಲೀಸರಿಗೆ ಆದೇಶ ಕೊಟ್ಟಿದೆ. ಆದರೆ ಕರ್ನಾಟಕದಲ್ಲಿ ಯಾರು ಎಷ್ಟೇ ಕೋಮು ಪ್ರಚೋದಕ ಹೇಳಿಕೆ ಕೊಟ್ಟರೂ ಅವರಿಗೆ ಕಾನೂನಿನ ಯಾವುದೇ ಭಯವಿಲ್ಲ.

ಕಲ್ಲಡ್ಕ ಭಟ್ಟ ದಿನನಿತ್ಯ ಮುಸ್ಲಿಮರ ವಿರುದ್ಧ ವಿಷ ಕಾರುತ್ತಾ ಬಿಲ್ಲವ-ಬಂಟ ರೌಡಿಗಳನ್ನು ಮುಸ್ಲಿಮರ ವಿರುದ್ಧ ಛೂಬಿಟ್ಟು ರಕ್ತ ಹರಿಸುತ್ತಾ ಇದ್ದಾನೆ.

- ಹರೀಶ್ ಎಂ ರೈ, ಉಡುಪಿ

ಬಿಂಬಿಸುತ್ತಿದ್ದಾರೆ. ಪೇಜಾವರರದ್ದು ಸ್ವಾಗತಾರ್ಹ ನಡೆ ಆದನ್ನು ಅಥವ ಅಂತಹದನ್ನು ವಿರೋಧಿಸುವುದಾಗಲೀ ಟೀಕಿಸುವುದಾಗಲೀ ತಪ್ಪು ಎಂಬ ಅಭಿಪ್ರಾಯವನ್ನು ಕೆಲವರು ಅರಿವಿಲ್ಲದೆಯೇ ಮತ್ತು ಕೆಲವರು ಉದ್ದೇಶಪೂರ್ವಕವಾಗಿಯೇ ಗಟ್ಟಿಗೊಳಿಸಲು ಹೆಣಗುತ್ತಿರುವುದಂತೂ ಸತ್ಯ.

ಒಂದುವೇಳೆ ಯಾರದ್ದೋ ಪರ್ಯಾಯ ಅಧಿಕಾರಾವಧಿಯಲ್ಲಿ ಪ್ರಭಾವಿ ಎನಿಸಿದ ಕಾಂಗ್ರೆಸ್ ಶಾಸಕನೊಬ್ಬ ಪಾಲಿ ಪರ್ಯಾಯ ಸ್ವಾಮಿಯನ್ನು ಒತ್ತಾಯಪೂರ್ವಕವಾಗಿಯೋ ಇಲ್ಲಾ ಮುಲಾಜಿಗೊಳಪಡಿಸಿಯೋ ಇದೇರೀತಿ ಹೇಗೋ ಉಡುಪಿ ಮಠದೊಳಗೆ ಇದೇ ರೀತಿ ಸೌಹಾರ್ದಕ್ಕಾಗಿಯೇ ಇಫ್ತಾರ್ ಕೂಟ ಆಯೋಜಿಸಿದ ಎಂದಿಟ್ಟುಕೊಳ್ಳೋಣ. ಆವಾಗ ಪೇಜಾವರರ ಪ್ರತಿಕ್ರಿಯೆ ಹೇಗಿರುತ್ತಿತ್ತು? ನನ್ನ ಕಾರು ಚಾಲಕನೂ ಮುಸಲ್ಮಾನ, ಉಡುಪಿ ಮಠಕ್ಕೆ ಮುತ್ತಿಗೆಯನ್ನು ಮೊದಲು ವಿರೋಧಿಸಿ ಬೆಂಬಲ ನೀಡಿದ್ದೇ ಮುಸಲ್ಮಾನರು, ಮಧ್ವಾಚಾರ್ಯರಿಗೆ ಮುಸಲ್ಮಾನ ದೊರೆಗಳ ಸ್ನೇಹವಿತ್ತು, ರಾಘವೇಂದ್ರ ಸ್ವಾಮಿಗಳಿಗೆ ಮುಸಲ್ಮಾನರು ಜಾಗ ಕೊಟ್ಟಿದ್ದರು... ಎಂಬಂತಹ ಮುಸಲ್ಮಾನ ಪರ ಹೇಳಿಕೆಗಳು ಆಗಲೂ ಅವರಿಂದ ಹೊರಬರುತಿತ್ತೇ?

ಪೇಜಾವರರ ಸ್ವಘೋಷಿತ "ಸೌಹಾರ್ದ" ಇಫ್ತಾರ್ ನಡೆಯ ಬಗ್ಗೆ ಅಪಸ್ವರ ಎತ್ತುವವರನ್ನು ತಕ್ಷಣವೇ "ನಿಮ್ಮದು ಬಿಡಲಾಗದಂತಹ ಪೂರ್ವಾಗ್ರಹ ಪೀಡಿತ ಮನಸ್ಸು" ಎನ್ನುವವರಿದ್ದಾರೆ. ಇದ್ದರೂ ಇರಬಹುದು ಆದರೆ, ಇದು ಧರ್ಮದೊಳಗಿನ ಅಪನಂಬಿಕೆಗಳನ್ನು ತೊಡೆಯುವಂತಹ ಕಾರ್ಯ ಎನ್ನುವ ಪೇಜಾವರರ ಮಾತಿನ ಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳಲು ಈ ಕೆಲ ಪ್ರಶ್ನೆಗಳು ಬೇಡವೆಂದರೂ ಎದುರಾಗಿ ಅಡ್ಡಿಪಡಿಸುತ್ತವೆ.

ಇಪ್ಪತ್ತೈದು ವರ್ಷಗಳ ಹಿಂದೆ ರಾಮ ಜನ್ಮಭೂಮಿ ಹೆಸರಿನಲ್ಲಿ ಇಡೀ ದೇಶಾದ್ಯಂತ ಹಿಂದೂ ಮುಸಲ್ಮಾನರ ನಡುವೆ ಭೇದ ತಂದಿಟ್ಟ, ಪೇಜಾವರ ಮುಖಂಡತ್ವವನ್ನೂ ಹೊಂದಿದ್ದ ವಿಎಚ್‌ಪಿ, ಸಂಘಪರಿವಾರದ ನಡೆಗೆ ದೇಶದ ಸ್ವಾತಂತ್ರ್ಯೋತ್ತರ ಇತಿಹಾಸದಲ್ಲಿ ಮಹತ್ವದ ಸ್ಥಾನವಿದೆ. ಮೊನ್ನಿನ ಇಫ್ತಾರ್ ಕೂಟದಲ್ಲಿ ಸ್ವಾಮಿಗಳು "ನಾನು ಮಸೀದಿಯ ಗೋಡೆಯೇರಿ ಮೈಕ್ ಹಿಡಿದು ಮಸೀದಿ ಕೆಡವುತ್ತಿದ್ದ ಜನರನ್ನು ಶಕ್ತಿ ಮೀರಿ ತಡೆದಿದ್ದೆ" ಎಂದಿದ್ದಾರೆ. ಹಿಂದಿ ಗೊತ್ತಿಲ್ಲದ ಪೇಜಾವರರು (ಮೊನ್ನೆ ಸಾಕ್ಷಿ ಮಹಾರಾಜನ ವಿವಾದಾತ್ಮಕ ಮಾತಿನಿಂದ ಜಾರಿಕೊಳ್ಳಲು ಹಿಂದಿ ಗೊತ್ತಿಲ್ಲದ ತನಗೆ ಅವರ ಮಾತು ಸರಿಯಾಗಿ ಅರ್ಥವಾಗಿಲ್ಲವೆಂದು ಮಾಧ್ಯಮದೆದುರು ಇವರೇ ಹೇಳಿದ್ದರು) ಮಸೀದಿಯೊಳಗಿದ್ದ ಗುಂಪಿಗೆ ಅರ್ಥವಾಗದ ಭಾಷೆಯಲ್ಲಿ ತಡೆಯಲು ಹೇಳಿದರೆಷ್ಟು ಬಿಟ್ಟರೆಷ್ಟು? ತಾವು ಈ ಬಗ್ಗೆ ನಿಜಕ್ಕೂ ಪ್ರಾಮಾಣಿಕರಾಗಿದ್ದರೆ ಉದ್ರಿಕ್ತ (ದೇಶಾದ್ಯಂತ ವ್ಯವಸ್ಥಿತ ತಯಾರಿಗಳನ್ನು ನಡೆಸಿ ಹೊರಟಂತಹ) ಗುಂಪು ಮಸೀದಿಯೊಳಗೆ ಹೋಗುವ ಮುನ್ನವೇ ಈ ವಿರೋಧದ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ಕಟುವಾಗಿ ವ್ಯಕ್ತಪಡಿಸಿ ತಡೆಯಬೇಕಿತ್ತೇ ವಿನಃ ದೊಡ್ಡ ಗುಂಪಿನ ಎದುರು ಎಂತಹ ಸೂಪರ್ ಮ್ಯಾನ್‌ಗೂ ಸಾಧ್ಯವಾಗದ "ತಡೆಯುವಿಕೆ"ಯನ್ನು ವಯೋವೃದ್ಧ ಹಾಗು ಕೃಶ ಶರೀರಿಯಾದ ಅವರ ಕತೆ ಒಳ್ಳೆ 'ಟಾಮ್ ಎಂಡ್ ಜೆರ್ರಿ'ಯ ಕಥೆಯಂತೆ ಕೇಳಲಷ್ಟೇ ಸೊಗಸಾಗಿದೆ. ಒಟ್ಟಾರೆ ಹಾವೂ ಸಾಯಬಾರದು ಕೋಲೂ ಮುರೀಬಾರದು ಎನ್ನೋ ರೀತಿ ತಾವು ತಡೆದ ಹಾಗೆಯೂ ಆಗಬೇಕು ಮಸೀದಿಯೂ ಉರುಳಿಬೀಳಬೇಕೆನ್ನುವ ನಿಮ್ಮ ಮಹದಾಸೆಯೂ ಆವತ್ತು ಈಡೇರಬೇಕಿತ್ತು, ಮತ್ತೆ ಹಾಗೇ ಘಟಿಸಿತೂ ಕೂಡ.

ಸ್ವಾಮೀಜಿಯೊಬ್ಬರು ಮುಸಲ್ಮಾನ ಬಾಂಧವರಿಗಾಗಿ ಇಫ್ತಾರ್ ಆಯೋಜಿಸುವುದು ಕರ್ನಾಟಕದಲ್ಲಿ ಹೊಸ ಘಟನೆಯೇನಲ್ಲ ಬಿಡಿ. ಆದರೂ ಹದಗೆಡುತ್ತಿರುವ ಹಿಂದೂ ಮುಸ್ಲಿಮ್ ಸಾಮರಸ್ಯಕ್ಕಾಗಿ ಇಂತಹವೆಲ್ಲ ನಡೆದರೆ ತಪ್ಪೇನೂ ಇಲ್ಲ. ಮಠದೊಳಗೆ ಇಫ್ತಾರ್ ಹಾಗು ನಮಾಜಿಗೆ ಅವಕಾಶ ಒದಗಿಸುವ ಮೂಲಕ ನೀವೇ ಬೆನ್ನು ತಟ್ಟಿ ಸಲುಹಿದಂತಹ ಹಿಂದೂ ಸಂಘಟನೆಗಳದ್ದೇ ಕೆಂಗಣ್ಣಿಗೆ ನೀವು ಗುರಿಯಾದಿರಿ.

ಹಿಂದೊಮ್ಮೆ ಉಡುಪಿಯ ಬನ್ನಂಜೆ ನಾರಾಯಣ ಗುರುಮಂದಿರಕ್ಕೆ ತಾವು ಭೇಟಿ ಕೊಟ್ಟಾಗ ಅಲ್ಲಿ ಸೇರಿದ್ದ ಬಿಲ್ಲವ ಮುಖಂಡರು ನಾರಾಯಣ ಗುರುಗಳಿಗೂ ಗೌರವಿಸಲು ಹೇಳಿಕೊಂಡಾಗ "ನನ್ನ ನಿಷ್ಠೆ ಕೇವಲ ಮಧ್ವ ಮತ್ತು ಶ್ರೀಕೃಷ್ಣನಿಗಷ್ಟೇ" ಎಂದು ಜಾರಿಕೊಂಡಿದ್ದಿರಿ. ಆವತ್ತು ಹಿಂದೂ ಸಂತ ನಾರಾಯಣ ಗುರುಗಳನ್ನು ಗೌರವಿಸೋಲ್ಲ ಎಂದು ಜಿಗುಟುತನವನ್ನು ತೋರಿದವರು ಇಂದು "ಮುಸಲ್ಮಾನರು ಮಠದೊಳಗೆ ನಮಾಜ್ ಮಾಡಿದರೆ ತಪ್ಪೇನು ನಮಾಜ್ ಸಹ ದೇವರ ಪ್ರಾರ್ಥನೆಯೇ ತಾನೇ" ಎನ್ನುತ್ತಿದ್ದೀರಿ.

ಜಾನುವಾರುಗಳ ಹೆಸರಲ್ಲಿ ಅನಾಗರಿಕ ಹತ್ಯೆಗಳನ್ನು ಸಮರ್ಥಿಸುವ ತಾವು ತಮ್ಮ ಅಕ್ಕರೆಯ ಹಿಂದೂತ್ವವಾದಿ ನಾಯಕರುಗಳಿಂದ ಗೋಭಕ್ಷಕರೆಂದೇ ಕರೆಸಿಕೊಳ್ಳುವ ಈ ಇಫ್ತಾರ್ ಮುಸಲ್ಮಾನರು ಕೇವಲ ಅವರ ಚೆಡ್ಡಿ ಹಿನ್ನೆಲೆಯ ಕಾರಣಕ್ಕೆ ತಮಗೆ ಏಕಾಏಕಿ "ಸಹ್ಯ"ವೆನಿಸಲ್ಪಡುತ್ತಾರೆ. ಬ್ರಾಹ್ಮಣರಲ್ಲಿ ಮಾಧ್ವ ಮತದವರ ಮಡಿವಂತಿಕೆ, ಜಿಗುಟುತನ ಗೊತ್ತಿದ್ದದ್ದೇ. ತಮ್ಮ ಮಠದಲ್ಲಿ ಸೈದ್ಧಾಂತಿಕ ವಿರೋಧಿಯಾದ ಶಂಕರಾಚಾರ್ಯನನ್ನು ನಾಯಿನರಿಯೆಂದು ಹಳಿಯುವ ಪರಂಪರೆ ಇಂದಿಗೂ ಜಾರಿಯಲ್ಲಿದೆ. ಇಂತಹ ನೀವುಗಳು, ಏಕಾಏಕಿ ಮದರ್ ತೆರೆಸಾರ ಆತ್ಮ ದೇಹದೊಳಗೆ ಹೊಕ್ಕಂತೆ ಆಡುತ್ತಿರುವುದನ್ನು ಜೀರ್ಣಿಸಿಕೊಳ್ಳಲು ನಮ್ಮಂತವರಿಗೆ ಆಗದು ಸ್ವಾಮಿ.

ಆವತ್ತು ಸೂಲಿಬೆಲೆಯಂತವನಿಗೆ 'ಕನಕ ನಡೆ' ಹೆಸರಲ್ಲಿ ದಲಿತರು ತುಳಿದ ಉಡುಪಿಯನ್ನು ಮಠದ ಆವರಣಕ್ಕೆ ಗಂಜಲ ಹೊಯ್ದು ಸಾಂಕೇತಿಕವಾಗಿ ಶುದ್ಧೀಕರಿಸುವಂತಹ ಕೊಳಕುತನಕ್ಕೆ ಅವಕಾಶ ಮಾಡಿಕೊಟ್ಟು ದಲಿತರನ್ನು ಅವಮಾನಿಸಿದ ನಿಮ್ಮ ವೈದಿಕ ಮಡಿವಂತಿಕೆಯ ಕೊಳಕುತನ ಇಂದೇಕೆ ಇದೇ ಸೂಲಿಬೆಲೆ ವಿಷ ಕಾರಿಕೊಳ್ಳುವಂತಹ ಮುಸಲ್ಮಾನ ಸಮುದಾಯದ ಮಠದೊಳಗಿನ ಇಫ್ತಾರ್-ನಮಾಜುಗಳಿಗೆ ಅನ್ವಯವಾಗದು? ಮಠದ ಪರಿಸರಕ್ಕೇ ಕಾಲಿಡದ ದಲಿತರ ನಡೆಗೆ ಗಂಜಲವಾದರೆ ಮಠದೊಳಗೇ ಬಂದು ನಮಾಜು ಮಾಡಿದ ಸಾಬರಿಗೆ ಇನ್ನೊಂದು ನೀತಿಯೇ? ಇದೇ ಏನು ನಿಮ್ಮ 'ಅಪನಂಬಿಕೆ'ಗಳನ್ನು ಹೋಗಲಾಡಿಸುವ ಸೌಹಾರ್ದದ ಮನಸ್ಥಿತಿ?

ಮೊದಲು ಇಂತಹ ನಿಮ್ಮ ದ್ವಂದ್ವತನ ನಾಟಕಗಳನ್ನೆಲ್ಲ ಬದಿಗಿಟ್ಟು ತಮ್ಮ ಮುಖಂಡತ್ವದಲ್ಲಿಯೇ ತಮ್ಮ ಅರಿವಿಗನುಸಾರವಾಗಿಯೇ ನಡೆದಂತಹ ಅನೇಕ ರಾಷ್ಟ್ರೀಯ ಅನಾಚಾರಗಳಿಗೆಲ್ಲ ಪ್ರಾಮಾಣಿಕವಾಗಿ ವಿಷಾದ ವ್ಯಕ್ತಪಡಿಸಿ ಮುಂದುವರೆಯುವ ಮನಸ್ಸು ಮಾಡಿದರಷ್ಟೇ ನಿಮ್ಮ ನಡೆಯಲ್ಲಿನ ಪ್ರಾಮಾಣಿಕತೆಯನ್ನು ಗುರುತಿಸಲು ಸಾಧ್ಯ. ಇಲ್ಲವಾದಲ್ಲಿ ಅವೆಲ್ಲ ಮಾಮೂಲಿನಂತೆ ಬರೀ ಬೂಟಾಟಿಕೆಯ ಗುಂಪಿಗೆ ಸೇರುತ್ತವಷ್ಟೆ.

- ಓದುಗ, ಬೆಂಗಳೂರು


ಸುಳ್ಳುಬುರುಕ ಮೋದಿ


ಪ್ರಧಾನಿ ಮೋದಿ ಎಂತೆಂತಹ ದೊಡ್ಡ ಹಸಿ ಸುಳ್ಳು ಮಾತನಾಡುತ್ತಾರೆ ನೋಡಿ. ಮೊನ್ನೆ ರೇಡಿಯೋದಲ್ಲಿ ತನ್ನ ಮಂಕಿ ಬಾತ್‌ನಲ್ಲಿ ಪುರಿ ಜಗನ್ನಾಥ ರಥ ಯಾತ್ರೆಗೆ ಶುಭಾಶಯ ಕೋರುತ್ತಾ ಜಗನ್ನಾಥ ದೇವರ ಬಗ್ಗೆ ಡಾ. ಅಂಬೇಡ್ಕರರಿಗೆ ಭಾರಿ ಅಭಿಮಾನ ಇತ್ತು ಎಂಬ ಹಸಿ ಸುಳ್ಳು ಮೋದಿ ಹೇಳಿದ್ದಾರೆ. ಹೀಗೆ ಹೇಳಲು ಮುಖ್ಯ ಕಾರಣ ವೈದಿಕ ಧರ್ಮದ ಕರಿನೆರಳಿನಿಂದ ದೂರ ಸರಿಯುತ್ತಿರುವ ದಲಿತರನ್ನು ಹಾದಿ ತಪ್ಪಿಸಿ ಮತ್ತೆ ವೈದಿಕರ ಕಪಿಮುಷ್ಟಿಯಲ್ಲಿ ಬೀಳಿಸಿ ಅದರಿಂದ ತನ್ನ ಪಕ್ಷಕ್ಕೆ ರಾಜಕೀಯ ಲಾಭ ಪಡೆಯುವ ದುರುದ್ದೇಶ ಇರುವುದು ಸ್ಪಷ್ಟ. ಈ ಮೋದಿ ಯಾವಾಗ ಬಾಯಿ ತೆರೆದರೂ ಏನಾದರೊಂದು ಸುಳ್ಳು ಹೇಳಿಯೇ ಬಾಯಿ ಮುಚ್ಚುವುದು. ಬ್ರಹ್ಮಾಂಡ ಸುಳ್ಳುಗಾರ ಎಂದರೆ ಈ ಮೋದಿಯೇ ಇರಬೇಕು. "ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ" ಎಂದು ಡಾ.ಬಾಬಾಸಾಹೇಬ್ ಅಂಬೇಡ್ಕರ್‌ರವರು ಸ್ಪಷ್ಟವಾಗಿ ಹೇಳಿದ್ದು ಮತ್ತು ಬರೆದಿದ್ದು ಹತ್ತನೇ ಕ್ಲಾಸ್‌ವರೆಗೆ ಮಾತ್ರ ಕಲಿತಿರುವ ಮೋದಿಗೆ ಚೆನ್ನಾಗಿ ಗೊತ್ತಿದ್ದರೂ ಅದನ್ನು ಆತ ಮರೆಮಾಚಿರುವುದು ಕುತ್ಸಿತ ಉದ್ದೇಶದಿಂದಾಗಿಯೇ ಹೊರತು ಅಜ್ಞಾನದಿಂದ ಅಲ್ಲ. ಈ ಸುಳ್ಳಿನ ಸರದಾರ ಮೋದಿ ಆಡುವ ಪ್ರತಿಯೊಂದು ಮಾತಿನಲ್ಲೂ ಜಾತಿ ಹಾಗೂ ಮತದ ರಾಜಕೀಯ ಲೆಕ್ಕಾಚಾರ ಇದ್ದೇ ಇರುತ್ತದೆ. ಬಹುಶಃ ರಾಷ್ಟ್ರಪತಿ ಚುನಾವಣೆಯಲ್ಲಿ ದಲಿತ ಮತದ ಲೆಕ್ಕಾಚಾರ ಇಟ್ಟುಕೊಂಡು ಈತ ಅಂಬೇಡ್ಕರರ ಬಗ್ಗೆ ಇಂತಹ ಹಸಿಹಸಿ ಸುಳ್ಳು ಹೇಳಿರಬಹುದು.

ಬಿಜೆಪಿಯ ರಾಷ್ಟ್ರಪತಿ ಅಭ್ಯರ್ಥಿ ರಾಮನಾಥ ಕೋವಿಂದ ಇವರು ಕೋಲಿ ಎಂಬ ಮೀನುಗಾರ ಜಾತಿಯವರು. ಈ ಜಾತಿಯವರನ್ನು ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಪರಿಶಿಷ್ಟ ಜಾತಿ ಎಂದು ವರ್ಗೀಕರಿಸಿದ್ದರೂ ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಕೋಲಿ ಜಾತಿಯವರನ್ನು ಓಬಿಸಿ-ಹಿಂದುಳಿದ ವರ್ಗ ಎಂದು ವರ್ಗೀಕರಿಸಲಾಗಿದೆ. ಇದೇ ವರ್ಷದ ಕೊನೆಗೆ ನಡೆಯಲಿರುವ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಈ ಮೀನುಗಾರ ಜಾತಿಯ ವೋಟನ್ನು ಬಿಜೆಪಿಯೆಡೆಗೆ ತಿರುಗಿಸುವ ಉದ್ದೇಶದಿಂದ ಯೂಪಿ ಮೂಲದ ಕೋಲಿ ಜಾತಿಯವನನ್ನು ರಾಷ್ಟ್ರಪತಿ ಸ್ಥಾನಕ್ಕೆ ಮೋದಿ ಆರಿಸಿರಬಹುದು. ಕಾರಣ 500 ಕಿಮಿ ಉದ್ದದ ಸಮುದ್ರ ತೀರ ಹೊಂದಿರುವ ಗುಜರಾತಿನ ಒಟ್ಟು ಮತದಾರರಲ್ಲಿ ಕೋಲಿ ಜಾತಿಯವರು ಶೇ. 24 ಇದ್ದಾರೆ. ವಿಚಿತ್ರವೆಂದರೆ ಗುಜರಾತಿನಲ್ಲಿ ಕೋಲಿ ಜಾತಿಯವರಿಗೆ "ಹರಿಜನ ಅಥವಾ ದಲಿತ" ಎಂದು ಕರೆದರೆ ವಿಪರೀತ ಸಿಟ್ಟು ಬರುತ್ತದೆ. ಐದಾರು ವರ್ಷಗಳ ಹಿಂದೆ ಒಬ್ಬ ಬಿಹಾರಿ ಬ್ಯಾಂಕ್ ಮ್ಯಾನೇಜರ್ ಗುಜರಾತಿನ ವಲ್ಸಾಡ್ ಎಂಬಲ್ಲಿಯ ಶಾಖೆಗೆ ವರ್ಗವಾಗಿ ಬಂದಾಗ, ಅವನಿಗೆ ಅಲ್ಲಿಯ ಜಾತಿ ವ್ಯವಸ್ಥೆಯ ಬಗ್ಗೆ ಗೊತ್ತಿಲ್ಲದ್ದರಿಂದ ಒಬ್ಬ ಸ್ಥಳೀಯ ಕೋಲಿ ಜಾತಿಯವನ ಸಾಲದ ಅರ್ಜಿಯಲ್ಲಿ ಅವನನ್ನು ಎಸ್‌ಸಿ (ಪರಿಶಿಷ್ಟ) ಎಂದು ನಮೂದಿಸಿದಾಗ ಮರುದಿನ ಐವತ್ತು ಜನ ಕೋಲಿ ಜಾತಿಯವರು ಬ್ಯಾಂಕಿಗೆ ಮುತ್ತಿಗೆ ಹಾಕಿ ಬಿಹಾರಿ ಮ್ಯಾನೇಜರ್ ಮೇಲೆ ಹಲ್ಲೆ ಮಾಡಿ ಅವನಿಂದ ಕ್ಷಮೆ ಬೇಡಿಸಿದ್ದರು. ಗುಜರಾತಿ ಪತ್ರಿಕೆಗಳಲ್ಲಿ ಇದು ದೊಡ್ಡ ಸುದ್ದಿಯಾಗಿತ್ತು. ಮಹಾರಾಷ್ಟ್ರದ ಕರಾವಳಿಯಲ್ಲಿರುವ ಪನವೆಲ್ ಎಂಬ ಊರಲ್ಲಿಯೂ ಬಹುಸಂಖ್ಯಾತರಾಗಿರುವ ಈ ಕೋಲಿ ಜಾತಿಯವರನ್ನು ಒಬ್ಬ ಹೊಸಬ ಸರಕಾರಿ ಅಧಿಕಾರಿ ದಲಿತ/ಪರಿಶಿಷ್ಟ ಎಂದು ವರ್ಗೀಕರಿಸಿದ್ದಕ್ಕಾಗಿ ಮರಾಠಿ ಕೋಲಿಗಳು ಅವನಿಗೆ ಬಡಿದು ಕಳುಹಿಸಿದ್ದರು. ಗುಜರಾತ್-ಮಹಾರಾಷ್ಟ್ರದಲ್ಲಿ ಕೋಲಿ ಜಾತಿಯವರನ್ನು ದಲಿತ/ಹರಿಜನ ಎಂದು ಕರೆಯುವುದು ಘೋರ ಅವಮಾನ ಎಂದು ಈ ಮೀನುಗಾರ ಸಮುದಾಯದವರು ಭಾವಿಸುತ್ತಾರೆ. ನಮ್ಮ ಕರ್ನಾಟಕದಲ್ಲಿಯೂ ವೃತ್ತಿಯಿಂದ ಮೀನುಗಾರರಾದ ಗಂಗಮತಸ್ಥ, ಮೊಗವೀರ ಮತ್ತು ಖಾರ್ವಿ ಜಾತಿಯವರಿಗೆ ನೀವು ಅಪ್ಪಿತಪ್ಪಿ ದಲಿತ ಎಂದು ಕರೆದರೆ ಆ ಜಾತಿಯವರಿಂದ ನಿಮಗೆ ಬೈಗುಳ ಸಿಗುವುದು ಖಂಡಿತ. ಇಂತಹ ಸಾಮಾಜಿಕ ವಿಪರ್ಯಾಸಗಳು ಜಗತ್ತಿನಲ್ಲಿ ಬೇರೆ ಎಲ್ಲಿಯೂ ಇಲ್ಲ. ಕೇವಲ ರಾಜಕೀಯ ಸ್ವಾರ್ಥಕ್ಕಾಗಿ ಸಮಯಸಾಧಕ ರಾಜಕಾರಣಿಗಳು ಇಂತಹ ಗೊಂದಲಗಳನ್ನು ಸೃಷ್ಟಿಸಿರುವುದು.

- ಉದಯರಾಜ್ ಬಿ ಆಳ್ವಾ, ಕಾಟಿಪಲ್ಲ







ಭಟ್ಟನ ಜನ್ಮ ಜಾಲಾಡಿದ್ದು ಒಂದು ದಿಟ್ಟ ಹೆಜ್ಜೆ

ಕಲ್ಲಡ್ಕ ಸೈತಾನ ಭಟ್ಟನ ದುಷ್ಟಪ್ರಭಾವ ದ.ಕ. ಜಿಲ್ಲೆಯಲ್ಲಿ ಬಹಳ ಆಳವಾಗಿ ಬೇರೂರಿದೆ. ಇದಕ್ಕೆ ಕಾಂಗ್ರೆಸ್ ನಾಯಕರ ಸ್ವಾರ್ಥವೂ ಕಾರಣ. ಕೆಲವು ಕಾಂಗ್ರೆಸ್ ನಾಯಕರು ಪರಸ್ಪರ ಕಾಲೆಳೆಯುವುದಕ್ಕೆ ಭಟ್ಟನ ಪ್ರಭಾವವನ್ನು ಗುಟ್ಟಿನಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಅದೇ ಪ್ರಕಾರ ಚುನಾವಣೆಯಲ್ಲಿ ತನ್ನೆದುರು ದುರ್ಬಲ ಬಿಜೆಪಿ ಅಭ್ಯರ್ಥಿಯನ್ನು ನಿಲ್ಲಿಸಿ ತನ್ನ ಗೆಲುವಿಗೆ ನೆರವಾಗುವುದು, ಕಾಂಗ್ರೆಸ್‌ನೊಳಗೇ ಇರುವ ಇನ್ನೊಬ್ಬ ನಾಯಕನ ಸೋಲಿಗೆ ಕಾರಣವಾಗಲು ಅವನೆದುರು ಪ್ರಭಾವೀ ಅಭ್ಯರ್ಥಿಯನ್ನು ನಿಲ್ಲಿಸುವುದು ಮುಂತಾದ ಅನೇಕ ಮಸಲತ್ತುಗಳಿಗಾಗಿ ಕೆಲವು ಕಾಂಗ್ರೆಸ್ ನಾಯಕರಿಗೆ ಭಟ್ಟ ಬೇಕಾಗಿದ್ದಾನೆ. ಅದಕ್ಕಾಗಿ ಭಟ್ಟನಿಗೆ ದುಂಬಾಲು ಬಿದ್ದು ಕಪ್ಪಕಾಣಿಕೆ ಕೊಡುತ್ತಾರೆ. ಏನೇ ಅಕ್ರಮ ಮಾಡಿದರೂ ಕೇಸು ಹಾಕದಂತೆ ನೋಡಿಕೊಳ್ಳುತ್ತಾರೆ. ಭಟ್ಟ ಇಷ್ಟು ಪ್ರಬಲವಾಗಿ ಬೆಳೆಯಲು ಇದುವೇ ಮುಖ್ಯ ಕಾರಣ.

ಇವನ ಪ್ರಭಾವ ಎಷ್ಟಿದೆಯೆಂದರೆ ಭಟ್ಟನ ವಿರುದ್ಧ ದಮ್ಮೆತ್ತುವವರ ದಮ್ಮಡಗಿಸುವ ಸನ್ನದ್ಧ ಸೇನೆಯೇ ಇದೆ. ಕೆಲವು ವರ್ಷಗಳ ಹಿಂದೆ ಈ ಭಟ್ಟನ ವಿರುದ್ಧ ಬರೆದ ಸ್ಥಳೀಯ ಪತ್ರಿಕೆಯೊಂದನ್ನು ಮಾರುಕಟ್ಟೆಗೇ ಇಳಿಸದಂತೆ ಮಾಡುವಲ್ಲಿ ಭಟ್ಟನ ಕಪಿಸೇನೆ ಯಶಸ್ವಿಯಾಗಿತ್ತು.

ಹೀಗಿರುವಾಗ ಗೌರಿ ಲಂಕೇಶ್ ಅವರ ಜುಲೈ ಐದರ ಸಂಚಿಕೆಯಲ್ಲಿ ಭಟ್ಟನ ಜನ್ಮ ಜಾಲಾಡಿದ್ದು ಒಂದು ದಿಟ್ಟ ಹೆಜ್ಜೆಯಾಗಿದೆ. ಜಿಲ್ಲೆಯಲ್ಲಿ ಕೆಲವು ಸ್ಟಾಲ್‌ಗಳಿಗೆ ಭಟ್ಟನ ಪಟಾಲಂ ಆ ಸಂಚಿಕೆಯ ಪ್ರತಿಗಳನ್ನು ಮಾರಾಟ ಮಾಡದಂತೆ ಬೆದರಿಕೆಯೊಡ್ಡಿತ್ತು. ಕೆಲವರು ಹೆದರಿ ಅಡಗಿಸಿಟ್ಟದ್ದೂ ಇದೆ. ಕೆಲವರು ಗ್ರಾಹಕರಿಗೆ 'ಗೌರಿ ಲಂಕೇಶ್' ಕೊಡದೆ ಇನ್ನೊಂದನ್ನು ಕೊಟ್ಟದ್ದೂ ಇದೆ.

ಆದರೆ ಈ ಯತ್ನಗಳೆಲ್ಲಾ ವಿಫಲವಾಗಿವೆ. ಕಾರಣ ಜಾಲತಾಣಗಳಲ್ಲಿ ಅದು ಜಗದಗಲ ಹರಡಿಯಾಗಿದೆ. ಗೌರಿ ಲಂಕೇಶ್‌ಗೆ ಎಷ್ಟು ಅಭಿನಂದನೆ ಹೇಳಿದರೂ ಸಾಲದು.

- ಬಂಟ್ವಾಳದವ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/-

'ಕಿರಿಕ್'ಹಾದಿಯಲ್ಲಿ 'ರಾಜ್‌ಕುಮಾರ'

ದಿನಗಳ ಲೆಕ್ಕದಲ್ಲಿ ಹಾಗೂ ಬಜೆಟ್ ತೂಕದಲ್ಲಿ ಗೆದ್ದಿರುವ 'ರಾಜ್‌ಕುಮಾರ' ಸಿನಿಮಾ ಈಗ ಮನಗಳ ಗೆಲ್ಲುವ ಹಾದಿಯಲ್ಲಿದೆ. ಪವರ್‌ಸ್ಟಾರ್ ಪುನೀತ್ ಅಭಿನಯದ ಸಿನಿಮಾ ಶತದಿನ ಪೂರೈಸಿದ ಸಂಭ್ರಮವನ್ನು ಜುಲೈ 7ರಂದು ಅರಮನೆ ಮೈದಾನದಲ್ಲಿ ಅದ್ದೂರಿಯಾಗಿ ಆಚರಿಸಲು ಚಿತ್ರತಂಡ ಹುಮ್ಮಸ್ಸಿನಿಂದ ಅಣಿಯಾಗುತ್ತಿದೆ. ಇದೇ ಹೊತ್ತಿನಲ್ಲಿ ಚಿತ್ರದ ನಿರ್ಮಾಣ ಸಂಸ್ಥೆಯಾದ 'ಹೊಂಬಾಳೆ ಫಿಲಂಸ್' ಒಂದು ಸಾರ್ಥಕ ರೀತಿಯಲ್ಲಿ ಸಂಭ್ರಮಿಸಲು ಮುಂದಾಗಿರೋದು ವಿಶೇಷ. 'ರಾಜಕುಮಾರ' ಚಿತ್ರದ ಲಾಭಾಂಶವನ್ನು ಚಿತ್ರತಂಡಕ್ಕೂ ಹಂಚಲು ನಿರ್ಮಾಪಕರು ನಿರ್ಧರಿಸಿದ್ದಾರೆ. ಚಿತ್ರದಲ್ಲಿ ನಟಿಸಿದ ಕಲಾವಿದರು, ದುಡಿದ ತಂತ್ರಜ್ಞರು, ಕಾರ್ಮಿಕರು... ಹೀಗೆ ಪ್ರತಿಯೊಬ್ಬರಿಗೂ ಚಿತ್ರದ ಲಾಭಾಂಶದಲ್ಲಿ ಪಾಲು ನೀಡಲು ಮುಂದಾಗಿರೋದು ನಿಜಕ್ಕೂ ಸ್ವಾಗತಾರ್ಹ.



ತೆರೆ ಹಿಂದೆ ಬೆವರು ಹರಿಸುವ ತಂತ್ರಜ್ಞ ಮಂದಿಗೆ ಯಾಮಾರಿಸುವ ಕಸುಬುದಾರರೇ ಹೆಚ್ಚಾಗಿರುವ ಗಾಂಧಿನಗರದಲ್ಲಿ ಇಂತಹದ್ದೊಂದು ಪರಂಪರೆ ಹುಟ್ಟಬೇಕಾದ ಜರೂರಿತ್ತು. ಅಂದಹಾಗೆ, ಇದೇ ಕೆಲಸವನ್ನು ಕಿರಿಕ್ ಪಾರ್ಟಿ ತಂಡ ಕೂಡಾ ಮಾಡಿತ್ತು. 'ಕಿರಿಕ್ ಪಾರ್ಟಿ' ಚಿತ್ರ ಯಶಸ್ವಿ 150 ದಿನಗಳನ್ನ ಪೂರೈಸಿದಾಗ ಅದರ ನಿರ್ಮಾಪಕರೂ ಆದ ನಟ ರಕ್ಷಿತ್ ಶೆಟ್ಟಿ ಬಂದ ಹಣದಲ್ಲಿ ಕಲಾವಿದರು, ತಂತ್ರಜ್ಞರು ಮತ್ತು ಕಾರ್ಮಿಕರಿಗೆ ಒಂದಿಷ್ಟು ಹಂಚಿದ್ದರು. ಈಗ 'ರಾಜಕುಮಾರ' ಕೂಡ ಅದೇ ಹಾದಿಯಲ್ಲಿ ಸಾಗುತ್ತಿದೆ. ಗಾಂಧಿನಗರ ಇಂಥಾ ಆರೋಗ್ಯಕರ ತಿರುವಿನತ್ತ ಮಗ್ಗುಲು ಬದಲಿಸುತ್ತಿರುವುದು ಖುಷಿಯ ಸಂಗತಿ.

■ ಗಿರೀಶ್ ತಾಳಿಕಟ್ಟೆ

ಸದ್ದಿಲ್ಲದ 'ಶುದ್ಧಿ'ಗೆ ಶತಕ ಸಂಭ್ರಮ

ಕನ್ನಡ ಚಿತ್ರರಂಗದ ದುರಂತಕ್ಕೆ ಹೊಸ ಉದಾಹರಣೆಯೆಂದರೆ ಅದು 'ಶುದ್ಧಿ'. ಮಹಿಳಾ ಆಯಾಮದ ತಲ್ಲಣಗಳನ್ನು ಹೆಣೆದುಕೊಂಡ ಅದ್ಭುತ ಸಿನಿಮಾ ಇದು. ಇತ್ತೀಚಿನ ಪ್ರಯೋಗಾತ್ಮಕ ಚಿತ್ರಗಳ ಸಾಲಿಗೆ ಬೇಷರತ್ತಾಗಿ ಸೇರಿಸಬಹುದಾದ ಕಥಾಹಂದರ ಅದರದ್ದು. ಅಂಥಾ ಸಿನಿಮಾ ರಿಲೀಸ್ ಆಗಿ ನಿಧಾನಕ್ಕೆ ಪ್ರೇಕ್ಷಕರಿಗೆ ಕುದುರಿಕೊಳ್ಳುವ ಹೊತ್ತಿಗೆ ಪಕ್ಕದ 'ಬಾಹುಬಲಿ' ಸಿನಿಮಾ ಅಬ್ಬರಿಸಿ ಬೊಬ್ಬಿರಿಯಿತು. ಅದರ ಪಬ್ಲಿಸಿಟಿಯ ನಡುವೆ 'ಶುದ್ಧಿ'ಗೆ ಸಿಗಬೇಕಿದ್ದ ಪ್ರಚಾರವೇ ಸಿಗಲಿಲ್ಲ. ಆದರೇನಂತೆ ಶೋಷಿತ ಸಮಾಜವನ್ನು 'ಶುದ್ಧಿ'ಕರಿಸುವ ಮಹಿಳೆಯ ನಿಗೂಢ ಪಯಣದ ಜೊತೆ ಸಾಗುವ ಸಿನಿಮಾದ ಗೆಲುವನ್ನು ಕಿತ್ತುಕೊಳ್ಳಲು ರೊಕ್ಕಸ್ಥ 'ಬಾಹುಬಲಿ' ಕೈಯಲ್ಲಿ ಸಾಧ್ಯವಾಗಿಲ್ಲ. ಕನ್ನಡ ಸಿನಿಮಾ ಮಟ್ಟಿಗೆ ಮೈಲಿಗೆಯಂತಾಡುವ ಮಲ್ಟಿಪ್ಲೆಕ್ಸ್ ಆವರಣದಲ್ಲೇ ಶತದಿನ ಪೂರೈಸಿರುವ 'ಶುದ್ಧಿ' ಹೊಸದೊಂದು ಮೈಲಿಗಲ್ಲು ನಿರ್ಮಿಸಿದೆ.

ಮಹಿಳಾ ಶೋಷಣೆ ವಿರುದ್ಧ ನ್ಯಾಯಕ್ಕಾಗಿ ಹೋರಾಡುವ ಉತ್ತಮ ಕಥಾಹಂದರವಿರುವ ಈ ಚಿತ್ರವನ್ನು ಆದರ್ಶ್ ಎಚ್.ಈಶ್ವರಪ್ಪ ಎಂಬ ಯುವಪ್ರತಿಭೆ ಕಥೆ-ಚಿತ್ರಕಥೆ-ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದರು. ಅಂದಹಾಗೆ 'ಶುದ್ಧಿ' ಚಿತ್ರದಲ್ಲಿ ನಟ ನಿವೇದಿತಾ, ಅಮೆರಿಕ ಮೂಲದ ಲಾರೆನ್ ಸ್ಪಾರ್ಟನೊ, ಅಮೃತಾ ಕರಗದ, ಸುಧಾ ಬೆಳವಾಡಿ ಮತ್ತು ಇತರರು ನಟಿಸಿದ್ದರು. ಮಹಿಳಾ ಪ್ರಧಾನವಾದ ಈ ಚಿತ್ರ ವಿಮರ್ಶಕರಿಂದ ಉತ್ತಮ ಪ್ರಶಂಸೆ ಪಡೆದಿದ್ದಲ್ಲದೇ ಅಮೆರಿಕದಲ್ಲೂ ಬಿಡುಗಡೆ ಆಗಿತ್ತು.



'ಶುದ್ಧಿ' ಚಿತ್ರದಲ್ಲಿ ನಟಿ ನಿವೇದಿತಾ

ಕೈಗೂಡಲಿಲ್ಲ 'ಕ್ರೇಜಿ' ಕನಸು



ಕನ್ನಡದ ಕನಸುಗಾರ ರವಿಚಂದ್ರನ್‌ರ ಒಂದು ಕನಸು ಮಾತ್ರ ಕನಸಾಗೇ ಉಳಿಯುವಂತೆ ಕಾಣುತ್ತೆ. ತಮ್ಮ ಮಕ್ಕಳನ್ನು ತಮ್ಮದೇ ಬ್ಯಾನರ್‌ನಲ್ಲಿ ಸ್ಯಾಂಡಲ್‌ವುಡ್‌ಗೆ ಪರಿಚಯಿಸಬೇಕು ಅನ್ನೋದು ಕ್ರೇಜಿಸ್ಟಾರ್ ಕನಸಾಗಿತ್ತು. ಅದಕ್ಕಾಗೆ ಮೊದಲ ಮಗ ಮನೋರಂಜನ್‌ನನ್ನು ಅದ್ಧೂರಿಯಾಗಿ ಲಾಂಚ್ ಮಾಡಲು 'ರಣಧೀರ' ಸಿನಿಮಾಗೆ ಕೈಹಾಕಿದ್ದರು. ಮತ್ತೊಂದು ಪ್ರೇಮಲೋಕ ಎನ್ನುವಷ್ಟು ನಿರೀಕ್ಷೆಗಳನ್ನೂ ಅದರ ಮೇಲೆ ಹೊರಿಸಿದ್ದರು. ತಮ್ಮ 'ಕ್ರೇಜಿ'ತನಕ್ಕೆ ತಕ್ಕಂತೆ ಗ್ರ್ಯಾಂಡ್ ಮುಹೂರ್ತವನ್ನೂ ಮಾಡಿದ್ದರು. ಆದರೆ ಮುಹೂರ್ತ ಮುಗಿಸಿಕೊಂಡ ಸಿನಿಮಾ ಆಚೀಚೆ ಕದಲಾಡಲಿಲ್ಲ. ರವಿಚಂದ್ರನ್ ಪಾಲಿಗೆ ಸಿನಿಮಾ ಅಂದ್ರೆ ಧ್ಯಾನ. ಅವರ ಧ್ಯಾನವೇ ಸಿನಿಮಾವನ್ನು ಕಟ್ಟಿಹಾಕಿತು. ತನ್ನಿಂದಾಗಿ ಮಗನ ಕೆರಿಯರ್ ಹಾಳಾಗದಿರಲಿ ಎಂಬ ಕಾರಣಕ್ಕೆ ಬೇರೆಯವರ ಬ್ಯಾನರ್‌ನಲ್ಲಿ ಮಗ ನಟಿಸಲು ಒಪ್ಪಿಗೆ ಸೂಚಿಸಿದರು. ಹಾಗಾಗಿ ಜಯಣ್ಣ- ಭೋಗೇಂದ್ರ ಜೋಡಿಯ 'ಸಾಹೇಬ' ಚಿತ್ರದ ಮೂಲಕ ಮನೋರಂಜನ್ ಸಿನಿಮಾ ರಂಗಕ್ಕೆ ಕಾಲಿಡುತ್ತಿದ್ದಾರೆ. ಕಡೇಪಕ್ಷ ತಮ್ಮ ಎರಡನೇ ಮಗ ವಿಕ್ರಂನನ್ನು ಲಾಂಚ್ ಮಾಡುವ ಮೂಲಕ ಕನಸು ನನಸಾಗಿಸಿಕೊಳ್ತಾರಾ ಎಂಬ ನಿರೀಕ್ಷೆ ಇತ್ತು. ಈಗ ಅದೂ ಸಾಧ್ಯವಾಗುತ್ತಿಲ್ಲ. 'ಮಲ್ಲ', 'ಕ್ರೇಜಿಸ್ಟಾರ್' ಸಿನಿಮಾ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ ವಿಕ್ರಂ ಈಗ ನಾಯಕನಾಗು ಚೊಚ್ಚಲ ಸಿನಿಮಾಕ್ಕೆ ಸಜ್ಜಾಗಿದ್ದಾರೆ. ಈ ಚಿತ್ರವನ್ನು ನಾಗಶೇಖರ್ ನಿರ್ದೇಶಿ ಸುದ್ದಿ ಕೇಳಿಬಂದಿದೆ. ಅಂದಹಾಗೆ ಇದಕ್ಕೆ ಕಾಸು ಸುರಿಯುತ್ತಿ ಆರ್.ಎಸ್.ಪ್ರೊಡಕ್ಷನ್ ಸಂಸ್ಥೆಯ ಕನಕಪುರ ಶ್ರೀನಿವಾಸ್. ಅಲ್ಲಿಗೆ ಮಕ್ಕಳನ್ನು ಸ್ವಂತ ಬ್ಯಾನರ್‌ನಲ್ಲಿ ಲಾಂಚ್ ಮಾಡುವ ಕ್ರೇಜಿಸ್ಟಾರ್ ಕನಸಾಗೇ ಉಳಿದಂತಾಯ್ತು!

ಶಿಲ್ಪಾ ಗಣೇಶ್ ಎಂಎಲ್‌ಎ ಕ್ಯಾಂಡಿಡೇಟ್ ಆಗ್ತಾರಾ?

ಗೋಲ್ಡನ್ ಸ್ಟಾರ್ ಗಣೇಶ್ ಪತ್ನಿ ಶಿಲ್ಪಾ, ಸಕ್ರಿಯ ರಾಜಕಾರಣಕ್ಕಿಳಿಯಲು ಒಂದೊಂದೇ ಮೆಟ್ಟಿಲುಗಳು ಸಜ್ಜಾಗುತ್ತಿವೆ. ಮೊನ್ನೆ ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮದ ಹಾಟ್‌ಸೀಟ್‌ನಲ್ಲಿ ಕೂತಿದ್ದ ಗಣೇಶ್, ಶಿಲ್ಪಾ ವಿಚಾರ ಬಂದಕೂಡಲೇ ಆಕೆಯ ಸಮಾಜಮುಖಿ ಗುಣಗಾನಕ್ಕೆ ಇಳಿದದ್ದು, ಯಾರೇ ಕಷ್ಟದಲ್ಲಿ ಸಿಲುಕಿದರೂ ಸಹಾಯಕ್ಕೆ ಧಾವಿಸುವ-ಅನ್ಯಾಯವನ್ನು ಪ್ರತಿಭಟಿಸುವ ಜನನಾಯಕಿ ಇಮೇಜನ್ನು ಶಿಲ್ಪಾಗೆ ಆರೋಪಿಸಲು ಹೆಣಗಾಡಿದ್ದು ಇವೆಲ್ಲ ಆ ಪ್ರಯತ್ನದ ಭಾಗಗಳೆ ಆಗಿದ್ದವು. ಈಗಾಗಲೇ ಬಿಜೆಪಿಯಲ್ಲಿ ಗುರುತಿಸಿಕೊಂಡಿರುವ ಶಿಲ್ಪಾ ಮಹತ್ವಾಕಾಂಕ್ಷಿ ಹೆಣ್ಮಗಳು ಅನ್ನೋದ್ರಲ್ಲಿ ಎರಡು ಮಾತಿಲ್ಲ. ಗಂಡನ ಸಿನಿ ಬದುಕಿನ ಹೊರತಾಗಿ ತನ್ನದೇ ಹೋಟೆಲ್ ಉದ್ಯಮ ಮತ್ತು ಇಂಟೀರಿಯರ್ ಡೆಕೋರೇಟ್ ವ್ಯವಹಾರ ಹೊಂದಿರುವ ಸ್ವಾವಲಂಬಿ. ಆದಾಗ್ಯೂ ಶಿಲ್ಪಾಗೆ ರಾಜಕೀಯಕ್ಕೆ ಬರಬೇಕೆನ್ನುವ ಹಂಬಲ ಮೊದಲಿನಿಂದಲೂ ಇದೆ. ಆ ನಿಟ್ಟಿನಲ್ಲಿ ಆಕೆ ವ್ಯವಸ್ಥಿತವಾಗಿ ದಾಪುಗಾಲಿಡುತ್ತಿದ್ದಾರೆ. ಇತ್ತೀಚೆಗಷ್ಟೆ ನಡೆದ ನಟಿ ಅಮೂಲ್ಯಳ ಮದುವೆಯನ್ನು ಗಣೇಶ್ ದಂಪತಿ ಮುಂದೆ ನಿಂತು ಮಾಡಿಸಿದ್ದು ಕೂಡಾ ಇದೇ ಕಾರಣಕ್ಕೆ. ತಾವು ವಾಸವಿರುವ ರಾಜರಾಜೇಶ್ವರಿನಗರ ಕ್ಷೇತ್ರದಿಂದ ಸ್ಪರ್ಧಿಸಲು ಶಿಲ್ಪಾ ತಯಾರಿ ಮಾಡಿಕೊಳ್ಳುತ್ತಿದ್ದಾರೆ ಎಂಬ ರೂಮರ್‌ಗಳಿದ್ದವು. ಅಮೂಲ್ಯ ಕಲ್ಯಾಣ ಅದನ್ನು ಸಾಬೀತುಮಾಡಿದೆ. ಯಾಕಂದ್ರೆ ಅಮೂಲ್ಯಳ ಕೈಹಿಡಿದ ಜಗದೀಶ್‌ನ ತಂದೆ ಅರ್ಥಾತ್ ಅಮೂಲ್ಯ ಮಾವ ಜಿ.ಎಚ್. ರಾಮಚಂದ್ರ ಈ ಭಾಗದ ಪ್ರಭಾವಿ ರಾಜಕಾರಣಿ. ಬಿಜೆಪಿಯ ಮಾಜಿ ಕಾರ್ಪೋರೇಟರ್. ಇವರು ಸಹ ಬಿಜೆಪಿಯ ಟಿಕೆಟ್ ಆಕಾಂಕ್ಷಿಯಾಗಿದ್ದರು. ಈಗ ಅಮೂಲ್ಯ ನೆಂಟಸ್ತಿಕೆಯಿಂದ ಅವರನ್ನು ಮಿತ್ರನಾಗಿಸಿದ್ದಲ್ಲದೆ ತಮ್ಮ ಪರ ನಿಲ್ಲುವಂತೆ ಮಾಡಿಕೊಳ್ಳುವಲ್ಲಿ ಗೋಲ್ಡನ್ ದಂಪತಿ ಗೆದ್ದಿದ್ದಾರೆ. ರಾಜರಾಜೇಶ್ವರಿನಗರದ ಹಾಲಿ ಶಾಸಕರಾಗಿರುವ ಕಾಂಗ್ರೆಸ್‌ನ ಮುನಿರತ್ನ ಕೂಡಾ ಸಿನಿಮಾ ವರ್ಚಸ್ಸಿನ ಮನುಷ್ಯನಾಗಿರೋದ್ರಿಂದ ಅವರ ಎದುರು ಗೋಲ್ಡನ್ ಬಿದರ್ರಿನ ಶಿಲ್ಪಾ ಗಣೇಶ್‌ರನ್ನು ಅಭ್ಯರ್ಥಿಯಾಗಿಸಲು ಬಿಜೆಪಿ ಮನಸ್ಸು ಮಾಡಿದರೂ ಅಚ್ಚರಿಯಿಲ್ಲ!

ನಿರೀಕ್ಷೆ ಹುಟ್ಟಿಸಿದ ಹೊಸಬರ 'ಹೊಂಬಣ್ಣ'

ಇತ್ತೀಚೆಗೆ ಕನ್ನಡ ಚಿತ್ರರಂಗ ಹೊಸ ಪ್ರಯೋಗಗಳಿಗೆ ಒಡ್ಡಿಗೊ ಹೊಸಬರ ಕನಸುಗಳು ಹಳೆ ಚೌಕಟ್ಟುಗಳನ್ನು ಮೀರಿ ಅರಳುತ್ತಿವೆ. ಸಾಲಿಗೆ ಹೊಸದಾಗಿ ಸೇರ್ಪಡೆಯಾಗುತ್ತಿರೋದು 'ಹೊಂಬಣ್ಣ'. ರಕ್ಷಿತ್ ತೀ ಎಂಬ ಯುವ ನಿರ್ದೇಶಕ ರಚಿಸಿ, ನಿರ್ದೇಶಿಸಿರುವ ಈ ಸಿನಿಮಾ ರಿ ಮೊದಲೇ ನಾಲ್ಕು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡು ಗಮನ ಸೆ ಮೊನ್ನೆಮೊನ್ನೆ ಅದರ ಟ್ರೇಲರ್‌ಗೆ ಬಹುಭಾಷಾ ನಟ ಸೋನು ಸೂದ್ ಕನ್ನಡದ ಕಿಚ್ಚ ಸುದೀಪ್ ಫಿದಾ ಆದದ್ದೂ ಸುದ್ದಿಯಾಯ್ತು. ಸಿನಿಮಾ ತೆರೆಗೆ ಬರಲು ಸಜ್ಜಾಗಿ ನಿಂತಿದೆ.

ಕಾಡು ಮತ್ತು ಮನುಷ್ಯ ಬದುಕಿನ ತಾಕಲಾಟ, ಮಲೆನಾಡಿನ ಮೇಲೆ ನಾಗರಿಕ ಕಾನೂನುಗಳು ತಂದೊಡ್ಡುವ ಆಘಾತ, ಅಸಹ ಒಡಲೊಳಗೆ ಹುಟ್ಟುವ ಆಕ್ರೋಶದ ಮುಲುಕಾಟದಂತ ಸಂಕೀರ್ಣ ವಿಷ ಹಿಡಿದಿಟ್ಟುಕೊಂಡಿರುವ ಚಿತ್ರಕಥೆ ವೆನಿಜುವೆಲಾದಲ್ಲಿ ನಡೆದ 'ಫೈವ್ ಕಾಂಟ ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್'ನಲ್ಲಿ ವಿಮರ್ಶಕ ಮೆಚ್ಚುಗೆ ಗ ಅಲ್ಲದೇ 'ಬೆಸ್ಟ್ ಎಡಿಟಿಂಗ್ ಫೀಚರ್ ಫಿಲ್ಮ್', 'ಬೆಸ್ಟ್ ಡ್ರಾಮಾ ಫಿಲ್ಮ್', 'ಒರಿಜಿನಲ್ ಮ್ಯೂಸಿಕ್ ಸ್ಕೋರ್ ಫೀಚರ್ ಫಿಲ್ಮ್', 'ಸಿನಿಮಾಟೊ ಫೀಚರ್ ಫಿಲ್ಮ್' ಎಂಬ ನಾಲ್ಕು ವಿಭಾಗಗಳಲ್ಲಿ ಪ್ರಶಸ್ತಿಯನ್ನೂ ಗಿಟ್ಟಿಸಿಕೊ ಅಲ್ಲದೇ 'ಮಿಯಾಮಿ ಇಂಡಿಪೆಂಡೆಂಟ್ ಚಿತ್ರೋತ್ಸವ'ಕ್ಕೂ ಅಧಿಕೃ ಆಯ್ಕೆ ಆಗಿದೆ.

ಮಲೆನಾಡು ದಟ್ಟ ಅರಣ್ಯದ ನಡುವೆ ಮೇಕಿಂಗ್ ಆಗಿರುವ ಸಿನಿ ಹಿರಿಯ ನಟರಾದ ಸುಚೇಂದ್ರ ಪ್ರಸಾದ್, ದತ್ತಣ್ಣ ಮತ್ತು ನೀನಾಸಂ ಸೇರಿದಂತೆ ಇತರರು ಅಭಿನಯಿಸಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com